ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ನವೆಂಬರ್ 18, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 186 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999





ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಶುಕ್ರವಾರ ನಡೆದ ಪ್ರೌಢಶಾಲಾ ವಿಭಾಗದ ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ ಕಾರ್ಯಕ್ರಮದಲ್ಲಿ ಭಾಗಿಯಾಗಿರುವ ವಿದ್ಯಾರ್ಥಿಗಳು.

# ವಿದ್ಯಾರ್ಥಿ ದೆಸೆಯಲ್ಲೇ ನಾಯಕತ್ವ ಗುಣ ಬೆಳೆಸಿಕೊಳ್ಳಬೇಕು

**ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ ಉದ್ಘಾಟಿಸಿದ ಡಿಡಿಪಿಐ ಜಿ. ಕೊಟ್ರೇಶ್**

ದಾವಣಗೆರೆ, ನ.17- ಯುವ ಸಂಸತ್ ಸ್ಪರ್ಧೆಯು ಮಕ್ಕಳಲ್ಲಿ ನಾಯಕತ್ವದ ಗುಣವನ್ನು ಬೆಳೆಸುವುದರ ಜೊತೆಗೆ ಸರ್ಕಾರ ಮತ್ತು ಸಂಸದೀಯ ವ್ಯವಸ್ಥೆಯ ಬಗ್ಗೆ ಮನವರಿಕೆ ಮಾಡಿಕೊಡಲು ಸಹಕಾರಿಯಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಿ. ಕೊಟ್ರೇಶ್ ತಿಳಿಸಿದರು.

ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವಾಲಯ ಬೆಂಗಳೂರು ಇವರ ಸಹಯೋಗದೊಂದಿಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಪ್ರೌಢಶಾಲಾ ವಿಭಾಗದ ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಅನಾವರಣಗೊಳಿಸಲು ಹಾಗೂ ಅವರ ಆಲೋಚನೆಗಳನ್ನು ಮುಕ್ತವಾಗಿ ಚರ್ಚಿಸಲು ಯುವ ಸಂಸತ್ ಸ್ಪರ್ಧೆಯು ಉತ್ತಮ ವೇದಿಕೆಯಾಗಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಪ್ರತಿಬಿಂಬಿಸುವ ನಿಟ್ಟಿನಲ್ಲಿ ಯುವ ಸಂಸತ್ ಸ್ಪರ್ಧೆ ಸಹಕಾರಿಯಾಗಿದೆ. ಈ ಮಾದರಿ ಕಲಾಪದಲ್ಲಿ ಸಮಾಜದಲ್ಲಿನ ಸಮಸ್ಯೆಗಳನ್ನು ವ್ಯಕ್ತಪಡಿಸಬಹುದು ಎಂದರು.

ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಈ ಮಾದರಿ ಅಧಿವೇಶನದಲ್ಲಿ ಚರ್ಚೆಗಳು ಆರೋಗ್ಯಪೂರ್ಣವಾಗಿ ಹಾಗೂ ವಾದ-ವಿವಾದಗಳು ಸಾಮಾಜಿಕ ಬೆಳವಣಿಗೆಯ ಪರವಾಗಿರಬೇಕು. ಮಕ್ಕಳ ಮುಂದಿನ ಭವಿಷ್ಯಕ್ಕೆ ಈ ಸ್ಪರ್ಧೆಗಳು ದಾರಿದೀಪವಾಗಬೇಕು. ಜನ ಪ್ರತಿನಿಧಿಗಳನ್ನು ಸಿದ್ಧಗೊಳಿಸಲು ಯುವ ಸಂಸತ್ ಕಾರ್ಯಕ್ರಮ ಪ್ರೇರಣೆಯಾಗಬೇಕು.

ಒಬ್ಬ ಯಜಮಾನ ತನ್ನ ಕುಟುಂಬವನ್ನು ಹೇಗೆ ನಿರ್ವಹಿಸುತ್ತಾನೋ ಹಾಗೆ ರಾಜ್ಯ ಹಾಗೂ ದೇಶವನ್ನು ಮುನ್ನಡೆಸಲು ಮುಖ್ಯಮಂತ್ರಿ, ಪ್ರಧಾನ ಮಂತ್ರಿ ಇರುತ್ತಾರೆ. ಅವರ ಕಾರ್ಯವೈಖರಿ ಗಮನಿಸಿ, ಸಲಹೆಗಳನ್ನು ನೀಡಲು, ತಪ್ಪುಗಳನ್ನು ತಿದ್ದಲು ವಿರೋಧ ಪಕ್ಷಗಳಿರುತ್ತವೆ ಎಂದು ಅವರು ಹೇಳಿದರು.

ವಿಷಯ ಪರಿವೀಕ್ಷಕರಾದ ಶಶಿಕಲಾ, ವಸಂತ ಕುಮಾರಿ, ತೀರ್ಪುಗಾರರಾದ ಮಂಜುನಾಥ್, ಪ್ರಭು ಕೆ.ಸಿ, ಕರಿಯಪ್ಪ ಜಿ.ಆರ್ ಉಪಸ್ಥಿತರಿದ್ದರು.

## ಬಹುಮಾನ ವಿತರಣೆ

**ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ದಾವಣಗೆರೆ ಉತ್ತರ ವಲಯದ ಮೆಳ್ಳೇಕಟ್ಟೆ ಸರ್ಕಾರಿ ಪ್ರೌಢಶಾಲೆಯ ಮೇಘನ ಬಿ.ಟಿ ಪ್ರಥಮ ಸ್ಥಾನ, ಹರಿಹರ ತಾಲ್ಲೂಕಿನ ಹಾಲಿವಾಣ ಸರ್ಕಾರಿ ಪ್ರೌಢಶಾಲೆಯ ಗಾಯತ್ರಿ ಕೆ.ಎಂ ದ್ವಿತೀಯ ಸ್ಥಾನ ಹಾಗೂ ತೃತೀಯ ಸ್ಥಾನ ಪಡೆದ ಹೊನ್ನಾಳಿ ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆಯ ದ್ರಾಕ್ಷಾಯಣಿ ಎಂಬ ವಿದ್ಯಾರ್ಥಿಗಳಿಗೆ ನಗದು ಬಹುಮಾನ ವಿತರಿಸಲಾಯಿತು.**

# ಅಶೋಕ ವಿಪಕ್ಷ ನಾಯಕ

## ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಸರ್ವಾನುಮತದ ಆಯ್ಕೆ



ಬೆಂಗಳೂರು, ನ. 17 - ಮಾಜಿ ಉಪಮುಖ್ಯಮಂತ್ರಿ, ಬಿಜೆಪಿಯ ಹಿರಿಯ ಶಾಸಕ ಆರ್.ಅಶೋಕ್ ವಿಧಾನಸಭೆಯ ಪ್ರತಿಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಾರೆ.

ಇಂದು ಸಂಜೆ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಅಶೋಕ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗಾಗಿ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ದುಷ್ಯಂತ್ ಕುಮಾರ್ ಗೌತಮ್ ಅವರನ್ನು ವರಿಷ್ಠರು ವೀಕ್ಷಕರಾಗಿ ಕಳುಹಿಸಿದ್ದರು.

ಶಾಸಕಾಂಗ ಪಕ್ಷದ ಸಭೆಗೂ ಮುನ್ನ ವೀಕ್ಷಕರು ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಈ ಸಂಬಂಧ ಚರ್ಚೆ ನಡೆಸಿದ್ದರು.

ತದನಂತರ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ ಕೆಲವು ಮುಖಂಡರನ್ನು ಕರೆಸಿಕೊಂಡು ಅಭ್ಯರ್ಥಿ ಆಯ್ಕೆ ಸಂಬಂಧ ಹಾಗೂ ಲೋಕಸಭಾ ಚುನಾವಣೆ ಸಿದ್ಧತೆ ಬಗ್ಗೆಯೂ ಚರ್ಚೆ ಮಾಡಿದರು.

ಬಹುತೇಕ ನಾಯಕರು ಹಿರಿಯ ನಾಯಕ ಅಶೋಕ್ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡುವ ಕುರಿತು ತಮ್ಮ ಅಭಿಪ್ರಾಯ, ಸಲಹೆ ನೀಡಿದರು.

ನಂತರ ಶಾಸಕಾಂಗ ಸಭೆಯಲ್ಲಿ ದುಷ್ಯಂತ್ ಕುಮಾರ್ ಗೌತಮ್, ವರಿಷ್ಠರ ಸೂಚನೆಯಂತೆ ನಾಯಕನ ಆಯ್ಕೆಗೆ ಅಭಿಪ್ರಾಯ ಪಡೆದಿದ್ದೇವೆ. ಮಾಜಿ ಉಪಮುಖ್ಯಮಂತ್ರಿ ಅಶೋಕ್ ಅವರನ್ನು ಪ್ರತಿಪಕ್ಷದ ನಾಯಕರಾಗಿ ಆಯ್ಕೆ ಮಾಡಲು ಒಮ್ಮತಾಭಿಪ್ರಾಯ ವ್ಯಕ್ತವಾಗಿದೆ ಎಂದು ತಿಳಿಸಿದರು.

ಕಳೆದ 6 ತಿಂಗಳಿಂದ ಬಿಜೆಪಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಮಾಡದೆ, ಟೀಕೆಗೆ ಒಳಗಾಗಿದ್ದ ಪಕ್ಷದ ವರಿಷ್ಠರು, ಇದೀಗ ರಾಜ್ಯಾಧ್ಯಕ್ಷರನ್ನಾಗಿ ಬಿ.ವೈ. ವಿಜಯೇಂದ್ರ ಅವರನ್ನು ನೇಮಕ ಮಾಡಿದ ಒಂದು ವಾರದಲ್ಲೇ ಪ್ರತಿಪಕ್ಷದ ನಾಯಕನನ್ನೂ ಆಯ್ಕೆ ಮಾಡಿದೆ.

ಅಶೋಕ್ ನೇಮಕದಿಂದ ಯಡಿಯೂರಪ್ಪ ಪಕ್ಷದಲ್ಲಿ ಮತ್ತೆ ಮೇಲುಗೈ ಸಾಧಿಸಿದ್ದಾರೆ. ಸದಾ ಅವರ ಬಣದಲ್ಲೇ ಗುರುತಿಸಿಕೊಂಡಿದ್ದ ಅಶೋಕ್‌ಗೆ ರಾಷ್ಟ್ರಮಟ್ಟದಲ್ಲಿ ಕೆಲವರ ವಿರೋಧ ಇದ್ದರೂ ಜೆಡಿಎಸ್ ಜೊತೆಗಿನ ಮೈತ್ರಿಗೆ ಬಲ ಕೊಡಲು ಅಂತಿಮವಾಗಿ ಇವರನ್ನೇ ಆಯ್ಕೆ ಮಾಡಲಾಗಿದೆ ಎನ್ನಲಾಗಿದೆ.

ಹೆಚ್.ಡಿ.ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ, ಸದಾನಂದ ಗೌಡ, ಜಗದೀಶ್ ಶೆಟ್ಟರ್ ಹಾಗೂ ಬಸವರಾಜ ಬೊಮ್ಮಾಯಿ ಅವರ ಸಂಪುಟದಲ್ಲಿ ಉಪಮುಖ್ಯಮಂತ್ರಿಯಾಗಿ, ಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ.

ವಿಧಾನಸಭಾ ಕ್ಷೇತ್ರಗಳ ಪುನರ್ ವಿಂಗಡಣೆಗೂ ಮುನ್ನ ಉತ್ತರಹಳ್ಳಿ ಕ್ಷೇತ್ರದಿಂದಲೂ ನಂತರ ಪದ್ಮನಾಭ ನಗರ ಕ್ಷೇತ್ರದಿಂದ ಅಶೋಕ್ ಅವರು ಸತತವಾಗಿ ಏಳು ಬಾರಿ ವಿಧಾನಸಭೆ ಪ್ರವೇಶಿಸಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಕನಕಪುರ ಹಾಗೂ ಪದ್ಮನಾಭನಗರದಿಂದ ಕಣಕ್ಕಿಳಿದು ಶಿವಕುಮಾರ್ ವಿರುದ್ಧ ಸೋತು, ತಮ್ಮ ಹಳೆಯ ಕ್ಷೇತ್ರವನ್ನು ಉಳಿಸಿಕೊಂಡಿದ್ದರು. ಬಸವರಾಜ ಬೊಮ್ಮಾಯಿ ಅವರನ್ನೇ ಈ ಸ್ಥಾನಕ್ಕೆ ತರಬೇಕೆಂಬ ಚರ್ಚೆ ನಡೆದಿತ್ತು, (4ನೇ ಪುಟಕ್ಕೆ)

# ಖಾಸಗಿಯಲ್ಲಿ 75% ಮೀಸಲಾತಿ ಹರಿಯಾಣ ಕಾಯ್ದೆ ಅಸಿಂಧು

ಚಂಡೀಘಡ, ನ. 17 – ಖಾಸಗಿ ವಲಯದಲ್ಲಿ ಶೇ.75ರಷ್ಟು ಮೀಸಲಾತಿ ಕಲ್ಪಿಸಿ ಹರಿಯಾಣ ಸರ್ಕಾರ ಜಾರಿಗೆ ತಂದಿದ್ದ ಕಾಯ್ದೆಯನ್ನು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ತಳ್ಳಿ ಹಾಕಿದೆ.

ನ್ಯಾಯಮೂರ್ತಿಗಳಾದ ಜಿ.ಎಸ್. ಸಂಧವಾಲಿಯ ಹಾಗೂ ಹರ್‌ಪ್ರೀತ್ ಕೌರ್‌ವ್ ಜೀವನ್ ಅವರನ್ನು ಒಳಗೊಂಡ ಪೀಠ ತೀರ್ಪು ನೀಡಿದ್ದು, ಹರಿಯಾಣದವರಿಗಾಗಿಯೇ ಶೇ.75ರಷ್ಟು ಹುದ್ದೆ ಕಾಯ್ದಿರಿಸಬೇಕು ಎಂಬ ಇಡೀ ಕಾಯ್ದೆಯನ್ನು ತಳ್ಳಿ ಹಾಕಿದೆ.

ಹರಿಯಾಣದ ಸ್ಥಳೀಯರಿಗೆ ಶೇ.75ರಷ್ಟು ಖಾಸಗಿ ಹುದ್ದೆ ಕಾಯ್ದಿರಿಸಬೇಕು ಎಂಬುದು ಸಂವಿಧಾನದ 14 ಹಾಗೂ 19ನೇ ವಿಧಿಗಳ ಉಲ್ಲಂಘನೆಯಾಗಿದೆ ಎಂದು ಹಿರಿಯ ವಕೀಲ ಅಕ್ಷಯ್ ಭಾನ್ ಸೇರಿದಂತೆ, ಹಲವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು. ಖಾಸಗಿ ವಲಯದಲ್ಲಿ 30 ಸಾವಿರ ರೂ.ಗಳವರೆಗೆ ವೇತನ ಇಲ್ಲವೇ ಕೂಲಿ ಪಡೆಯುವ ಹುದ್ದೆಗಳಲ್ಲಿ ಶೇ.75ರಷ್ಟನ್ನು ಹರಿಯಾಣದವರಿಗೇ ಮೀಸಲಿಡಬೇಕು ಎಂದು ರಾಜ್ಯ ಸರ್ಕಾರ 2020ರಲ್ಲಿ ಕಾಯ್ದೆ ರೂಪಿಸಿತ್ತು.

ಹತ್ತಕ್ಕಿಂತ ಹೆಚ್ಚು ಜನರನ್ನು ನೇಮಿಸಿಕೊಳ್ಳುವ ಕಂಪನಿ, ಸೊಸೈಟಿ, ಟ್ರಸ್ಟ್, ಉದ್ಯಮಗಳು ಮತ್ತಿತರೆ ಸಂಸ್ಥೆಗಳು ಶೇ.75ರಷ್ಟು (2ನೇ ಪುಟಕ್ಕೆ)

# ಜೆಡಿಎಸ್‌ನಿಂದ ಇಬ್ರಾಹಿಂ ಅಮಾನತ್ತು



ಬೆಂಗಳೂರು, ನ. 17 - ಜೆಡಿಎಸ್‌ನ ಮಾಜಿ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರನ್ನು ಜೆಡಿಎಸ್ ವರಿಷ್ಠ ಹಾಗೂ ಮಾಜಿ ಅಧ್ಯಕ್ಷ ಹೆಚ್.ಡಿ. ದೇವೇಗೌಡ ಅವರು ಶುಕ್ರವಾರ ಜೆಡಿಎಸ್ ಪಕ್ಷದಿಂದ ಅಮಾನತ್ತು ಮಾಡಿದ್ದಾರೆ.

ಇಬ್ರಾಹಿಂ ಅವರು ಜೆಡಿಎಸ್ ರಾಜ್ಯಾಧ್ಯಕ್ಷರಾಗಿದ್ದರು. ಆದರೆ, ಬಿಜೆಪಿ ನೇತೃತ್ವದ ಎನ್‌ಡಿಎಗೆ ಜೆಡಿ(ಎಸ್) ಸೇರ್ಪಡೆಗೊಂಡಿದ್ದರಿಂದ ತೀವ್ರ ಅಸಮಾಧಾನಗೊಂಡಿದ್ದ ಇಬ್ರಾಹಿಂ, ಈ ಕ್ರಮವನ್ನು ವಿರೋಧಿಸಿದ್ದೂ ಅಲ್ಲದೆ ಮೈತ್ರಿ ವಿರುದ್ಧ ಸಾರ್ವಜನಿಕವಾಗಿ ಮಾತನಾಡಿದ್ದರು. ನಂತರ ದೇವೇಗೌಡರು ಇಡೀ ರಾಜ್ಯ ಕಾರ್ಯಕಾರಿಣಿಯನ್ನು ವಿಸರ್ಜಿಸಿದ್ದರು. ಇದರ (2ನೇ ಪುಟಕ್ಕೆ)

# ಅಕ್ರಮ ವಿದ್ಯುತ್ ಸಂಪರ್ಕ ದಂಡ ಕಟ್ಟಿದ ಕುಮಾರಸ್ವಾಮಿ



**ಬೆಸ್ಕಾಂ ದಂಡದಲ್ಲೇ ಲೋಪವಿದೆ ಎಂದೂ ಆರೋಪ**

ಬೆಂಗಳೂರು, ನ. 17 - ದೀಪಾವಳಿ ಸಂದರ್ಭದಲ್ಲಿ ಕಂಬದಿಂದ ಅಕ್ರಮ ವಿದ್ಯುತ್ ಸಂಪರ್ಕ ಪಡೆದ ಆರೋಪದ ಹಿನ್ನೆಲೆಯಲ್ಲಿ ಬೆಸ್ಕಾಂ ವಿಚಕ್ಷಣಾ ದಳ ತಮಗೆ ವಿಧಿಸಿದ್ದ 68,526 ರೂ. ದಂಡವನ್ನು ಪಾವತಿ ಮಾಡಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ತಿಳಿಸಿದ್ದಾರೆ.

ಬೆಸ್ಕಾಂ ವಿಧಿಸಿರುವ ದಂಡದ ಮೊತ್ತ ಲೋಪದಿಂದ ಕೂಡಿದ್ದು, ಈ ಬಗ್ಗೆ ತಮಗೆ ಸ್ಪಷ್ಟನೆ ಕೊಡಬೇಕು ಎಂದು ಅವರು ಇಂಧನ ಇಲಾಖೆಯನ್ನು ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆ.ಪಿ.ನಗರದ ತಮ್ಮ ಮನೆಗೆ ಕಂಬದಿಂದ ಅಕ್ರಮ ವಿದ್ಯುತ್ ಪಡೆದಿರುವುದಕ್ಕೆ ಬೆಸ್ಕಾಂ ವಿಚಕ್ಷಣಾ ದಳ ವಿಧಿಸಿರುವ ದಂಡವೇ ಅಕ್ರಮ ಎಂದು ಆರೋಪ ಮಾಡಿದ್ದಾರೆ.

ನನ್ನ ಮನೆಗೆ ನಾನು 33 ಕೆವಿ ಅನುಮತಿ ಪಡೆದಿದ್ದೇನೆ, ವಿದ್ಯುತ್ ಕಳವು ಆರೋಪದಲ್ಲಿ 2.5 ಕೆವಿ ವಿದ್ಯುತ್ ಪಡೆಯಲಾಗಿದೆ ಎಂದು ಬೆಸ್ಕಾಂ ಹೇಳಿದೆ. ಅಸಲಿಗೆ ಒಂದು ಕೆವಿ ವಿದ್ಯುತ್ ಮಾತ್ರ ನಮ್ಮ ಮನೆಯ (2ನೇ ಪುಟಕ್ಕೆ)

# ಡೀಪ್‌ಫೇಕ್ ದುರ್ಬಳಕೆ ಪ್ರಧಾನಿ ಕಳವಳ

ನವದೆಹಲಿ, ನ. 17 - ಡೀಪ್‌ಫೇಕ್‌ಗಳನ್ನು ರೂಪಿಸಲು ಕೃತಕ ಬುದ್ಧಿವಂತಿಕೆ ದುರ್ಬಳಕೆಯಾಗುತ್ತಿರುವ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಕಳವಳ ವ್ಯಕ್ತಪಡಿಸಿದ್ದು, ಇದು ದೊಡ್ಡ ಬಿಕ್ಕಟ್ಟಿಗೆ ಕಾರಣವಾಗಬಹುದು. ಈ ಬಗ್ಗೆ ಮಾಧ್ಯಮಗಳು ಅರಿವು ಮೂಡಿಸಬೇಕು ಎಂದು ಕರೆ ನೀಡಿದ್ದಾರೆ.

ಬಿಜೆಪಿಯ ದೀಪಾವಳಿ ಮಿಲನ ಕಾರ್ಯಕ್ರಮದಲ್ಲಿ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಶಾಲಾ ದಿನಗಳ ನಂತರದಿಂದಲೂ ನಾನು ಗಾರ್ಬಾ ಉತ್ಸವದಲ್ಲಿ ಪಾಲ್ಗೊಂಡಿಲ್ಲ. ಆದರೂ, ನಾನು ಗಾರ್ಬಾದಲ್ಲಿ ಹಾಡು ಹೇಳುವಂತೆ ತೋರಿಸುವ ವಿಡಿಯೋ ಒಂದನ್ನು ಇತ್ತೀಚೆಗೆ ನೋಡಿದ್ದೆ. ನನ್ನನ್ನು ಪ್ರೀತಿಸುವವರೂ ಸಹ ಈ ವಿಡಿಯೋ ಫಾರ್ವರ್ಡ್ ಮಾಡಿದ್ದರು ಎಂದು ತಮಾಷೆಯಾಗಿ ಹೇಳಿದರು. ಭಾರತದಂತಹ ವೈವಿಧ್ಯತೆಯ ಸಮಾಜದಲ್ಲಿ ಡೀಪ್ ಫೇಕ್‌ಗಳು ದೊಡ್ಡ (4ನೇ ಪುಟಕ್ಕೆ)

# 13 ಸಂಸತ್ ಕ್ಷೇತ್ರಗಳಿಗೆ ಹೊಸಬರನ್ನು ಕಣಕ್ಕಿಳಿಸಲು ಬಿಜೆಪಿ ವರಿಷ್ಠರ ಒಲವು

**ಕಳೆದ ವಿಧಾನಸಭಾ ಚುನಾವಣೆಯಲ್ಲಿ 75 ಹೊಸ ಮುಖಗಳನ್ನು ಕಣಕ್ಕಿಳಿಸಿ ನಡೆಸಿದ ಪ್ರಯೋಗ ವಿಫಲವಾಗಿದ್ದರೂ, ಬಿಜೆಪಿ ಮತ್ತೆ ಅದೇ ಪ್ರಯೋಗವನ್ನು ಲೋಕಸಭಾ ಚುನಾವಣೆಯಲ್ಲೂ ಮಾಡಲು ಮುಂದಾಗಿದೆ.**

ಬೆಂಗಳೂರು, ನ. 17 - ಕೇಂದ್ರದ ಮಾಜಿ ಸಚಿವ ವಿ. ಶ್ರೀನಿವಾಸ ಪ್ರಸಾದ್, ಅನಂತ್ ಕುಮಾರ್ ಹೆಗಡೆ ಸೇರಿದಂತೆ ರಾಜ್ಯದ 13 ಹಾಲಿ ಸಂಸದರ ಕ್ಷೇತ್ರಗಳಿಗೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಹೊಸ ಮುಖಗಳ ಪರಿಚಯಕ್ಕೆ ಬಿಜೆಪಿ ವರಿಷ್ಠರು ಮುಂದಾಗಿದ್ದಾರೆ.

ಈಗಾಗಲೇ ಕೆಲವರು ಚುನಾವಣಾ ನಿವೃತ್ತಿ ಘೋಷಣೆ ಮಾಡಿದ್ದು, ಮತ್ತೆ ಕೆಲವರಿಗೆ ಪಕ್ಷದ ನಿಯಮದ ಪ್ರಕಾರ 75ರ ವಯೋಮಿತಿ ಕಣಕ್ಕೆ ಇಳಿಯಲು ಅಡ್ಡಿ ಬರುತ್ತದೆ.

ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳದೆ, ಕ್ಷೇತ್ರದಲ್ಲಿ ಜನರಿಂದ ದೂರ ಉಳಿದವರನ್ನೂ ಕೈಬಿಟ್ಟು ಹೊಸಬರಿಗೆ ಅವಕಾಶ ಮಾಡಿಕೊಡಲು ಪಕ್ಷ ಮುಂದಾಗಿದೆ.

2024ರ ಏಪ್ರಿಲ್-ಮೇನಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ರಾಜ್ಯದ 28 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆ ಸಂಬಂಧ ಈಗಾಗಲೇ ನಾಲ್ಕು ಸಮೀಕ್ಷೆಗಳನ್ನು ಬಿಜೆಪಿ ರಾಷ್ಟ್ರೀಯ ಘಟಕ ನಡೆಸಿದ್ದು, ಅವು ಈಗಾಗಲೇ ಪ್ರಾಥಮಿಕ ವರದಿ ನೀಡಿವೆ.

ಪಕ್ಷದ ವಿವಿಧ ಸಂಘಟನೆಗಳು ಮತ್ತು ಸಮೀಕ್ಷೆಗಳ ವರದಿ ಆಧಾರದ ಮೇಲೆ ಹಾಲಿ 13 ಮಂದಿಗೆ ಕೊಕ್ ಕೊಡುವ ತೀರ್ಮಾನಕ್ಕೆ ಬರಲಾಗಿದೆ. ಜೆಡಿಎಸ್ ಪಕ್ಷ (4ನೇ ಪುಟಕ್ಕೆ)

# ಆರ್‌ಜಿಎಸ್, ನಿಶಾನಿಮಠ್‌ಗೆ 'ಸಹಕಾರ ರತ್ನ' ಪ್ರಶಸ್ತಿ





ದಾವಣಗೆರೆ, ನ.17 - ಕರ್ನಾಟಕ ಸರ್ಕಾರವು ಪ್ರತಿ ವರ್ಷ ನಡೆಸುವ ಅಖಿಲ ಭಾರತ ಸಹಕಾರ ಸಪ್ತಾಹದ ಸಂದರ್ಭದಲ್ಲಿ ಸಹಕಾರ ಕ್ಷೇತ್ರದಲ್ಲಿನ ಅನುಪಮ ಸೇವೆಗಾಗಿ ಮಹನೀಯರಿಗೆ ಕರ್ನಾಟಕ ಸರ್ಕಾರ ಕೊಡಮಾಡುವ 'ಸಹಕಾರ ರತ್ನ' ಪ್ರಶಸ್ತಿಗೆ ದಾವಣಗೆರೆ ಜಿಲ್ಲೆಯಿಂದ ಇಬ್ಬರು ಭಾಜನರಾಗಿದ್ದಾರೆ.

ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ನಿರಂಜನ್ ನಿಶಾನಿಮಠ್ ಮತ್ತು ಶ್ರೀ ಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ರಾಜನಹಳ್ಳಿ ಜಿ. ಶ್ರೀನಿವಾಸಮೂರ್ತಿ ಅವರುಗಳು 'ಸಹಕಾರ ರತ್ನ' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ವಿಜಯಪುರದ ವಿಜಯಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಆವರಣದಲ್ಲಿ ಇದೇ ದಿನಾಂಕ 20ರ ಸೋಮವಾರ ಬೆಳಿಗ್ಗೆ 9 ಗಂಟೆಗೆ ಏರ್ಪಾಡಾಗಿರುವ 70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ವಿಜೇತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

# ಸ್ಥಳೀಯರಿಗೆ ಉದ್ಯೋಗ ಮೀಸಲು ಪಕ್ಷಪಾತಿ

ಚಂಡೀಘಡ, ನ. 17 – ಖಾಸಗಿ ವಲಯದವರು ತಮ್ಮ ರಾಜ್ಯದವರಿಗಷ್ಟೇ ಉದ್ಯೋಗ ನೀಡಬೇಕು ಎಂದು ಕಾಯ್ದೆ ರೂಪಿಸುತ್ತಾ ಹೊರಟರೆ, ದೇಶಾದ್ಯಂತ ಕೃತಕ ಗೋಡೆಗಳು ನಿರ್ಮಾಣವಾಗುತ್ತವೆ ಎಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ತಿಳಿಸಿದೆ.

ಹೈಕೋರ್ಟ್ ನ್ಯಾಯಮೂರ್ತಿಗಳಾದ ಜಿ.ಎಸ್. ಸಂಧವಾಲಿಯ ಹಾಗೂ ಹರ್‌ಪ್ರೀತ್ ಕೌರ್ ಜೀವನ್ ಅವರ ಪೀಠ, ಹರಿಯಾಣ ಸರ್ಕಾರದ ಸ್ಥಳೀಯ ಅಭ್ಯರ್ಥಿಗಳಿಗೆ ಉದ್ಯೋಗ ಕಾಯ್ದೆ, 2020 ಅನ್ನು ಸಂವಿಧಾನ ಬಾಹಿರ ಎಂದು ರದ್ದುಗೊಳಿಸುವ ತೀರ್ಪಿನಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ಈ ಕಾಯ್ದೆಯ ಮೂಲಕ ಹರಿಯಾಣ ಸರ್ಕಾರ, ಖಾಸಗಿ ವಲಯದ ಶೇ.75ರಷ್ಟು (4ನೇ ಪುಟಕ್ಕೆ)

# ಕೈಗಾರಿಕಾ ಸಹಭಾಗಿತ್ವದಿಂದಲೇ ಕುಶಲ ಇಂಜಿನಿಯರ್

## ಕೈಗಾರಿಕೋದ್ಯಮಿಗಳ ಸಭೆಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ. ಕುಲಪತಿ ಡಾ. ಎಸ್. ವಿದ್ಯಾಶಂಕರ್

ದಾವಣಗೆರೆ, ನ. 17 – ಕೈಗಾರಿಕೆಗಳ ಸಹಭಾಗಿತ್ವದಿಂದ ಕುಶಲ ಇಂಜಿನಿಯರ್‌ಗಳನ್ನು ರೂಪಿಸಲು ಸಾಧ್ಯ. ಹೀಗಾಗಿ ಇನ್ಫೋಸಿಸ್‌ನಂತಹ ದೈತ್ಯ ಕಂಪನಿಗಳಿಂದ ಹಿಡಿದು, ದಾವಣಗೆರೆ ಹಂತದ ಮಧ್ಯಮ ಹಾಗೂ ಸಣ್ಣ ಉದ್ಯಮಗಳವರೆಗೆ ಕೈಗಾರಿಕಾ ಸಹಭಾಗಿತ್ವಕ್ಕೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಕ್ರಮ ತೆಗೆದುಕೊಳ್ಳುತ್ತಿದೆ ಎಂದು ವಿ.ವಿ. ಕುಲಪತಿ ಡಾ. ಎಸ್. ವಿದ್ಯಾಶಂಕರ್ ತಿಳಿಸಿದರು.

ವಿ.ಟಿ.ಯು., ವಿಶ್ವೇಶ್ವರಯ್ಯ ಸಂಶೋಧನಾ ಹಾಗೂ ಆವಿಷ್ಕಾರ ಪ್ರತಿಷ್ಠಾನ ಹಾಗೂ ಯು.ಬಿ.ಡಿ.ಟಿ. ಕಾಲೇಜುಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಮಧ್ಯ ಕರ್ನಾಟಕ ಕೈಗಾರಿಕೋದ್ಯಮಿಗಳ ಸಭೆಯನ್ನು ಆನ್‌ಲೈನ್‌ನಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ ಅಂಡ್ ಟಿ, ಟಿ.ಸಿ.ಎಸ್. ಹಾಗೂ ಇನ್ಫೋಸಿಸ್ ಸೇರಿದಂತೆ 50 ಬೃಹತ್ ಕಂಪನಿಗಳ ಜೊತೆ ಈಗಾಗಲೇ ವಿ.ಟಿ.ಯು. ಒಪ್ಪಂದ ಮಾಡಿಕೊಂಡಿದೆ. 3,500 ಇಂಜಿನಿಯರಿಂಗ್ ವಿದ್ಯಾರ್ಥಿಗಳು ಈ ಸಹಭಾಗಿತ್ವದ ಮೂಲಕ ಹಾನರ್ಸ್ ಹಾಗೂ



ಮೈನರ್ಸ್ ಪ್ರಮಾಣ ಪತ್ರ ಪಡೆಯುತ್ತಿದ್ದಾರೆ ಎಂದವರು ಹೇಳಿದರು.

ಅದೇ ರೀತಿ ದಾವಣಗೆರೆ ಹಂತದಲ್ಲೂ ಕೈಗಾರಿಕೆಗಳ ಜೊತೆ ಸಹಭಾಗಿತ್ವ ಮಾಡಿಕೊಳ್ಳಲಾಗುವುದು. ದೇಶದ ಶೇ.60ರಷ್ಟು ಕೈಗಾರಿಕಾ ಉತ್ಪನ್ನಗಳು ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ಯಮಗಳಿಂದ ಬರುತ್ತಿದೆ. ಹೀಗಾಗಿ ಪ್ರತಿ ಜಿಲ್ಲೆಯಲ್ಲೂ ಉದ್ಯಮಗಳ ಜೊತೆ ಸಂವಾದ ನಡೆಸಲಾಗುತ್ತಿದೆ ಎಂದು ವಿದ್ಯಾಶಂಕರ್ ಹೇಳಿದರು.

ಪ್ರತಿಯೊಂದು ಕೈಗಾರಿಕೆಯೂ ತನ್ನದೇ ಆದ ಅಗತ್ಯ ಹೊಂದಿರುತ್ತದೆ. ಪ್ರತಿ ಕೈಗಾರಿಕೆಗಾಗಿ ಪ್ರತ್ಯೇಕ ಬೋಧನೆ ಮಾಡಲಾಗದು. ಹೀಗಾಗಿ ಕೈಗಾರಿಕಾ ಸಹಭಾಗಿತ್ವದ ಮೂಲಕ, ಉದ್ಯಮಗಳ ಅಗತ್ಯ ರೀತಿಯ ಇಂಜಿನಿಯರ್‌ಗಳನ್ನು ರೂಪಿಸಲು ಸಾಧ್ಯ ಎಂದವರು ಹೇಳಿದರು.

ಬೆಳಗಾವಿಯ ವಿ.ವಿ. ಕ್ಯಾಂಪಸ್‌ನಲ್ಲಿ 2 ಲಕ್ಷ ಚದರಡಿ ಪ್ರದೇಶದಲ್ಲಿ ಯಾಂತ್ರಿಕ ಘಟಕವನ್ನು ತೆರೆಯಲಾಗಿದೆ. ಇಲ್ಲಿ ಕೈಗಾರಿಕೆಗಳಿಗೆ ಅಗತ್ಯ ಪರಿಹಾರ ನೀಡಲಾಗುತ್ತಿದೆ. ಕೆಲ ಉತ್ಪನ್ನಗಳು ಹೊರಗಡೆಗಿಂತ ಕಡಿಮೆ ವೆಚ್ಚದಲ್ಲಿ ರೂಪುಗೊಳ್ಳುತ್ತಿವೆ. ಕೈಗಾರಿಕೆಗಳು ಕೈ (4ನೇ ಪುಟಕ್ಕೆ)

### ಬೆಳಿಗ್ಗೆ ತರಗತಿ, ಮಧ್ಯಾಹ್ನ ಕೈಗಾರಿಕಾ ಕಲಿಕೆ


**ಕಾಲೇಜಿನ ಕೋಣೆಯೊಳಗೆ ಸೀಮಿತವಾಗಿ ಇಂಜಿನಿಯರಿಂಗ್ ಕಲಿಯುವ ಕಾಲ ಈಗ ಮುಗಿದಿದೆ. ಬೆಳಿಗ್ಗೆ ತರಗತಿಯಲ್ಲಿ ಕಲಿತರೆ, ಮಧ್ಯಾಹ್ನ ಕೈಗಾರಿಕೆಗಳಲ್ಲಿ ಪ್ರಾಯೋಗಿಕ ಕಲಿಕೆ ನಡೆಯಬೇಕಿದೆ. ಇದಕ್ಕಾಗಿ ದಾವಣಗೆರೆಯಲ್ಲಿರುವ ಸ್ಥಳೀಯ ಉದ್ಯಮಗಳ ಜೊತೆ ಕೈ ಜೋಡಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ. ರಿಜಿಸ್ಟ್ರಾರ್ ಡಾ. ಬಿ.ಇ. ರಂಗಸ್ವಾಮಿ ಹೇಳಿದರು. ಕೈಗಾರಿಕೆಗಳು ಕಾಲೇಜುಗಳ ವ್ಯಾಸಂಗದಲ್ಲಿ ಮಹತ್ವದ ಪಾತ್ರ ವಹಿಸಲು ಅವಕಾಶವಿದೆ. ಕೈಗಾರಿಕಾ ವಲಯದವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ, ಕೌಶಲ್ಯ ಒದಗಿಸುವಿಕೆ ಹಾಗೂ ಬೋಧನೆಯಲ್ಲೂ ಭಾಗಿಯಾಗಬಹುದು ಎಂದು ಹೇಳಿದರು.**

# ಹಿಂಗಾರಿನಲ್ಲಿ ಗೋಧಿ ಬಿತ್ತನೆ ಇಳಿಕೆ

ನವದೆಹಲಿ, ನ. 17 – ಹಿಂಗಾರು ಹಂಗಾಮಿನಲ್ಲಿ ಗೋಧಿ ಬಿತ್ತನೆ ಪ್ರಮಾಣ ಶೇ.5ರಷ್ಟು ಇಳಿಕೆಯಾಗಿದೆ. ಈ ವರ್ಷ ನವೆಂಬರ್ 17ರವರೆಗೆ 86.02 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಗೋಧಿ ಬಿತ್ತನೆ ಸಾಧ್ಯವಾಗಿದೆ (2ನೇ ಪುಟಕ್ಕೆ)

|| ಶ್ರೀ ಮಲ್ಲಿಕಾರ್ಜುನ ಪ್ರಸನ್ನ ||

**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**



ಜನನ : 20-8-1960 ಮರಣ : 14-11-2023

ದಾವಣಗೆರೆ ಸಿಟಿ ಆಂಜನೇಯ ಬಡಾವಣೆ 14ನೇ ಕ್ರಾಸ್ # 3038/14 ವಾಸಿಗಳಾದ
**ಶ್ರೀಮತಿ ಪ್ರೇಮಾ ಆರ್. ಮಾಕನೂರು ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 14-11-2023ನೇ ಮಂಗಳವಾರ ಬೆಳಗಿನ ಜಾವ 5.45ಕ್ಕೆ ನನ್ನ ಪೂಜ್ಯ ಪತಿಯವರಾದ
**ಶ್ರೀ ರಾಜಶೇಖರ್ ಬಿ. ಮಾಕನೂರು**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಸಮಾರಾಧನೆ'ಯನ್ನು**

ದಿನಾಂಕ : **18-11-2023**ನೇ ಶನಿವಾರ ಬೆಳಿಗ್ಗೆ 10.30 ಗಂಟೆಗೆ
**ದಾವಣಗೆರೆ ಆಂಜನೇಯ ಬಡಾವಣೆ 14ನೇ ಕ್ರಾಸ್‌ನಲ್ಲಿರುವ ಮೃತರ ಸ್ವಗೃಹದಲ್ಲಿ**
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ಪ್ರೇಮಾ ಆರ್. ಮಾಕನೂರು ಮತ್ತು ಮಕ್ಕಳು, ಸಹೋದರರು, ಮಾಕನೂರು ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ. : 9886370445, 9482159565, 8867292191.

ವಿ.ಸೂ.: ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# ಅಂಧಶ್ರದ್ಧೆಯೊಂದಿಗೆ ಗುಣಹೀನ : ರಾಜಋಷಿ ಖೇದ



**ಹೊನ್ನಾಳಿ**

ಹೊನ್ನಾಳಿ, ನ. 17- ಪಾಶ್ಚಿಮಾತ್ಯ ಶಿಕ್ಷಣ, ಸಂಸ್ಕೃತಿಗಳಿಗೆ ಭಾರತೀಯರು ಮಾರುಹೋಗಿ ಅಂಧಶ್ರದ್ಧೆಯೊಂದಿಗೆ ಗುಣಹೀನರಾಗುವುದಲ್ಲದೆ, ದೇಶಕ್ಕೆ ಯುವ ಪೀಳಿಗೆಯು ಮಾರಕರಾಗುವುದನ್ನು ಕಾಣುವಂತಾಗಿದೆ ಎಂದು ಈಶ್ವರೀಯ ವಿಶ್ವವಿದ್ಯಾಲಯದ ಹುಬ್ಬಳ್ಳಿ ವಲಯ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ. ಬಸವರಾಜ ರಾಜಋಷಿ ವ್ಯಾಕುಲತೆ ವ್ಯಕ್ತಪಡಿಸಿದರು.

ಇಲ್ಲಿನ ಹಿರೇಕಲ್ಮಠದಲ್ಲಿ ಮೊನ್ನೆ ನಡೆದ ದೀಪಾವಳಿ ಅಮಾವಾಸ್ಯೆ ಧರ್ಮಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಜಾತಿಗಳಿಂದ ಹಿಂದುಳಿದವರು, ಮುಂದುವರೆದವರು ಎಂದು ಗುರುತಿಸದೆ ಪ್ರಸ್ತುತ ಪರಿಸ್ಥಿತಿ ಹಾಗೂ ದೇಶದ ಹಿತದೃಷ್ಟಿಯಿಂದ ಜನತೆಯ ಆರ್ಥಿಕತೆಯ ಮೇಲೆ ಹಿಂದುಳಿದ, ಮುಂದುವರೆದವರು ಎಂದು ತಿಳಿದು ಸರ್ಕಾರಗಳು ಆದ್ಯತೆ ನೀಡುವ ಅನಿವಾರ್ಯತೆ ಹೆಚ್ಚಿದೆ. ಮಠ, ಮಾನ್ಯಗಳು ಈ ವಿಷಯಕ್ಕೆ ಒಂದು ಪ್ರೇರಣಾ ಶಕ್ತಿಯಾಗಿ ನಿಲ್ಲಬೇಕಿದೆ ಎಂದರು.

ಹಿರೇಕಲ್ಮಠದ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿ, ಲಿಂಗೈಕ್ಯ ಶ್ರೀ ಚಂದ್ರಶೇಖರ ಸ್ವಾಮೀಜಿಗಳ 50ನೇ ವರ್ಷದ ಪಟ್ಟಾಧಿಕಾರ ಪೂರ್ಣಗೊಂಡ ಹಿನ್ನೆಲೆಯಲ್ಲಿ ಈ ಹಿಂದೆ ಹಮ್ಮಿಕೊಂಡಿದ್ದ ಕೋಟಿ ದೀಪೋತ್ಸವವು ಇಂದಿನಿಂದ ಆರಂಭಗೊಳ್ಳಬೇಕಿತ್ತು, ಕಾರ್ಯಕ್ರಮವನ್ನು ಕಾರಣಾಂತರದಿಂದ ಮುಂದೂಡಲಾಗಿದೆ ಎಂದರು.

ಶ್ರೀಮಠದ ಸಂಕಲ್ಪವಾಗಿದ್ದ ಈ ಕಾರ್ಯಕ್ರಮ ನಡೆಯಬೇಕೆಂಬುದು ಕೆಲವರ ಅಭಿಪ್ರಾಯವಾದರೆ, ಕೆಲವರು ಕಾರ್ಯಕ್ಕೆ ಭಕ್ತಿಭಾವದಿಂದ ಪಾಲ್ಗೊಳ್ಳಬೇಕಿದ್ದು, ಮಳೆ-ಬೆಳೆ ಇರದ ಈ ಸಂದರ್ಭ ಬೇಡ ಎಂದು ಅಭಿಪ್ರಾಯ ವ್ಯಕ್ತವಾಗಿದೆ.

ಬರುವ ಕಾರ್ತಿಕ ಅಮವಾಸ್ಯೆಯಲ್ಲಿ ಸಾಂಕೇತಿಕವಾಗಿ 1 ಲಕ್ಷ ದೀಪಗಳನ್ನು ಹಚ್ಚುವ ಕಾರ್ಯಕ್ಕೆ ಶ್ರೀಮಠ ಮುಂದಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿ, 1 ವರ್ಷದ ಕಾಲಾವಕಾಶವಿದ್ದು, ಎಲ್ಲರ ಸಹಕಾರದೊಂದಿಗೆ ಈ ಕಾರ್ಯ ಪೂರ್ಣಗೊಳಿಸೋಣ ಎಂಬುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಸಾಹಿತಿ ಸಂಗನಾಳಮಠ, ಲೇಖಕ ಪಿ.ಎಂ. ಸಿದ್ದಯ್ಯ, ಹೆಚ್.ಎ. ಉಮಾಪತಿ, ಬೆನಕನಹಳ್ಳಿ ಮಲ್ಲೇಶಣ್ಣ, ಉಪನ್ಯಾಸಕ ಎಂ.ವಿ. ವೀರಯ್ಯ, ಈಶ್ವರೀಯ ಸಂಚಾಲಕಿ ಬಿ.ಕೆ. ಜ್ಯೋತಿ, ಅನ್ನದಾನಯ್ಯ ಇನ್ನಿತರರಿದ್ದರು.

## ಕಳೆನಾಶಕ ಸೇವಿಸಿ ನರಳಾಡುತ್ತಿದ್ದ ವ್ಯಕ್ತಿಯನ್ನು ಆಸ್ಪತ್ರೆಗೆ ಸೇರಿಸಿದ ಶಾಸಕರು



ದಾವಣಗೆರೆ, ನ. 17- ಕೀಟನಾಶಕ ಸೇವಿಸಿ ಸಾವು-ಬದುಕಿನೊಂದಿಗೆ ಹೋರಾಟ ನಡೆಸುತ್ತಿದ್ದ ಮದ್ಯ ವ್ಯಸನಿಯೊಬ್ಬನನ್ನು ಜಿಲ್ಲಾಸ್ಪತ್ರೆಗೆ ಸೇರಿಸುವ ಮೂಲಕ ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಮಾನವೀ ಯತೆ ಮೆರೆದಿದ್ದಾರೆ. ತಾಲ್ಲೂಕಿನ ಅಣಬೇರು ಗ್ರಾಮದ ಮದ್ಯ ವ್ಯಸನಿ ರೇವಣಸಿದ್ದಪ್ಪ (40) ಎಂಬಾತ ಎಂದಿನಂತೆ ಗುರುವಾರ ಮದ್ಯ ಸೇವನೆ ಮಾಡಿದ್ದಾನೆ. ಕುಡಿದ ಮತ್ತಿನಲ್ಲಿ ಕಳೆನಾಶಕ ಔಷಧಿಯನ್ನು ಸೇವಿಸಿದ್ದಾನೆ. ಇದನ್ನು ಗಮನಿಸಿದ ಕುಟುಂಬದವರು ಆಸ್ಪತ್ರೆಗೆ ಸೇರಿಸಲು ಆಂಬ್ಯುಲೆನ್ಸ್‌ಗೆ ಫೋನ್ ಮಾಡಲು ತಡಕಾಡುವ ವೇಳೆಗೆ ರಾಮಗೊಂಡನಹಳ್ಳಿ ಗ್ರಾಮದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ, ಅದೇ ಗ್ರಾಮದ ಮಾರ್ಗದಲ್ಲಿ ಬರುತ್ತಿದ್ದ ಶಾಸಕ ಬಸವಂತಪ್ಪ, ವಿಷಯ ತಿಳಿದ ಕೂಡಲೇ ವಿಷ ಕುಡಿದ ವ್ಯಕ್ತಿಯನ್ನು ತನ್ನ ಕಾರಿನಲ್ಲಿಯೇ ಸಿ.ಜಿ. ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಬಂದು ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ.

## ಹರಿಹರ : ಬಿಜೆಪಿ ಕಾರ್ಯಕರ್ತರಿಂದ ರಾಜ್ಯಾಧ್ಯಕ್ಷ ವಿಜಯೇಂದ್ರಗೆ ಸನ್ಮಾನ



ಮಲೇಬೆನ್ನೂರು, ನ.17- ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಅವರ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಶುಕ್ರವಾರ ಬೆಂಗಳೂರಿನಲ್ಲಿ ಬಿಜೆಪಿ ನೂತನ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಭೇಟಿ ಮಾಡಿ ಸನ್ಮಾನಿಸಿ, ಅಭಿನಂದಿಸಿದರು.

**ಭದ್ರಾ ನಾಲೆ ನೀರು ಮುಂದುವರೆಸಲು ಮನವಿ**

ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಹರಿಹರ ನಗರಸಭೆ ಸದಸ್ಯ ರಜನಿಕಾಂತ್, ಬೇಕರಿ ರಾಘವೇಂದ್ರ, ವಕೀಲ ಆನಂದ್, ಪೂಜಾರ್ ರಾಜು, ಕೀರ್ತಿಕುಮಾರ್, ದೀಟೂರು ನಿರಂಜನ್, ಚಂದ್ರ ಪಾಟೀಲ್, ಮಲೇಬೆನ್ನೂರಿನ ಮುದೇಗೌಡ್ರ ತಿಪ್ಪೇಶ್, ಬಿ. ಮಂಜುನಾಥ್, ಓ.ಜಿ. ಕುಮಾರ್, ಬಿ. ಸುರೇಶ್, ಪಿ.ಆರ್. ರಾಜು, ಎ.ಕೆ. ಲೋಕೇಶ್, ಎ.ಕೆ. ನಾಗರಾಜ್, ಕಜ್ಜರಿ ಹರೀಶ್, ಗೌಡ್ರ ಶ್ರೀನಿವಾಸ್, ಕೊಮಾರನಹಳ್ಳಿಯ ಮಡಿವಾಳರ ಬಸವರಾಜ್, ಜಿಗಳಿ ಹನುಮಗೌಡ, ಜಿ.ಎಂ. ಬಸವನಗೌಡ, ಹಳ್ಳಿಹಾಳ್ ನಟರಾಜ್, ಕೊಕ್ಕನೂರು ನಿಂಗನಗೌಡ, ಗೋವಿನಹಾಳ್ ದಡ್ಡಿ ರಾಜೀವ್, ಕೆ.ಎನ್. ಹಳ್ಳಿಯ ಹುಗ್ಗಿ ಮಹಾಂತೇಶ್, ಹರೀಶ್ ದೀಟೂರು ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

ಈ ವೇಳೆ ಚಂದ್ರಶೇಖರ್ ಪೂಜಾರ್ ಅವರು ಭದ್ರಾ ಬಲದಂಡೆ ನಾಲೆಯಲ್ಲಿ ನವೆಂಬರ್ 30 ರವರೆಗೆ ನೀರು ಹರಿಸುವಂತೆ ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಹೇಳುವಂತೆ ವಿಜಯೇಂದ್ರ ಅವರಿಗೆ ಮನವಿ ಮಾಡಿದರು.

ನಂತರ ಈ ತಂಡವು ಮಾಜಿ ಸಿಎಂ ಬಸವರಾಜ್ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿ, ಬೇಗ ಗುಣಮುಖರಾಗುವಂತೆ ಹೇಳಿದರು.

# ಆಸ್ತಿ ಮಾಡುವುದಕ್ಕಿಂತ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಬೇಕು

**ಹರಪನಹಳ್ಳಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ವೈ.ಡಿ. ಅಣ್ಣಪ್ಪ ಕರೆ**



ಹರಪನಹಳ್ಳಿ, ನ. 17 - ಆಸ್ತಿ ಮಾಡುವುದಕ್ಕಿಂತ ಮಕ್ಕಳನ್ನೆ ಆಸ್ತಿ ಮಾಡಿ ಎಂದು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ವೈ.ಡಿ. ಅಣ್ಣಪ್ಪ ಹೇಳಿದರು.

ತಾಲ್ಲೂಕಿನ ಮತ್ತಿಹಳ್ಳಿ ಗ್ರಾಮದಲ್ಲಿ ಅಯೋಜಿಸಿದ್ದ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹರಪನಹಳ್ಳಿ ತಾಲ್ಲೂಕಿನಲ್ಲಿ ಬಹುಸಂಖ್ಯಾತರಾಗಿರುವ ವಾಲ್ಮೀಕಿ ನಾಯಕ ಸಮಾಜ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಮುಂದೆ ಬರಬೇಕಿದೆ.

ರಾಜನಹಳ್ಳಿಯ ವಾಲ್ಮೀಕಿ ಶ್ರೀಗಳು ಬೇಡ ವಾಲ್ಮೀಕಿ ನಾಯಕ ಸಮುದಾಯವನ್ನು ಒಂದೇ ವೇದಿಕೆಗೆ ಕರೆತಂದು ಜಾತ್ರೆಯ ಮೂಲಕ ಜಾಗೃತಿ ಮೂಡಿಸುತ್ತಿದ್ದಾರೆ.

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿಯವರು ರಾಮಾಯಣ ಮಹಾಕಾವ್ಯದಲ್ಲಿ ತಿಳಿಸಿರುವ ಮಾನವೀಯ ಮೌಲ್ಯಗಳನ್ನು ಇಡೀ ಮನುಕುಲಕ್ಕೆ ಸಾರಿದ ರಾಮಾ ಯಣ ದಂತಹ ಮಹಾಕಾವ್ಯ ಬರೆದು ಇಡೀ ಜಗತ್ತಿಗೇ ಉತ್ತಮ ಸಂದೇಶ ಸಾರಿದ್ದಾರೆ. ನಾವು ಸಂಘಟಿತರಾಗಬೇಕು ಎಂದರು.

ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ ಮಾತನಾಡಿ, ವಾಲ್ಮೀಕಿ ಜಯಂತಿ ಬರಿ ಕುಣಿದು ಕುಪ್ಪಳಿಸುವುದಕ್ಕೆ ಸೀಮಿತವಾಗಿರಬಾರದು. ಸಮಾಜಕ್ಕೆ ಉತ್ತಮ ಸಂದೇಶ ಸಾರುವ ಕಾರ್ಯಕ್ರಮಗಳನ್ನು ಅಯೋಜಿಸಿ ಉತ್ತಮ ಉಪನ್ಯಾಸ ನೀಡುವ ವ್ಯಕ್ತಿಗಳನ್ನು ಕರೆಯಿಸಿ ಅವರಿಂದ ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡುವ ಕಾರ್ಯಕ್ರಮವಾಗಬೇಕು. ಅ ನಿಟ್ಟಿನಲ್ಲಿ ತಾಲ್ಲೂಕಿನ ಎಲ್ಲಾ ಗ್ರಾಮಗಳಲ್ಲಿ ವಾಲ್ಮೀಕಿ ಜಯಂತಿ ಆಚರಿಸುವ ಮೂಲಕ ಎಲ್ಲಾ ಜಾತಿ ಸಮಾಜದ ಮುಖಂಡರುಗಳನ್ನು ಆಹ್ವಾನಿಸುವ ಮೂಲಕ ಜಾತಿ ರಹಿತವಾದ ಕಾರ್ಯಕ್ರಮ ಗಳನ್ನು ಮಾಡಬೇಕು ಎಂದರು.

ಪಂಚಮಸಾಲಿ ಸಮಾಜದ ಮುಖಂಡರಾದ ಪ್ರಶಾಂತ ಪಟೇಲ್ ಮಾತನಾಡಿ, ವಿದ್ಯೆ ಯಾರೂ ಕದಿಯಲಾರದ ಸ್ವತ್ತು. ಶಿಕ್ಷಣದ ಜೊತೆ ವಿನಯತೆ ಕಲಿತು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದರು.

ವಾಲ್ಮೀಕಿ ಸಮಾಜದ ಪ್ರಧಾನ ಕಾರ್ಯದರ್ಶಿ ಜಟ್ಟಿನಕಟ್ಟೆಯ ಎಚ್.ಕೆ.ಮಂಜುನಾಥ ಮಾತನಾಡಿ, ರಾಜ್ಯದ 4ನೇ ಅತಿದೊಡ್ಡ ಸಮಾಜವಾಗಿರುವ ವಾಲ್ಮೀಕಿ ನಾಯಕ ಸಮಾಜ ಎಲ್ಲಾ ರಂಗಗಳಲ್ಲಿ ಮುಖ್ಯವಾಹಿನಿಗೆ ಬರಬೇಕಿದೆ. ಆ ನಿಟ್ಟಿನಲ್ಲಿ ನಾವೆಲ್ಲರೂ ಸಂಘಟಿತರಾಗಬೇಕು ಎಂದರು.

ವಕೀಲರಾದ ಅರಸಿಕೇರಿಯ ಎಂ. ಸುರೇಶ ಮಾತನಾಡಿ, ಸಮಾಜದ ಮುಖ್ಯವಾಹಿನಿಗೆ ಬರಲು ಶಿಕ್ಷಣ ಬಹು ಮುಖ್ಯ ಅಸ್ತ್ರವಾಗಿದೆ ಎಂದರು.

ಮತ್ತಿಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷ ಸಣ್ಣಹೊನ್ನಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಪಂಚಾಯತಿ ಮಾಜಿ ಉಪಾಧ್ಯಕ್ಷ ಮತ್ತಿಹಳ್ಳಿ ಶಿವಣ್ಣ ಯುವ ಮುಖಂಡ ಬಾಲೇನಹಳ್ಳಿಯ ಕೆಂಚನಗೌಡ, ಮುಖಂಡರಾದ ಬೆಟ್ಟನಗೌಡ ಮಾತನಾಡಿದರು.

ಕಾರ್ಯಕ್ರಮದಲ್ಲಿ ಯುವ ಮುಖಂಡ ಕರಿಬಸಪ್ಪ, ಮುಖಂಡರಾದ ಆರ್.ಕೊಟ್ರಗೌಡ್ರು, ಸಂದೇರ್ ಸಣ್ಣ ನಿಂಗಪ್ಪ, ವೆಂಕಟೇಶ, ಪಚ್ಚೇರ್ ಮಂಜಪ್ಪ, ರಾಮಾಂಜಿನಪ್ಪ, ಟಿ. ಗೌಡಪ್ಪ, ಶಾಂತಕುಮಾರ, ಲಂಕೇಶ, ಪಿ. ದೊಡ್ಡಬಸಪ್ಪ.ಟಿ.ಕೃಷ್ಣಮೂರ್ತಿ. ಡಿ. ಗೋಣಿಬಸಪ್ಪ. ತಿಮ್ಮಕ್ಕ, ಪಾರ್ವತಮ್ಮ ಸೇರಿದಂತೆ ಇತರರು ಇದ್ದರು.

## ಹಿಂಗಾರಿನಲ್ಲಿ ಗೋಧಿ ಬಿತ್ತನೆ ಇಳಿಕೆ

(1ನೇ ಪುಟದಿಂದ) ಎಂದು ಕೇಂದ್ರ ಕೃಷಿ ಸಚಿವಾಲಯ ತಿಳಿಸಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 91.02 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿತ್ತು. ಒಟ್ಟಾರೆ 5.01 ಲಕ್ಷ ಹೆಕ್ಟೇರ್ ಪ್ರದೇಶದ ಬಿತ್ತನೆ ಕಡಿಮೆಯಾಗಿದೆ.

ಉತ್ತರ ಪ್ರದೇಶದಲ್ಲಿ 3.87 ಲಕ್ಷ ಹೆಕ್ಟೇರ್, ಪಂಜಾಬ್‌ನಲ್ಲಿ 2.28 ಲಕ್ಷ ಹೆಕ್ಟೇರ್, ಹರಿಯಾಣದಲ್ಲಿ 2.14 ಲಕ್ಷ ಹೆಕ್ಟೇರ್ ಹಾಗೂ ಗುಜರಾತ್‌ನಲ್ಲಿ 0.71 ಲಕ್ಷ ಹೆಕ್ಟೇರ್ ಬಿತ್ತನೆ ಕಡಿಮೆಯಾಗಿದೆ.

ಮಧ್ಯಪ್ರದೇಶದಲ್ಲಿ 3.44 ಲಕ್ಷ ಹೆಕ್ಟೇರ್ ಹಾಗೂ ರಾಜಸ್ಥಾನದಲ್ಲಿ 0.68 ಲಕ್ಷ ಹೆಕ್ಟೇರ್ ಹೆಚ್ಚಿನ ಬಿತ್ತನೆಯಾಗಿದೆ. ಕೇಂದ್ರ ಸರ್ಕಾರ ಈ ಹಿಂದೆಯೇ ಗೋಧಿ ರಫ್ತಿನ ಮೇಲೆ ನಿಷೇಧ ಹೇರಿದೆ. ತನ್ನ ಕಾಪು ದಾಸ್ತಾನಿನ ಮೂಲಕ ಗೋಧಿ ಬಿಡುಗಡೆ ಮಾಡಿ ಬೆಲೆ ನಿಯಂತ್ರಣದಲ್ಲಿಡಲು ಕ್ರಮ ತೆಗೆದುಕೊಳ್ಳುತ್ತಿದೆ.

ಖಾದ್ಯತೈಲ ಬೀಜಗಳ ಬಿತ್ತನೆ ಪ್ರದೇಶ 73.17 ಲಕ್ಷ ಹೆಕ್ಟೇರ್‌ನಿಂದ 71.74 ಲಕ್ಷ ಹೆಕ್ಟೇರ್‌ಗೆ ಇಳಿಕೆಯಾಗಿದೆ. ಸಾಸಿವೆ ಬಿತ್ತನೆ ಪ್ರದೇಶ 69.31 ಲಕ್ಷ ಹೆಕ್ಟೇರ್‌ನಿಂದ 68.55 ಲಕ್ಷ ಹೆಕ್ಟೇರ್‌ಗೆ ಇಳಿಕೆಯಾಗಿದೆ.

ಒಟ್ಟಾರೆ ಹಿಂಗಾರು ಪ್ರದೇಶದ ಬಿತ್ತನೆ ಶೇ.3ರಷ್ಟು ಕಡಿಮೆಯಾಗಿದೆ. ಕಳೆದ ವರ್ಷ 257.46 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದರೆ, ಈ ವರ್ಷ 248.59 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ಬಿತ್ತನೆಯಾಗಿದೆ.

# ಪರಿಶಿಷ್ಟರು, ಮಹಿಳೆಯರಿಗೆ ಸಹಕಾರ ವಲಯದಲ್ಲಿ ಪ್ರಾಶಸ್ತ್ಯ ಸಿಗಬೇಕು : ಶಾಸಕ ಬಸವಂತಪ್ಪ



**ರಾಮಗೊಂಡನಹಳ್ಳಿಯಲ್ಲಿ ಸಹಕಾರ ಸಪ್ತಾಹ**

ಮಾಯಕೊಂಡ, ನ. 17 - ಗ್ರಾಮ ಪಂಚಾಯತಿಯಂತೆ ಸಹಕಾರ ಸಂಘಗಳಲ್ಲಿಯೂ ಮೀಸಲಾತಿ ಮತ್ತು ಗಣಕೀಕರಣ ವ್ಯವಸ್ಥೆ ಅಳವಡಿಸಬೇಕೆಂದು ಶಾಸಕ ಕೆ.ಎಸ್. ಬಸವಂತಪ್ಪ ಪ್ರತಿಪಾದಿಸಿದರು.

ಸಮೀಪದ ರಾಮಗೊಂಡನಹಳ್ಳಿಯಲ್ಲಿ ಬುಧವಾರ ನಡೆದ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಅಧಿಕಾರ ವಿಕೇಂದ್ರೀಕರಣ ಅಳವಡಿಸಿದ್ದು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಸೇರಿದಂತೆ ಮಹಿಳೆಯರಿಗೂ ಮೀಸಲಾತಿ ದೊರಕಿದೆ. ಸಹಕಾರ ಸಂಘದಲ್ಲಿ ಈ ರೀತಿ ವ್ಯವಸ್ಥೆ ಇಂದಿಗೂ ಜಾರಿಯಾಗಿರದ ಕಾರಣ ಅನ್ಯಾಯವಾಗುತ್ತಿದೆ. ಇದನ್ನು ಸರಿಪಡಿಸಿ ಮೀಸಲಾತಿ ಅಳವಡಿಸಲು, ಸರ್ಕಾರದ ಗಮನ ಸೆಳೆಯುತ್ತೇನೆ. ಉತ್ತರ ಕರ್ನಾಟಕದ ಬಹುಭಾಗಗಳಲ್ಲಿ ಸಹಕಾರ ಸಂಘಗಳು ದುಸ್ಥಿತಿಯಲ್ಲಿವೆ. ಗಣಕೀಕರಣವಿಲ್ಲದ ಕಾರಣ ವಂಚನೆ, ವಿಳಂಬ ಹೆಚ್ಚಾಗುತ್ತಿದ್ದು, ಹಿರಿಯ ಅಧಿಕಾರಿಗಳು ಇದರತ್ತ ಗಮನ ಹರಿಸಬೇಕು. ರೈತರಿಗೆ ಸಕಾಲದಲ್ಲಿ ಸಾಲ ಒದಗಿಸುವುದೇ ಸಹಕಾರ ಇಲಾಖೆಯಾಗಿದ್ದು, ರೈತನ ಬೆನ್ನೆಲಬಾಗಿ ಸಹಕರಿಸುತ್ತಿದೆ. ಮಹಿಳೆಯರೂ ಇಂದು ವಿವಿಧ ಸಂಸ್ಥೆಗಳಲ್ಲಿ ಸಹಕಾರ ತತ್ವದಡಿ ಕೋಟ್ಯಂತರ ರೂ.ಗಳ ವ್ಯವಹಾರ ನಡೆಸುತ್ತಿದ್ದಾರೆ. ಮಹಿಳೆಯರು ಹೈನುಗಾರಿಕೆಯಿಂದ ಕುಟುಂಬದ ಆದಾಯ ಹೆಚ್ಚಿಸಿಕೊಳ್ಳಲು ಅವರು ಕರೆ ನೀಡಿದರು.

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಎಜಿಎಂ. ಗುರುರಾಜ್ ಎನ್. ಅಂಬೇಕರ್ ಉಪನ್ಯಾಸ ನೀಡಿದರು. ಡಿಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಜೆ.ಆರ್. ಷಣ್ಮುಖಪ್ಪ, ಜಗದೀಶ್ ಬಣಕಾರ್ ಮತ್ತಿತರರು ಮಾತನಾಡಿದರು.

ನಿವೃತ್ತ ನೌಕರ ಭೂಮೇಶ್ವರಪ್ಪ, ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು. ರಾಮಗೊಂಡನಹಳ್ಳಿ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಶ್ರೀನಿವಾಸ್ ಅಧ್ಯಕ್ಷತೆ ವಹಿಸಿದ್ದರು.

ಶ್ಯಾಗಲೆ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಂಜುನಾಥ್, ಶಿವಮೊಗ್ಗ ದಾವಣಗೆರೆ ಸಹಕಾರಿ ಹಾಲು ಒಕ್ಕೂಟದ ನಿರ್ದೇಶಕ ಸಿರಿಗೆರೆ ರಾಜಣ್ಣ, ಬಸಪ್ಪ, ಬೇತೂರು ರಾಜಣ್ಣ, ಸೋಮಶೇಖರಪ್ಪ, ಶೇಖರಪ್ಪ, ಸಿದ್ದೇಶ್, ಸಿದ್ದ ನಾಗರಾಜ್, ಶರಣಪ್ಪ, ಮಲ್ಲಿಕಾರ್ಜುನ್, ರಂಗನಾಥ್ ಮತ್ತಿತರರು ಇದ್ದರು.

## ದಂಡ ಕಟ್ಟಿದ ಕುಮಾರಸ್ವಾಮಿ

(1ನೇ ಪುಟದಿಂದ) ಲೈಟಿಂಗ್‌ಗೆ ಬಳಕೆ ಮಾಡಲಾಗಿತ್ತು. ಆದರೂ ಬೆಸ್ಕಾಂ ಅಧಿಕಾರಿಗಳು 2.5 ಕೆವಿ ಅಂತ ಸುಳ್ಳು ಲೆಕ್ಕ ತೋರಿಸಿದ್ದಾರೆ. ಯಾರದ್ದೋ ಒತ್ತಡಕ್ಕೆ ಮಣಿದು ಹೀಗೆ ಮಾಡಿದ್ದಾರೆ ಎಂದು ಆರೋಪ ಮಾಡಿದರು.

ನಾನು ಬಳಕೆ ಮಾಡಿರುವುದು 71 ಯುನಿಟ್, ಅದಕ್ಕೆ 3 ಪಟ್ಟು ಫೈನ್ ಅಂದರೂ 2,526 ರೂ. ದಂಡ ಆಗುತ್ತದೆ. ಆದರೆ ಬೆಸ್ಕಾಂ 68,000 ರೂ. ದಂಡ ಪಾವತಿ ಮಾಡಲು ಹೇಳಿದೆ. ನನ್ನ ಮನೆಗೆ ಅನುಮತಿ ಪಡೆದಿರೋ 33 ಕೆವಿಗೂ 66 ಸಾವಿರ ಬಿಲ್ ಹಾಕಿ., ಒಟ್ಟಾರೆ 68,526 ರೂ. ಬಿಲ್ ನೀಡಲಾಗಿದೆ. ನಿಯಮದ ಪ್ರಕಾರ ಬಿಲ್ ಹಾಕದೇ ಹೆಚ್ಚುವರಿ ಬಿಲ್ ಹಾಕಿದೆ, ಮಾಜಿ ಮುಖ್ಯಮಂತ್ರಿಗೇ ಹೀಗಾದರೆ ಸಾಮಾನ್ಯ ಜನರ ಕಥೆ ಏನು? ಎಂದು ಅವರು ಪ್ರಶ್ನಿಸಿದರು.

ಈ ಬಗ್ಗೆ ಬೆಸ್ಕಾಂಗೆ ಮರು ಪರಿಶೀಲನಾ ಪತ್ರ ಬರೆದಿದ್ದೇನೆ ಹಾಗೂ ದಂಡವನ್ನೂ ಕಟ್ಟಿದ್ದೇನೆ. ಆದರೆ ಇಷ್ಟು ಬಿಲ್ ಯಾಕೆ ಅಂತ ವಿವರಣೆ ಕೊಡಿ ಎಂದು ಆಕ್ಷೇಪಣೆ ವ್ಯಕ್ತಪಡಿಸಿ ಪತ್ರ ಬರೆದಿದ್ದೇನೆ. ಬೆಸ್ಕಾಂ ವಿಜಿಲೆನ್ಸ್ ಹೇಗೆ ಕೆಲಸ ಮಾಡುತ್ತಿದೆ ಎನ್ನುವುದು ನನಗೆ ಗೊತ್ತಿದೆ ಎಂದು ಬೆಸ್ಕಾಂ ಅಧಿಕಾರಿಗಳ ವಿರುದ್ಧವೂ ಕುಮಾರಸ್ವಾಮಿ ಕಿಡಿಕಾರಿದರು.

ದೀಪಾವಳಿ ಹಬ್ಬದ ವೇಳೆ ನಮ್ಮನೆಗೆ ಹುಡುಗರು ದೀಪಾಲಂಕಾರ ಮಾಡುವಾಗ ಅಚಾತುರ್ಯ ಆಗಿತ್ತು. ಇದಕ್ಕೆ ನಾನೇ ವಿಷಾದ ವ್ಯಕ್ತಪಡಿಸಿ ದಂಡ ಪಾವತಿ ಮಾಡುವುದಾಗಿ ಹೇಳಿದ್ದೆ. ಅದರಂತೆ ದಂಡ ಪಾವತಿ ಮಾಡಿದ್ದೇನೆ ಎಂದರು.

ಹುಡುಗರು ಮಾಡಿದ ತಪ್ಪಿಗೆ ವಿಷಾದ ವ್ಯಕ್ತಪಡಿಸಿ, ಅದರ ಜವಾಬ್ದಾರಿ ನಾನೇ ಹೊತ್ತೆ, ಈಗ ವಿದ್ಯುತ್ ಕಳ್ಳ ಅಂತ ಪಟ್ಟ ಬೇರೆ ಕೊಟ್ಟಿದ್ದಾರೆ. ಇದರ ಬಗ್ಗೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಆದಿಯಾಗಿ ಎಲ್ಲರೂ ಹೇಳಿಕೆ ಕೊಟ್ಟಿದ್ದರು. ದಂಡದ ಬಿಲ್ ಕೊಟ್ಟರೂ, ಕಟ್ಟಿದ್ದೇನೆ ಎಂದು ಕುಮಾರಸ್ವಾಮಿ ಹೇಳಿದರು.

## ಮೀಸಲಾತಿ ಹರಿಯಾಣ ಕಾಯ್ದೆ ಅಸಿಂಧು

(1ನೇ ಪುಟದಿಂದ) ಹುದ್ದೆಗಳನ್ನು ಸ್ಥಳೀಯರಿಗೆ ಮೀಸಲಿಡಬೇಕು ಎಂದು ತಿಳಿಸಲಾಗಿತ್ತು. ಖಾಸಗಿ ವಲಯದಲ್ಲಿ ಹುದ್ದೆಗಳನ್ನು ಮೀಸಲಿಡುವುದು ಸಂವಿಧಾನಿಕ ಹಕ್ಕುಗಳ ಉಲ್ಲಂಘನೆ. ಖಾಸಗಿ ವಲಯಗಳು ಹುದ್ದೆಗಳನ್ನು ಕೌಶಲ್ಯ ಹಾಗೂ ವಿಶ್ಲೇಷಣಾ ಸಾಮರ್ಥ್ಯದ ಮೇಲೆ ನೀಡುತ್ತವೆ ಎಂದು ಖಾಸಗಿ ವಲಯದವರು ಆಕ್ಷೇಪಿಸಿದ್ದರು.

ಭಾರತೀಯರು ತಮ್ಮ ಶಿಕ್ಷಣ ಹಾಗೂ ಸಾಮರ್ಥ್ಯದ ಆಧಾರದ ಮೇಲೆ ದೇಶದ ಯಾವುದೇ ಭಾಗದಲ್ಲಿ ಕೆಲಸ ಮಾಡಬಹುದು ಎಂದು ಸಂವಿಧಾನದಲ್ಲಿ ಹಕ್ಕು ನೀಡಲಾಗಿದೆ ಎಂದು ಪ್ರತಿಪಾದಿಸಲಾಗಿತ್ತು.

## ಜೆಡಿಎಸ್‌ನಿಂದ ಇಬ್ರಾಹಿಂ ಅಮಾನತ್ತು

(1ನೇ ಪುಟದಿಂದ) ಪರಿಣಾಮವಾಗಿ ಇಬ್ರಾಹಿಂ ಅವರು ಪಕ್ಷದ ರಾಜ್ಯ ಘಟಕದ ಅಧ್ಯಕ್ಷಸ್ಥಾನವನ್ನು ಕಳೆದು ಕೊಂಡರು. ಈಗ ಇಬ್ರಾಹಿಂ ಅವರನ್ನು ಜೆಡಿಎಸ್‌ನಿಂದ ಅಮಾನತ್ತು ಮಾಡಿ ಆದೇಶ ಹೊರಡಿಸಲಾಗಿದೆ.

## ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ, ನ. 17 - ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಕ್ರೀಡಾ ಪೋಷಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಅರ್ಜಿ ನಮೂನೆಯನ್ನು ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಇದೇ ದಿನಾಂಕ 20ರ ಒಳಗಾಗಿ ಅದೇ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.08192-237480 ಗೆ ಸಂಪರ್ಕ ಸಬಹುದೆಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಜಯಲಕ್ಷ್ಮಿಬಾಯಿ ಕೆ.ಆರ್ ತಿಳಿಸಿದ್ದಾರೆ.

## ದಾವಣಗೆರೆ ಜಿಲ್ಲೆಯಲ್ಲಿಯೂ ಸಹ ಕನ್ನಡ ಭಾಷೆಗೆ ಅಗ್ರಸ್ಥಾನ ಸಿಗಲಿ



ದಾವಣಗೆರೆ, ನ. 16 - ಕನ್ನಡ ಭಾಷೆಗೆ ಅಗ್ರಸ್ಥಾನ ನೀಡಬೇಕು ಎಂಬ ಬೆಂಗಳೂರು ಮಹಾನಗರ ಪಾಲಿಕೆ ಹೊರಡಿಸಿರುವ ಆದೇಶದಂತೆ ದಾವಣಗೆರೆ ನಗರ ಹಾಗು ಜಿಲ್ಲಾಯಾದ್ಯಂತ ಕಡ್ಡಾಯವಾಗಿ ಜಾರಿಗೆ ಬರುವಂತೆ, ಎಲ್ಲಾ ಮನೆ ಅಂಗಡಿ, ಮುಂಗಟ್ಟುಗಳ ಮೇಲೆ ಕನ್ನಡ ನಾಮಫಲಕಗಳೇ ರಾರಾಜಿಸುವಂತಿರಲಿ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಬಿ. ವಾಮದೇವಪ್ಪ ಆಶಯ ವ್ಯಕ್ತಪಡಿಸಿದರು. ಸರ್ವರಲ್ಲಿಯೂ ಹಾಗೂ ಮುಖ್ಯವಾಗಿ ಜಿಲ್ಲಾಡಳಿತ, ನಗರಾಡಳಿತ ಮತ್ತು ಪಂಚಾಯ್ತಿ ಮಟ್ಟಗಳಲ್ಲಿ ಕೂಡಲೇ ಆದೇಶ ಹೊರಡಿಸಿ ಅನುಷ್ಠಾನಗೊಳಿಸುವಂತೆ ಅವರು ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.


## ಶರಣ ಆರ್. ಕರಿಬಸಪ್ಪ ನಿಧನ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ, 10ನೇ ಕ್ರಾಸ್ ವಾಸಿ
ಶ್ರೀ ಚನ್ನಮಲ್ಲೇಶ್ವರ ಎಲೆಕ್ಟ್ರಿಕ್ ಕಂಪನಿ, ಮಂಡಿಪೇಟೆ, ದಾವಣಗೆರೆ ಮಾಲೀಕರಾದ
ಶರಣ **ಆರ್. ಕರಿಬಸಪ್ಪನವರು**
ದಿನಾಂಕ : 17.11.2023ರ ಶುಕ್ರವಾರ ಮಧ್ಯಾಹ್ನ 12.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 90 ವರ್ಷ ವಯಸ್ಸಾಗಿತ್ತು, ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 18.11.2023ರ ಶನಿವಾರ ಬೆಳಿಗ್ಗೆ 11.30ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.


**ದುಃಖತಪ್ತ ಕುಟುಂಬ ವರ್ಗ :**
**94806 16800, 99017 39676**

## ಕಕ್ಕರಗೊಳ್ಳ ಗ್ರಾಮದ ಸುರೇಶ್ ಮಲ್ಕೆನಪ್ಪರ ನಿಧನ



ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ ಗ್ರಾಮದ ವಾಸಿ ಸುರೇಶ ಮಲ್ಕೆನಪ್ಪರ (73) ಇವರು ದಿನಾಂಕ : 17.11.2023ರ ಶುಕ್ರವಾರ ಸಂಜೆ 4.30ಕ್ಕೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 18.11.2023 ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಕಕ್ಕರಗೊಳ್ಳ ಗ್ರಾಮದಲ್ಲಿ ನೆರವೇರಲಿದೆ.

## ಸಾಸ್ವೆಹಳ್ಳಿ ಮುದೇಗೌಡ್ರು ಗಂಗಮ್ಮ ನಿಧನ



ಹರಪನಹಳ್ಳಿ ತಾಲ್ಲೂಕು ಸಾಸ್ವೆಹಳ್ಳಿ ಗ್ರಾಮದ ವಾಸಿ ದಿ॥ ಮುದೇಗೌಡ್ರು ಪಕ್ಕೀರಗೌಡ ಇವರ ಪತ್ನಿ ಮುದೇಗೌಡ್ರು ಗಂಗಮ್ಮ (98) ಇವರು ದಿನಾಂಕ : 17.11.2023ರ ಶುಕ್ರವಾರ ರಾತ್ರಿ 8.45ಕ್ಕೆ ನಿಧನರಾದರು. ಐವರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 18.11.2023ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮವಾದ ಸಾಸ್ವೆಹಳ್ಳಿ ಗ್ರಾಮದ ಮೃತರ ತೋಟದಲ್ಲಿ ನೆರವೇರಿಸಲಾಗುವುದು.

## ಐ.ಎ.ಎಸ್, ಕೆ.ಎ.ಎಸ್ ಪರೀಕ್ಷೆಗಳಿಗೆ ತರಬೇತಿ

ದಾವಣಗೆರೆ, ನ. 17 - ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಮೈಸೂರಿನ ಕೇಂದ್ರ ಕಚೇರಿಯಲ್ಲಿ ಕೇಂದ್ರ ಲೋಕ ಸೇವಾ ಆಯೋಗದವರು ನಡೆಸಲಿರುವ ಐಎಎಸ್ ಹಾಗೂ ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ನಡೆಸಲಾಗುವುದು. ಇದೇ ದಿನಾಂಕ 24 ರೊಳಗಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821-2515944 ಸಂಪರ್ಕಿಸಲು ಕರಾಮುವಿ ಕುಲಸಚಿವ ಪ್ರೊ. ಕೆ. ಎಲ್.ಎನ್. ಮೂರ್ತಿ ತಿಳಿಸಿದ್ದಾರೆ.

## ಛತ್ತೀಸ್‌ಘಡದ ಮಾದರಿ ಭತ್ತ ಖರೀದಿಗೆ ಒತ್ತಾಯ



ದಾವಣಗೆರೆ, ನ. 17 - ಛತ್ತೀಸ್‌ಘಡ ವಿಧಾನಸಭಾ ಚುನಾವಣೆಗಾಗಿ ಕಾಂಗ್ರೆಸ್ ಪಕ್ಷ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿರುವ ರೀತಿಯಲ್ಲೇ, ಕರ್ನಾಟಕದಲ್ಲೂ ಭತ್ತವನ್ನು ಕ್ವಿಂಟಾಲ್‌ಗೆ 3,200 ರೂ.ಗಳಂತೆ ಖರೀದಿ ಮಾಡಬೇಕು ಎಂದು ಭಾರತೀಯ ರೈತ ಒಕ್ಕೂಟದ ಜಿಲ್ಲಾ ಅಧ್ಯಕ್ಷ ಹೆಚ್. ಆರ್. ಶಾಮನೂರ್ ಲಿಂಗರಾಜ್ ಒತ್ತಾಯಿಸಿದ್ದಾರೆ.

ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿರುವ ಅವರು, ಛತ್ತೀಸ್‌ಘಡದಲ್ಲಿ 24/7 ರೀತಿಯಲ್ಲಿ ಭತ್ತದ ಖರೀದಿ ಮಾಡಲಾಗುತ್ತಿದೆ.

ಅದೇ ರೀತಿ ರಾಜ್ಯದಲ್ಲೂ ರೈತರಿಂದ ನಿರಂತರ ಭತ್ತ ಖರೀದಿಗೆ ವ್ಯವಸ್ಥೆ ಮಾಡಬೇಕು. ಬೆಂಬಲ ಬೆಲೆಯನ್ನು ಹೆಚ್ಚಿನ ಪ್ರಮಾಣದಲ್ಲಿ ನಿಗದಿ ಪಡಿಸಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ.

ಭದ್ರಾ ನಾಲೆಗಳಿಗೆ ನೀರು ಹರಿಸುವುದನ್ನು ಇನ್ನೂ 10 ದಿನ ಮುಂದುವರೆಸಬೇಕು ಎಂದೂ ಅವರು ಇದೇ ಸಂದರ್ಭದಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಕೊನೆ ಭಾಗದ ರೈತರ ಅಗತ್ಯ ಪರಿಗಣಿಸಿ ನೀರು ಹರಿಸುವುದನ್ನು ಮುಂದುವರೆಸಬೇಕು ಎಂದವರು ಆಗ್ರಹಿಸಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಲುಲು ಮಾಲ್‌ನಲ್ಲಿ ಭೂ ಕಬಳಿಕೆ ಎಂದು ಕುಮಾರ ಆರೋಪ



ಬೆಂಗಳೂರು, ನ. 17 - ಮಿನರ್ವ ಮಿಲ್‌ಗೆ ಮೀಸಲಿಟ್ಟಿದ್ದ 24 ಎಕರೆ ಖರಾಬು ಭೂಮಿ ಕಬಳಿಸಿ ಐಷಾರಾಮಿ ಲುಲು ಮಾಲ್ ಕಟ್ಟಲಾಗಿದೆ. ಈ ಕುರಿತು ತನಿಖೆ ನಡೆಸಬೇಕು ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಈ ಆರೋಪ ಮಾಡಿರುವ ಕುಮಾರಸ್ವಾಮಿ, ದೀಪಾವಳಿ ಸಮಯದಲ್ಲಿ ನನ್ನ ಅರಿವಿಗೆ ಬಾರದೆ ಅಚಾತುರ್ಯವಾಗಿರುವುದಕ್ಕೆ ನನ್ನನ್ನು ವಿದ್ಯುತ್ ಕಳ್ಳ ಎನ್ನುವ ಕಾಂಗ್ರೆಸ್ ನಾಯಕರು ತಮ್ಮ ಪಕ್ಕದಲ್ಲೇ ಕುಳಿತುಕೊಳ್ಳುವ ಮಹಾನ್ ಕಳ್ಳನ ಕಡೆಯೂ ನೋಡಬೇಕು ಎಂದಿದ್ದಾರೆ.

ಅವರು ನಕಲಿ ಸೊಸೈಟಿಯನ್ನು ಅಸಲಿ ಮಾಡಿಕೊಂಡಿದ್ದಾರೆ. ಸುಜಾತ ನಿಲ್ದಾಣದ ಬಳಿ ಇದ್ದ ಹೈಟೆನ್ಷನ್ ತಂತಿಗಳನ್ನು ಲುಲು ಮಾಲ್ ಕೆಳಗಡೆ ತೆಗೆದುಕೊಂಡು ಹೋಗಿರುವುದಕ್ಕೆ ಪಾವತಿಸಿದ ಹಣ, ಮಾಲ್ ಆರಂಭಕ್ಕೂ ಮೊದಲು ಬಳಸಿದ 6 ತಿಂಗಳ ವಿದ್ಯುತ್ ಬಳಕೆಯ ಬಗ್ಗೆಯೂ ಬೆಸ್ಕಾಂ ವಿಚಕ್ಷಣ ದಳ ಮಾಹಿತಿ ಬಹಿರಂಗಪಡಿಸಬೇಕು ಎಂದು ಆಗ್ರಹಿಸಿದರು.

ಇದಕ್ಕೆ ತಿರುಗೇಟು ನೀಡಿರುವ ಶಿವಕುಮಾರ್, ಕುಮಾರಸ್ವಾಮಿ ಅವರ ಬ್ಲ್ಯಾಕ್‌ಮೇಲ್‌ಗಳಿಗೆ ನಾನು ಹೆದರುವುದಿಲ್ಲ. ಇದು ಅವರಿಗೂ ಗೊತ್ತು. ಅವರು ಕೇಳಿರುವ ಎಲ್ಲ ದಾಖಲೆಗಳನ್ನು ಒದಗಿಸಲು ಸಿದ್ಧ ಎಂದಿದ್ದಾರೆ. ನಾನು ಲುಲು ಮಾಲ್ ನಿರ್ಮಿಸಿರುವ ಜಾಗ ಕೇಂದ್ರ ಸರ್ಕಾರದ ಒಂದು ಸಂಸ್ಥೆಗೆ ಸೇರಿತ್ತು. ಅವರು ದಾಖಲೆಗಳನ್ನು ಪ್ರಕಟಿಸಿ, ಜಮೀನು ಮಾರಾಟಕ್ಕೆ ಟೆಂಡರ್ ಆಹ್ವಾನಿಸಿದ್ದರು. ನನ್ನ ಸ್ನೇಹಿತರು ಆ ಜಮೀನು ಖರೀದಿಸಿದ್ದರು. ಅವರಿಂದ ಖರೀದಿಸಿ ಜಂಟಿ ಸಹಭಾಗಿತ್ವದಲ್ಲಿ ಮಾಲ್ ನಿರ್ಮಿಸಿದ್ದೇನೆ ಎಂದರು.

# ಸಂಪ್ರದಾಯ, ಸಂಸ್ಕೃತಿ ಮೇಳೈಸಿದ ಲಂಬಾಣಿಯರ ದೀಪಾವಳಿ

**ಜಿ.ಜಗದೀಶ್ , ಮಾಯಕೊಂಡ**



ಮಾಯಕೊಂಡದಲ್ಲಿ ಮನ ಸೆಳೆದ ಪೂಲ್ ತೊಡೇರಾ, ಮೇರಾ ಕಾಡ

ಮಾಯಕೊಂಡ, ನ.17- ವಿಶಿಷ್ಟ ಸಂಸ್ಕೃತಿ, ಸಂಪ್ರದಾಯ ಮೈಗೂಡಿಸಿಕೊಂಡಿರುವ ಲಂಬಾಣಿ ಸಮುದಾಯದವರು ದೀಪಾವಳಿ ಹಬ್ಬವನ್ನು ವಿಶಿಷ್ಟವಾಗಿ ಆಚರಿಸಿದರು. ತಾಲ್ಲೂಕಿನ ತೊಳಹುಣಸೆ, ಆಲೂರು ಹಟ್ಟಿ, ಪರಶುರಾಂಪುರ, ದೊಡ್ಡ ಮಾಗಡಿ, ಹೆದ್ನೆ, ಈಚಘಟ್ಟ, ಹುಲಿಕಟ್ಟೆ ತಾಂಡಾಗಳಲ್ಲಿ ದೀಪಾವಳಿ ಸಂಭ್ರಮ ಮನೆಮಾಡಿತ್ತು.

ಲಂಬಾಣಿ ಸಂಪ್ರದಾಯದ ಹಾಡಿಗೆ ನರ್ತಿಸುತ್ತಾ, ಹೂ ತರಲು ಹೊರಟ ಯುವತಿಯರ ವೈಯ್ಯಾರ, ನಗಾರಿ ಸದ್ದಿಗೆ, ಕೋಲಾಟದ ತಾಳಕ್ಕೆ ಕುಣಿಯುವ ಯುವಕರ ಸಂಭ್ರಮ, ಮನೆ ಮನೆ ಮುಂದೆ ದೀಪ ಬೆಳಗಿಸಿ, ಹೂವಿನ ಚಿತ್ತಾರ ಹರಡಿ, ಶುಭ ಹಾರೈಸುವ ಯುವತಿಯರು, ಹೀಗೆ ಮನ ಸೆಳೆಯುವ ದೃಶ್ಯಗಳಿಂದ ಲಂಬಾಣಿ ತಾಂಡಾಗಳು ಮನ ಸೂರೆಗೊಂಡವು.

ಸೋಮವಾರ ಸಂಜೆ ಯುವತಿಯರು ಗುಂಪಾಗಿ ಮನೆ ಮನೆಗಳಿಗೆ ತೆರಳಿ ಮನೆ ಅಂಗಳದ ಮುಂದೆ ದೀಪವಿಟ್ಟು, ಆರತಿ ಬೆಳಗಿ, ಮನೆಮಂದಿಗೆ ಶುಭ ಹಾರೈಸಿ 'ಮೇರಾ ಕಾಡೇರಾ' ಆಚರಿಸಿದರು. 'ಕತ್ತಲಿನಂಥ ಕಷ್ಟ ಕರಗಿ, ದೀಪದ ಬೆಳಕಿನಂತೆ ನೆಮ್ಮದಿ, ಸಮೃದ್ಧಿ ದೊರಕಲಿ' ಎಂದು ಹರಸಿದ ತರುಣಿಯರಿಗೆ ಬಂಧುಗಳು ಉಡುಗೊರೆ ನೀಡಿ ಸಂತಸಪಟ್ಟರು.

ದೀಪಾವಳಿ ದಿನ ಮಂಗಳವಾರ ಬೆಳಿಗ್ಗೆ ಮನೆಯಲ್ಲಿ ಹಿರಿಯರ ಪೂಜೆ ಮಾಡಿ, ಎಡೆ ಅರ್ಪಿಸಿದರು. ಪೂಜೆ ಮುಗಿಯುತ್ತಲೇ ಯುವತಿಯರು 'ಪೂಲ್ ತೊಡೇರಾ' ಕ್ಕೆ ಸಿದ್ದರಾದರು. ಲಂಬಾಣಿ ಸಂಪ್ರದಾಯದ ಉಡುಗೆ ಧರಿಸಿ, ಲಂಬಾಣಿ ಪದಗಳಿಗೆ ಹೆಜ್ಜೆ ಹಾಕುತ್ತಾ, ಹೂ ತರಲು ಹೊರಟರು. ಬಲೂನು, ಹಾರದಿಂದ ಅಲಂಕೃತ ಛತ್ರಿ ಹಿಡಿದ ಮಹಿಳೆಯ ಸುತ್ತ ಗುಂಪಾಗಿ ಯುವತಿಯರು ನರ್ತಿಸಿ, ಕಳೆ ತಂದರು. ಡಿಜೆ ಸದ್ದಿಗೆ ಯುವಕ, ಯುವತಿಯರು, ಮಹಿಳೆಯರು ಹೆಜ್ಜೆ ಹಾಕಿದರು. ಯುವಕರು ಬಗೆಬಗೆಯ ಉಡುಗೆ, ರುಮಾಲು ಧರಿಸಿ, ಕೋಲಾಟವಾಡುತ್ತ, ನಗಾರಿ ಸದ್ದಿಗೆ ಹೆಜ್ಜೆ ಹಾಕಿ ಕುಣಿಯುತ್ತಾ ಸಾಗಿದ್ದರು.

ಹೊಲದ ಹಾದಿಯಲ್ಲಿನ ತಂಕಟಿ ಹೂ, ಕಣಗಿಲ, ತೊಗರಿ ಹೂ ತಂದು ಸಗಣಿ ಮುದ್ದೆಗೆ ಮುಡಿಸಿ 'ಗೋದ್ನೋ' ಮಾಡಲಾಯಿತು. ಮನೆಗಳ ಮುಂದೆ ಗೋದ್ನೋ ಇಟ್ಟು, ಹೂ ಹರಡಿ ಯುವತಿಯರು ಪರಸ್ಪರ ಶುಭ ಕೋರಿದರು.

**ಶ್ರಮ ಸಂಸ್ಕೃತಿಯ ವಿಶೇಷ :** ಹೂ ತರುವ 'ಪೂಲ್ ತೊಡೇರ್' ದೀಪ ಬೆಳಗಿಸುವ 'ಮೇರಾ ಕಾಡೇರಾ' ಇವೆರಡೂ ನಮ್ಮ ಶ್ರಮ ಸಂಸ್ಕೃತಿಯ ವಿಶೇಷ. ಹಳೇ ತಲೆಮಾರಿನಿಂದ ಇಂದಿನ ಆಧುನಿಕ ಕಾಲದವರೆಗೂ ನಮ್ಮವರು ಉಳಿಸಿಕೊಂಡಿರುವ ಆಚರಣೆ ಬಗ್ಗೆ ಎಲ್ಲರೂ ಹೆಮ್ಮೆ ಪಡುತ್ತಾರೆ. ನಮ್ಮೂರಿನಲ್ಲಿ ಲಂಬಾಣಿ ಜನಾಂಗದವರೇ ಅತಿ ಹೆಚ್ಚು. ಈ ಹಬ್ಬಕ್ಕೆ ಊರಿನಿಂದ ದೂರದಲ್ಲಿರುವ ಎಲ್ಲಾ ಬಂಧುಗಳೂ ರಜೆ ಪಡೆದು ಆಗಮಿಸುತ್ತಾರೆ ಎಂದು ಆಲೂರು ಹಟ್ಟಿ ಮುಖಂಡರಾದ ಹನುಮಂತ ನಾಯ್ಕ, ರಂಗನಾಯ್ಕ ಸಂತಸ ಹಂಚಿಕೊಂಡರು.

**ಸಂಪ್ರದಾಯ ಉಳಿಸುವ ಹಬ್ಬ :** 'ದೀಪಾವಳಿ ನೆಲ, ಸಂಸ್ಕೃತಿ ಬಿಂಬಿಸುವ ಹಬ್ಬವಾದರೆ, ನಮ್ಮವರು 'ಹಿರಿಯರ ಹಬ್ಬ' ವಾಗಿ ಆಚರಿಸುತ್ತಾರೆ. ಉಡುಗೆ, ತೊಡುಗೆ, ಸಂಪ್ರದಾಯದ ಹಾಡು ಎಲ್ಲವನ್ನೂ ಉಳಿಸಿ, ಬೆಳೆಸಲು ದೀಪಾವಳಿ ಆಚರಿಸುತ್ತೇವೆ ಎನ್ನುತ್ತಾರೆ ಆನಗೋಡಿನ ಅನಿಲ್ ನಾಯ್ಕ, ಪರಶುರಾಂಪುರದ ಜಯಾ ನಾಯ್ಕ, ಓಂಕಾರ ನಾಯ್ಕ ಮತ್ತು ಬುಳ್ಳಾಪುರ ಚಂದ್ರಾನಾಯ್ಕ.

**ಸೈನಿಕರೂ ಬರುವ ದೀಪಾವಳಿ :** 'ತೋಳಹುಣಸೆಯಲ್ಲಿ ನೂರಾರು ಲಂಬಾಣಿ ಯುವಕರು ಸೈನಿಕರಾಗಿ ಸೇವೆ ಸಲ್ಲಿಸುತ್ತಿದ್ದು, ಎಲ್ಲಾಯೋಧರು ದೀಪಾವಳಿಗೆ ಬಂದು ನಮ್ಮೂರ ಹಬ್ಬದ ಸಂಭ್ರಮದಲ್ಲಿ ಪಾಲ್ಗೊಳ್ಳುತ್ತಾರೆ ಎನ್ನುತ್ತಾರೆ ಗ್ರಾಮದ ಟಿ. ಕುಮಾರ ನಾಯ್ಕ.

# ಅಕ್ಕಿ ರಾಜಕೀಯ : ಬಿಡ್ಡಿಂಗ್ ಪಕ್ಷಗಳದ್ದು, ಹೊರೆ ದೇಶದ್ದು

ಛತ್ತೀಸ್‌ಘಡದಲ್ಲಿ ಭತ್ತ ಖರೀದಿಗೆ ಬಿಡ್ಡಿಂಗ್ ನಡೆಯುತ್ತಿದೆ. ಆದರೆ, ಈ ಖರೀದಿಯಲ್ಲಿ ತೊಡಗಿರುವುದು ವರ್ತಕರಲ್ಲ, ರಾಜಕೀಯ ಪಕ್ಷಗಳು. ಬಿಜೆಪಿ 3,100 ರೂ. ದರದಲ್ಲಿ ಕ್ವಿಂಟಾಲ್ ಭತ್ತ ಖರೀದಿಸುವುದಾಗಿ ಹೇಳಿದ್ದರೆ, ಕಾಂಗ್ರೆಸ್ ಪಕ್ಷ 3,200 ರೂ.ಗಳ ಭರವಸೆ ಘೋಷಿಸುತ್ತಿದೆ.

ಈ ನಡುವೆಯೇ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇನ್ನೂ ಐದು ವರ್ಷಗಳ ಕಾಲ ಪಿ.ಎಂ.ಜಿ.ಕೆ.ಎ.ವೈ. ಯೋಜನೆಯಡಿ ಹೆಚ್ಚುವರಿ ಅಕ್ಕಿ ಉಚಿತವಾಗಿ ಕೊಡುವುದಾಗಿ ಘೋಷಿಸಿದ್ದಾರೆ. ಒಟ್ಟಾರೆ, ಚುನಾವಣಾ ಕಾಲದಲ್ಲಿ ಅಕ್ಕಿಯ ಮೇಲೆ ಆಸೆ, ಮತಗಳ ಮೇಲಿನ ಪ್ರೀತಿ ಎರಡೂ ಹೆಚ್ಚಾಗಿದೆ.

ಆದರೆ, ಈ ಅತಿ ಆಸೆ ಯಾವ ರೀತಿ ಗತಿ ಗೇಡು ಮಾಡಲಿದೆ ಎಂಬುದನ್ನು ಪಂಜಾಬ್ ಕಡೆ ಗಮನ ಹರಿಸಿದರೆ ಗೊತ್ತಾಗುತ್ತದೆ. ಹಸಿರು ಕ್ರಾಂತಿಯ ತಾಣ ಪಂಜಾಬ್, ಒಂದು ಕಾಲದಲ್ಲಿ ದೇಶದ ಅಭಿವೃದ್ಧಿಯ ಸಂಕೇತ ಪಂಜಾಬ್. ಈಗ ಆ ರಾಜ್ಯವನ್ನು ಶ್ರೀಲಂಕಾಗೆ ಹೋಲಿಸುವ ದುಸ್ಥಿತಿ ಬಂದಿದೆ.

ಇದಕ್ಕೆ ಹಲವಾರು ಕಾರಣಗಳಿವೆ. ಅದರಲ್ಲಿ ಒಂದು ಅತಿಯಾದ ಭತ್ತ ಹಾಗೂ ಗೋಧಿ ಬೆಳೆ. ಸಾಮಾನ್ಯವಾಗಿ ಉತ್ತಮ ಇಳುವರಿ ಎಲ್ಲರಿಗೂ ಲಾಭ ತರುತ್ತದೆ. ಆದರೆ, ಹಸಿರು ಕ್ರಾಂತಿಯ ಹೆಸರಿನಲ್ಲಿ ಅತಿಯಾದ ಗೊಬ್ಬರ, ಕೀಟನಾಶಕ, ಅಂತರ್ಜಲ ಬಳಕೆಯು ಸಮಸ್ಯೆ ತಂದಿದೆ. ಬೆಳೆಗಾಗಿ ಸರ್ಕಾರಗಳು ಗೊಬ್ಬರ, ಅಂತರ್ಜಲ ಇತ್ಯಾದಿಗಳಿಗೆ ಸಬ್ಸಿಡಿ ನೀಡುವ ಜೊತೆಗೆ ಬೆಂಬಲ ಬೆಲೆಯಲ್ಲಿ ಭತ್ತ ಖರೀದಿಸುತ್ತಿವೆ. ಇದರಿಂದ ಸರ್ಕಾರ ಸಬ್ಸಿಡಿ ಹೊರೆಗೆ ಸಿಲುಕಿದೆ.

ಮತ್ತೊಂದೆಡೆ ಹಸಿರು ಕ್ರಾಂತಿಯ ಪರಾಕಾಷ್ಠೆಯ ಹಂತ ಈಗಾಗಲೇ ತಲುಪಿರುವ ಕಾರಣ, ರೈತರ ಆದಾಯ ಮೊದಲಿನ ರೀತಿಯಲ್ಲಿ ಹೆಚ್ಚಾಗುತ್ತಿಲ್ಲ. ಇದೆಲ್ಲದರ ಜೊತೆಗೆ ಪ್ರತಿ



ಚಳಿಗಾಲದಲ್ಲಿ ರೈತರು ಕೂಳೆಯ ರಾಶಿಯನ್ನು ಸುಡುವುದರಿಂದ ದೆಹಲಿ ಜನತೆಗೆ ಹೊಗೆಯ ಬೋನಸ್ ಬೇರೆ ಸಿಗುತ್ತಿದೆ.

1966ರಿಂದ 2002-03ರವರೆಗೂ ಪಂಜಾಬ್ ದೇಶದ ಅತಿ ಹೆಚ್ಚು ತಲಾ ಆದಾಯ ಹೊಂದಿರುವ ರಾಜ್ಯಗಳ ಸಾಲಿನಲ್ಲಿತ್ತು. ಆದರೆ, ನಂತರ ಹಿನ್ನಡೆ ಕಂಡಿದೆ. ರಾಜ್ಯದ ಸಾಲದ ಪ್ರಮಾಣ 3.27 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ. ಪ್ರತಿ ವರ್ಷ ಹಳೆ ಸಾಲ ತೀರಿಸಲಿಕ್ಕೆ ಹೊಸ ಸಾಲ ತರುವ ಪರಿಸ್ಥಿತಿ ಇದೆ.

ಇಷ್ಟು ಸಾಲದು ಎಂಬಂತೆ, ಭತ್ತದ ಬೆಳೆಗಾಗಿ ಅಪಾರ ಪರಿಸರ ನಾಶವಾಗುತ್ತಿದೆ. ಮತ್ತೊಂದೆಡೆ, ಸಕ್ಕರೆ ಕಾಯಿಲೆ - ರಕ್ತದೊತ್ತಡ ಇರುವವರು ಅಕ್ಕಿ ಸೇವನೆ ಕಡಿಮೆ ಮಾಡುವಂತೆ ವೈದ್ಯರು ಸಲಹೆ ನೀಡುತ್ತಿದ್ದಾರೆ. ಅರ್ಥಾತ್, ಪರಿಸರದಿಂದ ಹಿಡಿದು ಕೃಷಿ ಆರ್ಥಿಕತೆವರೆಗೆ ರಂಪಾಟ ಮಾಡಿ ಪಡೆದ ಅಕ್ಕಿ ಮನುಷ್ಯರ ಆರೋಗ್ಯಕ್ಕೂ ಹಿತವಲ್ಲ.

ಇಷ್ಟಾದರೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಉಚಿತ ಅಕ್ಕಿ ಜನರಿಗೆ ಕೊಡಲು ತರಾತುರಿಯಲ್ಲಿವೆ. ಕೇಂದ್ರ ಸರ್ಕಾರ ಮುಂದಿನ ದಿನಗಳಲ್ಲಿ ಜಾರಿಗೆ ತರಲಿರುವ ಉಚಿತ ಅಕ್ಕಿ ಯೋಜನೆಯಿಂದ 5 ವರ್ಷಗಳಲ್ಲಿ ಲಕ್ಷ ಕೋಟಿ ರೂ.ಗಳ ಹೊರೆಯಾಗುವ ಅಂದಾಜಿದೆ. ಭಾರತ 19.44 ಕೋಟಿ ಜನರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ ಎಂಬ ಅಂದಾಜಿದೆ. ಅಕ್ಕಿ ಈ ಅಪೌಷ್ಟಿಕತೆಗೆ ಯಾವುದೇ ಕಾರಣಕ್ಕೂ ಉತ್ತರ ಅಲ್ಲ.

ಆದರೆ, ಸರ್ಕಾರ ಭತ್ತದ ಬೆಳೆಗೆ ಪ್ರೋತ್ಸಾಹ ಕೊಡುತ್ತಾ ಹೋದಂತೆ ಉಳಿದ ಕಾಳು, ಬೇಳೆಗಳ ಇಳುವರಿ ಕಡಿಮೆಯಾಗಲಿದೆ. ಈಗಾಗಲೇ ಹೆಚ್ಚಾಗಿರುವ ಬೇಳೆಯ ಬೆಲೆ ಮತ್ತಷ್ಟು ಹೆಚ್ಚಾಗಲಿದೆ. ಅಂತಿಮವಾಗಿ ಜನ ಆರೋಗ್ಯಕರ ಆಹಾರ ಪಡೆಯುವುದು ಇನ್ನಷ್ಟು ದುಬಾರಿಯಾಗಲಿದೆ.

ಭಾರತದ ಮಕ್ಕಳಲ್ಲಿ ಅಪೌಷ್ಟಿಕತೆ ಉಂಟಾದರೆ, ಅದು ಮುಂದಿನ ಪೀಳಿಗೆಯ ಮೇಲೂ ಪರಿಣಾಮ ಬೀರುತ್ತದೆ. ಒಂದೆಡೆ ಸಬ್ಸಿಡಿ ಹೊರೆ, ಇನ್ನೊಂದೆಡೆ ಅಪೌಷ್ಟಿಕತೆಯ ಹೊರೆ. ಮತ್ತೊಂದೆಡೆ ದುಬಾರಿಯಾಗುವ ಪೌಷ್ಟಿಕ ಆಹಾರ. ಈ ಎಲ್ಲಾ ಸಮಸ್ಯೆಗಳು ಮುಂದಿನ ದಿನಗಳಲ್ಲಿ ಹೆಚ್ಚಾಗುವ ಅಪಾಯವಿದೆ.

ಇಷ್ಟಾದರೂ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಗಂಭೀರ ಸಮಸ್ಯೆಗಳತ್ತ ಗಮನ ಹರಿಸುವ ಸಾಧ್ಯತೆ ಕಡಿಮೆಯೇ. ತೀವ್ರ ಸಮಸ್ಯೆಯ ಸುಳಿಯಲ್ಲಿರುವ ಪಂಜಾಬ್ ಸರ್ಕಾರವೇ ಸುಧಾರಣೆಯ ಕಡೆ ತೆರಳುವ ಧೈರ್ಯ ತೋರುತ್ತಿಲ್ಲ. ಹೀಗಿರುವಾಗ ಉಳಿದ ರಾಜ್ಯಗಳೇಕೆ ತಲೆ ಕೆಡಿಸಿಕೊಳ್ಳಬೇಕು?

ಒಟ್ಟಾರೆ, ಭತ್ತಕ್ಕೆ ಈಗ ಕೇಂದ್ರದ ಅಚ್ಛೇ ದಿನ್ ಹಾಗೂ ರಾಜ್ಯಗಳ ಗ್ಯಾರಂಟಿಗಳು ಸೇರಿಕೊಳ್ಳುವ ಎಲ್ಲ ಸಾಧ್ಯತೆಗಳು ಕಂಡು ಬರುತ್ತಿವೆ. ಹೊಟ್ಟೆ ತುಂಬ ಜನರಿಗೆ ಅನ್ನ ಸಿಗುವ ಸಾಧ್ಯತೆ ಇದೆಯಾದರೂ, ಆರೋಗ್ಯ ಭಾಗ್ಯ ಮಾತ್ರ ದುಬಾರಿಯಾಗಲಿದೆ.

**- ಎಸ್.ಎ. ಶ್ರೀನಿವಾಸ್ ದಾವಣಗೆರೆ.**

# ಅಹಮದಾಬಾದ್ ಹೋಟೆಲ್, ವಿಮಾನಗಳಿಗೆ ಕ್ರಿಕೆಟ್ ಸುಗ್ಗಿ

## ಹೋಟೆಲ್ ಬಾಡಿಗೆ ದರ 2 ಲಕ್ಷ ರೂ., ಪ್ರಯಾಣ ದರ ಹಲವು ಪಟ್ಟು ಹೆಚ್ಚಳ

ಅಹಮದಾಬಾದ್, ನ. 17 – ಭಾರತ ವಿಶ್ವಕಪ್ ಪಂದ್ಯಾವಳಿಯ ಫೈನಲ್ ಪ್ರವೇಶಿಸಿರುವುದು ಅಹಮದಾಬಾದ್ ಹೋಟೆಲ್ ಹಾಗೂ ಅಲ್ಲಿಗೆ ತೆರಳುವ ವಿಮಾನಗಳಿಗೆ ಸುಗ್ಗಿ ತಂದಿದೆ. ಹೋಟೆಲ್‌ಗಳ ಬಾಡಿಗೆ ದರ ಗಗನಕ್ಕೆ ತಲುಪಿದ್ದು, ಪ್ರಯಾಣ ದರವೂ ತೀವ್ರವಾಗಿ ಹೆಚ್ಚಳವಾಗಿದೆ.

ಭಾನುವಾರದಂದು ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ನಡುವೆ ವಿಶ್ವಕಪ್ ಕ್ರಿಕೆಟ್‌ನ ಅಂತಿಮ ಪಂದ್ಯ ನಡೆಯಲಿದೆ.

ಪಂದ್ಯ ನಡೆಯುವ ರಾತ್ರಿಯಂದು ಕೆಲ ಪಂಚತಾರಾ ಹೋಟೆಲ್‌ಗಳ ಕೋಣೆಗಳ ಬಾಡಿಗೆ ದರ 2 ಲಕ್ಷ ರೂ.ಗಳವರೆಗೆ ತಲುಪಿದೆ. ಉಳಿದ ಹೋಟೆಲ್‌ಗಳೂ ಸಹ ಬಾಡಿಗೆ ದರವನ್ನು ಐದರಿಂದ ಏಳು ಪಟ್ಟು ಹೆಚ್ಚಿಸಿವೆ.

ವಿಶ್ವಕಪ್ ಅಂತಿಮ ಪಂದ್ಯದ ಬಗ್ಗೆ ಭಾರತದಲ್ಲಷ್ಟೇ ಅಲ್ಲದೇ ವಿದೇಶಗಳಲ್ಲೂ ಆಸಕ್ತಿ ಕಂಡು ಬರುತ್ತಿದೆ. ದುಬೈ, ಆಸ್ಟ್ರೇಲಿಯಾ ಹಾಗೂ ದಕ್ಷಿಣ ಆಫ್ರಿಕಾಗಳಿಂದಲೂ ಪಂದ್ಯ ವೀಕ್ಷಣೆಗೆ ಜನ ಬಂದಿದ್ದಾರೆ ಎಂದು ಗುಜರಾತ್ ಹೋಟೆಲ್ ಮತ್ತು ರೆಸ್ಟೋರೆಂಟ್ ಒಕ್ಕೂಟದ ಅಧ್ಯಕ್ಷ ನರೇಂದ್ರ ಸೋಮನಿ ಹೇಳಿದ್ದಾರೆ.

ಅಹಮದಾಬಾದ್‌ನ ತಾರಾ ಹೋಟೆಲ್‌ಗಳಲ್ಲಿ 5 ಸಾವಿರ ಕೋಣೆಗಳು ಲಭ್ಯವಿವೆ. ನರೇಂದ್ರ ಮೋದಿ ಕ್ರೀಡಾಂಗಣದ ಸಾಮರ್ಥ್ಯ 1.20 ಲಕ್ಷವಾಗಿದೆ. 30ರಿಂದ 40 ಸಾವಿರ ಜನ ಹೊರಗಿನಿಂದ ಬರುವ ನಿರೀಕ್ಷೆ ಇದೆ ಎಂದವರು ತಿಳಿಸಿದ್ದಾರೆ. ಹೋಟೆಲ್ ಕೋಣೆಗಳ ಬೇಡಿಕೆ ಹೆಚ್ಚಾದಂತೆ ದರವೂ ಹೆಚ್ಚಾಗಿದೆ. ಈ ಹಿಂದೆ ಸಾಮಾನ್ಯ ದರದಲ್ಲಿ ಲಭ್ಯವಾಗುತ್ತಿದ್ದ ಕೋಣೆಗಳ ಬೆಲೆ 50 ಸಾವಿರ ರೂ.ಗಳಿಂದ 1.25 ಲಕ್ಷ ರೂ.ಗಳವರೆಗೆ ತಲುಪಿದೆ.

ಜನರು ಹೋಟೆಲ್‌ಗೆ ಮುಂಚೆ ವಿಮಾನದ ಟಿಕೆಟ್ ಕಾಯ್ದಿರಿಸುತ್ತಾರೆ. ಅಹಮದಾಬಾದ್ ಅಷ್ಟೇ ಅಲ್ಲದೇ ಸುತ್ತಲಿನ ನಗರಗಳಲ್ಲಿರುವ ಹೋಟೆಲ್‌ಗಳ ಬಾಡಿಗೆ ದರವೂ ಹೆಚ್ಚಾಗಿದೆ ಎಂದು ಸೋಮನಿ ಹೇಳಿದ್ದಾರೆ.

ಆನ್‌ಲೈನ್ ಮಾಹಿತಿಯ ಪ್ರಕಾರ ಐ.ಟಿ.ಸಿ. ನರ್ಮದ ಹಾಗೂ ಹಯಾತ್ ರೀಜೆನ್ಸ್ ಹೋಟೆಲ್ ಕೋಣೆಗಳ ಒಂದು ದಿನದ ಬಾಡಿಗೆ 2 ಲಕ್ಷ ರೂ.ಗಳಿಗೂ ಹೆಚ್ಚಾಗಿದೆ.

ಸಾಮಾನ್ಯ ಹೋಟೆಲ್‌ಗಳ ಬಾಡಿಗೆ ದರವೂ ಐದರಿಂದ ಏಳು ಪಟ್ಟು ಹೆಚ್ಚಾಗಿದೆ. ಸಿ.ಜಿ. ರಸ್ತೆಯಲ್ಲಿರುವ ಹೋಟೆಲ್ ಕ್ರೌನ್ ಸಾಮಾನ್ಯವಾಗಿ ಪ್ರತಿ ರಾತ್ರಿಗೆ 3-4 ಸಾವಿರ ರೂ. ಪಡೆಯುತ್ತದೆ. ಪಂದ್ಯದ ದಿನದಂದು ಬಾಡಿಗೆ 20 ಸಾವಿರ ರೂ.ಗಳವರೆಗೆ ತಲುಪಿದೆ.

ದೇಶದ ಬೇರೆ ಕಡೆಗಳಿಂದ ಅಹಮದಾಬಾದ್‌ಗೆ ಬರುವ ವಿಮಾನಯಾನ ದರವೂ ಹೆಚ್ಚಾಗಿದೆ. ಚೆನ್ನೈ - ಅಹಮದಾಬಾದ್ ದರ ಸಾಮಾನ್ಯ ದಿನಗಳಲ್ಲಿ 5 ಸಾವಿರ ಆಗಿತ್ತು. ಪಂದ್ಯದ ಹಿನ್ನೆಲೆಯಲ್ಲಿ ಪ್ರಯಾಣ ದರ 25 ಸಾವಿರ ರೂ.ಗಳವರೆಗೆ ತಲುಪಿದೆ.

ಬೇಡಿಕೆ ಹೆಚ್ಚಾಗಿರುವ ಕಾರಣ ಅಹಮದಾಬಾದ್‌ಗೆ ಬರುವ ಎಲ್ಲಾ ವಿಮಾನಗಳ ದರವೂ ಮೂರರಿಂದ ಐದು ಪಟ್ಟು ಹೆಚ್ಚಾಗಿದೆ ಎಂದು ಟ್ರಾವೆಲ್ ಏಜೆಂಟ್ ಮನುಭಾಯಿ ಲಂಚೋಲಿ ತಿಳಿಸಿದ್ದಾರೆ.

ಭಾರತದಲ್ಲಿ ನಡೆಯುವ ವಿಶ್ವಕಪ್ ಪಂದ್ಯದಲ್ಲಿ ಭಾರತ ಪಾಲ್ಗೊಳ್ಳುವುದನ್ನು ನೋಡುವುದು ಜೀವನದಲ್ಲಿ ಒಮ್ಮೆ ಸಿಗುವ ಅವಕಾಶ. ಹೀಗಾಗಿ ಕ್ರಿಕೆಟ್ ಅಭಿಮಾನಿಗಳು ಹೆಚ್ಚಿನ ಹಣ ಪಾವತಿಸಲು ಸಿದ್ಧರಾಗಿದ್ದಾರೆ ಎಂದೂ ಅವರು ಹೇಳಿದ್ದಾರೆ.

# ಪ್ರಶ್ನಿಸುವ ಮನೋಭಾವ ಇರಲಿ : ವಿಜ್ಞಾನಿ ದಾರುಕೇಶ್

## ಹೊನ್ನಾಳಿ : ಇಸ್ರೋದ ವಿಜ್ಞಾನಿಯೊಂದಿಗೆ ಹಮ್ಮಿಕೊಂಡಿದ್ದ ಸಂವಾದ



ಹೊನ್ನಾಳಿ, ನ. 17 - ವಿದ್ಯಾರ್ಥಿಗಳು ಪ್ರಶ್ನೆ ಮಾಡುವ ಮನೋಭಾವವನ್ನು ರೂಢಿಸಿಕೊಳ್ಳಬೇಕು ಎಂದು ಚಂದ್ರಯಾನ-3 ತಂಡದ ಇಸ್ರೋ ವಿಜ್ಞಾನಿ ಬಿ.ಎಚ್.ಎಂ. ದಾರುಕೇಶ್ ಸಲಹೆ ನೀಡಿದರು.

ತಾಲ್ಲೂಕಿನ ಎಚ್. ಕಡದಕಟ್ಟೆಯ ಶ್ರೀ ಸಾಯಿ ಗುರುಕುಲ ವಸತಿಯುತ ಸಿಬಿಎಸ್‌ಇ ಶಾಲೆ ಮತ್ತು ಶ್ರೀ ಸಾಯಿ ಗುರುಕುಲ ಪಿಯುಸಿ ಕಾಲೇಜ್‌ಗಳ ಸಂಯುಕ್ತಾಶ್ರಯದಲ್ಲಿ ಇಸ್ರೋದ ವಿಜ್ಞಾನಿಯೊಂದಿಗೆ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ವಿದ್ಯಾರ್ಥಿಗಳು ವಿನೂತನ ಆಲೋಚನೆಗಳೊಂದಿಗೆ ಮತ್ತು ಕಠಿಣ ಪರಿಶ್ರಮ ಹಾಗೂ ಸಮರ್ಪಣಾ ಮನೋಭಾವದಿಂದ ಉನ್ನತ ಸಾಧನೆ ಮಾಡಲು ಸಾಧ್ಯವೆಂದು ತಿಳಿಸಿದರು.

ವಿದ್ಯಾರ್ಥಿಗಳು ತಮ್ಮ ಸುತ್ತ-ಮುತ್ತಲಿನ ವ್ಯವಸ್ಥೆಯಲ್ಲೂ ಕಲಿಯಲು ಸಾಕಷ್ಟು ಅವಕಾಶಗಳಿರುತ್ತವೆ. ಪ್ರತಿಯೊಂದನ್ನೂ ಪ್ರಶ್ನಾರ್ಥಕವಾಗಿ ನೋಡಿದರೆ ಹೊಸದನ್ನು ಕಲಿಯಲು ಅವಕಾಶ ಸಿಗುತ್ತದೆ ಎಂದು ಕಿವಿ ಮಾತು ಹೇಳಿದರು.

ಚಂದ್ರಯಾನ-3ರ ಯಶಸ್ಸು ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡಬಹುದು. ಏಕೆಂದರೆ ವಿಜ್ಞಾನಿಗಳ ತಂಡವು ಚಂದ್ರಯಾನ-2 ರಲ್ಲಿ ವೈಫಲ್ಯವನ್ನು ಕಂಡರೂ ಮತ್ತೆ ತಮ್ಮ ಗುರಿಯನ್ನು ಬೆನ್ನಟ್ಟಿ ಸಮರ್ಪಣಾ ಮನೋಭಾವದಿಂದ ಕೆಲಸ ಮಾಡಿ ಚಂದ್ರಯಾನ-3 ಮಿಷನ್ ಯಶಸ್ವಿಯಾಗಲು ಸಹಕಾರಿಯಾಯಿತು ಎಂದು ವಿಜ್ಞಾನಿ ವಿವರಿಸಿದರು.

ಗ್ರಾಮೀಣ ಭಾಗಗಳಲ್ಲಿಯೂ ಅತ್ಯುತ್ತಮ ಪ್ರತಿಭೆಯುಳ್ಳ ವಿದ್ಯಾರ್ಥಿಗಳಿದ್ದು, ಅವರನ್ನು ಗುರುತಿಸುವ ಕೆಲಸವಾದಾಗ ದೇಶಕ್ಕೆ ಇನ್ನೂ ಅನೇಕ ವಿಜ್ಞಾನಿಗಳನ್ನು ಕೊಡುಗೆಯಾಗಿ ನೀಡಬಹುದು ಎಂದು ತಿಳಿಸಿದರು.

ವಿಜ್ಞಾನ ಕ್ಷೇತ್ರದಲ್ಲೂ ಸಾಕಷ್ಟು ಉದ್ಯೋಗಾವಕಾಶಗಳಿದ್ದು, ಇಸ್ರೋದಲ್ಲಿಯೂ ಕೆಲಸ ಮಾಡಬಹುದು. ಇಲ್ಲವೇ ಇಸ್ರೋಗೆ ಅವಶ್ಯವಿರುವ ವಸ್ತುಗಳನ್ನು ಹಲವಾರು ಕಂಪನಿಗಳು ತಯಾರು ಮಾಡಿಕೊಡುತ್ತಿದ್ದು, ಅಂತಹ ಕಂಪನಿಗಳಲ್ಲಿಯೂ ಕೆಲಸ ಗಿಟ್ಟಿಸಿಕೊಂಡು ಇಸ್ರೋದ ಮುಂದಿನ ಯೋಜನೆಗಳಿಗೆ ತಮ್ಮ ಅಮೂಲ್ಯವಾದ ಕೊಡುಗೆಯನ್ನು ನೀಡಬಹುದು ಎಂದು ಮಾಹಿತಿ ನೀಡಿದರು.

ಚಂದ್ರಯಾನ-3ರ ಮಿಷನ್‌ನ ಕಾರ್ಯಾಚರಣೆಯ ಸವಾಲುಗಳು ಮತ್ತು ದೇಶಕ್ಕಾಗುವ ಉಪಯೋಗಗಳ ಬಗ್ಗೆ, ಆದಿತ್ಯ ಎಲ್-1, ಚಂದ್ರನ ಮೇಲ್ಮೈ ಮತ್ತು ವಿಜ್ಞಾನಿಯಾಗಲು ಅವಶ್ಯವಿರುವ ವಿದ್ಯಾಭ್ಯಾಸದ ಕುರಿತಂತೆ ವಿದ್ಯಾರ್ಥಿಗಳು ವಿಜ್ಞಾನಿ ದಾರುಕೇಶ್ ಅವರೊಂದಿಗೆ ಸಂವಾದಿಸಿದರು.

ಬಿಇಒ ನಂಜರಾಜ್ ಮಾತನಾಡಿ, ಇಸ್ರೋ ವಿಜ್ಞಾನಿ ಬಿ.ಎಚ್.ಎಂ. ದಾರುಕೇಶ್ ಅವರು ವಿಜಯನಗರ ಜಿಲ್ಲೆಯ ಕೊಟ್ಟೂರಿನವರಾಗಿದ್ದು, ಚಂದ್ರಯಾನ-3ರ ತಂಡದಲ್ಲಿ ಕೆಲಸ ಮಾಡಿ ನಮ್ಮ ದೇಶಕ್ಕೆ ಹೆಮ್ಮೆ ತರುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಈ ಸಂದರ್ಭದಲ್ಲಿ ಬಿಆರ್‌ಸಿ ತಿಪ್ಪೇಶಪ್ಪ, ಸಂಸ್ಥೆಯ ಕಾರ್ಯದರ್ಶಿ ಸೌಮ್ಯ ಪ್ರದೀಪ್ ಗೌಡ, ಖಜಾಂಚಿ ಡಿ.ಜಿ. ಸೋಮಪ್ಪ, ಟ್ರಸ್ಟಿಗಳಾದ ಡಿ.ಎಸ್. ಅರುಣ್, ವಾಣಿ ಸುರೇಂದ್ರಗೌಡ, ಕಾರ್ಯಕ್ರಮದಲ್ಲಿ ಸಂಸ್ಥೆಯ ಪ್ರಾಂಶುಪಾಲ ಎಚ್.ಎಂ. ದರ್ಶನ್, ಶಿಕ್ಷಣ ಸಂಯೋಜಕ ಎ.ಜಿ. ಹರೀಶ್ ಕುಮಾರ್, ಡಿ.ಎಸ್. ಪ್ರದೀಪ್ ಗೌಡ ಮತ್ತು ಇತರರು ಉಪಸ್ಥಿತರಿದ್ದರು.

ಪಿಯು ಕಾಲೇಜಿನ ಉಪನ್ಯಾಸಕರಾದ ದಿವ್ಯಾ ನಿರೂಪಿಸಿ, ಉಪನ್ಯಾಸಕ ಸಂತೋಷ್ ಸ್ವಾಗತಿಸಿ, ಮಹೇಶ್ ವಂದಿಸಿದರು.

# ಅಣಬೆ, ಮೋಟಾರ್ ರಿವೈಂಡಿಂಗ್ ತರಬೇತಿ

ದಾವಣಗೆರೆ, ನ. 17 - ತೋಳಹುಣಸೆ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಹಳೇ ತೋಳಹುಣಸೆಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಮಟ್ಟದ ಅಭ್ಯರ್ಥಿಗಳಿಗಾಗಿ ಉಚಿತ ಊಟ ಮತ್ತು ವಸತಿಯೊಂದಿಗೆ ಅಣಬೆ ಬೇಸಾಯ ತರಬೇತಿ, ವಿದ್ಯುತ್ ಪಂಪ್‌ಸೆಟ್ ಮತ್ತು ಮೋಟಾರ್ ರಿವೈಂಡಿಂಗ್ ತರಬೇತಿ ಹಮ್ಮಿಕೊಳ್ಳಲಾಗಿದೆ.

30 ದಿನಗಳ ಈ ತರಬೇತಿಗೆ ಇದೇ ದಿನಾಂಕ 24 3ರಂದು ಸಂದರ್ಶನ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 70199 80484, 94833 86143, 9964111314, 9538395817, 9481977076.

# ಕಾಶ್ಮೀರದಲ್ಲಿ ಐವರು ಉಗ್ರರು ಹತ

ಶ್ರೀನಗರ, ನ. 17 – ಜಮ್ಮು ಮತ್ತು ಕಾಶ್ಮೀರದ ಕುಲ್ಗಾಂ ಜಿಲ್ಲೆಯಲ್ಲಿ ನಿನ್ನೆ ರಾತ್ರಿ ನಡೆಸಲಾದ ಕಾರ್ಯಾಚರಣೆಯಲ್ಲಿ ಲಷ್ಕರ್ ಎ ತೊಯ್ಬಾದ ಐವರು ಉಗ್ರರು ಹತರಾಗಿದ್ದಾರೆ. ಡ್ರೋನ್ ದೃಶ್ಯಗಳ ಮೂಲಕ ಹತ ಉಗ್ರರ ಮೃತದೇಹಗಳನ್ನು ಪತ್ತೆ ಮಾಡಲಾಗಿದೆ. ನೆಹಮ ಎಂಬ ಹಳ್ಳಿಯಲ್ಲಿ ಉಗ್ರರಿರುವ ಮಾಹಿತಿ ದೊರೆತ ನಂತರ ಭದ್ರತಾ ಪಡೆಗಳು ಗುರುವಾರದಿಂದ ಶೋಧ ಕಾರ್ಯಾಚರಣೆ ಆರಂಭಿಸಿದ್ದವು. ಭದ್ರತಾ ಪಡೆಗಳ ಮೇಲೆ ಉಗ್ರರು ಗುಂಡು ಹಾರಿಸಿದಾಗ ಚಕಮಕಿ ನಡೆಯಿತು. ಶುಕ್ರವಾರ ಬೆಳಗಿನ ಜಾವದವರೆಗೆ ಗುಂಡಿನ ಚಕಮಕಿ ಮುಂದುವರೆದಿತ್ತು. ಉಗ್ರರಿದ್ದ ಮನೆಗೆ ಚಕಮಕಿ ಕಾರಣದಿಂದ ಬೆಂಕಿ ಹತ್ತಿಕೊಂಡಿತು. ಇದರಿಂದಾಗಿ ಅವರು ಹೊರ ಬರಬೇಕಾಯಿತು.

**ಭೂಮಾತ ರೈತ ಉತ್ಪಾದಕರ ಕಂಪನಿ ಲಿ.,**

ಕೃಷಿ ಇಲಾಖೆ, ದಾವಣಗೆರೆ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಸಹಯೋಗದಲ್ಲಿ
ನಾಗನೂರು ಗ್ರಾಮ, ಶಾಮನೂ ಪೋಸ್ಟ್ - 577004, ದಾವಣಗೆರೆ ತಾಲ್ಲೂಕು ಜಿಲ್ಲೆ.
EMail Id : bhumathafarmers@gmail.com,

**ಬೇಕಾಗಿದ್ದಾರೆ**

ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡಲು ಸ್ತ್ರೀ ಅಥವಾ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. SSLC ಅಥವಾ PUC ಯೊಂದಿಗೆ **ಕಂಪ್ಯೂಟರ್ ಮತ್ತು ಟ್ಯಾಲಿ ತರಬೇತಿ** ಹೊಂದಿರುವ ಅಭ್ಯರ್ಥಿಗಳು ಸೂಕ್ತ ದಾಖಲೆಗಳೊಂದಿಗೆ ದಿನಾಂಕ 01.12.2023ರಂದು ನಡೆಯುವ ನೇರ ಸಂದರ್ಶನದಲ್ಲಿ ಪಾಲ್ಗೊಳ್ಳಬಹುದು.

ಆಡಳಿತ ಮಂಡಳಿ ಸದಸ್ಯರ ಒಪ್ಪಿಗೆ ಮೇರೆಗೆ
CEO
BMFPCL, ನಾಗನೂರು

# ಮುಸ್ಲಿಂ ಸ್ಪೀಕರ್ ಎದುರು ಬಿಜೆಪಿ ನಾಯಕರು ಕೈ ಮುಗಿದು ನಿಲ್ಲುತ್ತಾರೆ

## ಇದು ಕಾಂಗ್ರೆಸ್ ಹೆಗ್ಗಳಿಕೆ ಎಂದ ಸಚಿವ ಜಮೀರ್ ಅಹಮದ್

ಬೆಂಗಳೂರು, ನ. 17 – ಕರ್ನಾಟಕದಲ್ಲಿ ಮುಸ್ಲಿಂ ವಿಧಾನಸಭಾಧ್ಯಕ್ಷರಿಗೆ ದೊಡ್ಡ ದೊಡ್ಡ ಬಿಜೆಪಿ ನಾಯಕರು ಕೈ ಮುಗಿದು ನಮಸ್ಕಾರ ಮಾಡುತ್ತಾರೆ. ಈ ರೀತಿ ಮಾಡಿರುವುದು ಕಾಂಗ್ರೆಸ್ ಪಕ್ಷ ಎಂದು ಸಚಿವ ಜಮೀರ್ ಅಹಮದ್ ಖಾನ್ ಹೇಳಿದ್ದಾರೆ.

ತೆಲಂಗಾಣದಲ್ಲಿ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ಮಾತನಾಡಿದ ಅವರು, ರಾಜಕೀಯ ಇತಿಹಾಸದಲ್ಲಿ ಮುಸ್ಲಿಂ ವ್ಯಕ್ತಿಯನ್ನು ಸ್ಪೀಕರ್ ಮಾಡಿರಲಿಲ್ಲ. ಈಗ ಮೊದಲ ಬಾರಿಗೆ ಮುಸ್ಲಿಂ ವ್ಯಕ್ತಿಯನ್ನು ಸ್ಪೀಕರ್ ಮಾಡಿದ್ದು ಕಾಂಗ್ರೆಸ್ ಪಕ್ಷ. ಈಗ ದೊಡ್ಡ ದೊಡ್ಡ ಬಿಜೆಪಿ ನಾಯಕರು ಕೂಡಾ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರಿಗೆ ನಮಸ್ಕಾರ ಎಂದು ಕೈ ಮುಗಿದು ನಿಲ್ಲುತ್ತಾರೆ. ಇದನ್ನು ಮಾಡಿದ್ದು ಯಾರು? ಕಾಂಗ್ರೆಸ್ ಪಕ್ಷ ಎಂದು ಹೇಳಿದ್ದಾರೆ.

ಜಮೀರ್ ಹೇಳಿಕೆಯನ್ನು ತರಾಟೆಗೆ ತೆಗೆದುಕೊಂಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಈ ರೀತಿಯ ಹೇಳಿಕೆ ದುರದೃಷ್ಟಕರ ಹಾಗೂ ಖಂಡನೀಯ. ಸಭಾಧ್ಯಕ್ಷರ ಪೀಠದಲ್ಲಿ ಕುಳಿತಿರುವವರಿಗೆ ಶಾಸಕರು ಗೌರವ ಕೊಡುವುದು ವ್ಯಕ್ತಿಗಲ್ಲ. ಸ್ಥಾನಕ್ಕೆ ಹಾಗೂ ಸಂವಿಧಾನಕ್ಕೆ ಎಂದಿದ್ದಾರೆ.

ಜಮೀರ್ ಮನಸ್ಸಿನಲ್ಲಿರುವ ಅಂತರಾಳದ ವಿಚಾರವನ್ನು ಬಹಿರಂಗವಾಗಿ ಹೇಳಿಕೊಂಡಿದ್ದಾರೆ. ಇನ್ನಾದರೂ ಎಚ್ಚರಿಕೆಯಿಂದ ಮಾತನಾಡಲಿ ಎಂದು ಹೇಳಿದ್ದಾರೆ.

ಜೆಡಿಎಸ್ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ಸಹ ಜಮೀರ್ ಹೇಳಿಕೆಗೆ ತರಾಟೆಗೆ ತೆಗೆದುಕೊಂಡಿದ್ದು, ನಾಳೆ ಸ್ಪೀಕರ್ ಸದನಕ್ಕೆ ಬಂದಾಗ ನಾವು ಎದ್ದು ಗೌರವಿಸುವುದಿಲ್ಲ ಎಂದರೆ ದೇಶದ ಸಂವಿಧಾನ ವ್ಯವಸ್ಥೆ ಎಲ್ಲಿಗೆ ಹೋಗುತ್ತದೆ? ಇಂತಹ ಹುಡುಗಾಟಿಕೆಯ ವ್ಯಕ್ತಿಗಳನ್ನು ಮುಂದಿಟ್ಟುಕೊಂಡು, ಸದನದ ನಿಯಮಾವಳಿಗಳನ್ನು ಉಳಿಸುತ್ತೀರಾ? ಎಂದು ಪ್ರಶ್ನಿಸಿದ್ದಾರೆ.

# ಕಾಜೋಲ್‌ಗೂ ಕಾಡಿದ ಡೀಪ್‌ಫೇಕ್

ನವದೆಹಲಿ, ನ. 17 – ಬಾಲಿವುಡ್ ನಟಿ ಕಾಜೋಲ್ ಅವರ ಡೀಪ್ ಫೇಕ್ ವಿಡಿಯೋ ಒಂದು ಇಂಟರ್‌ನೆಟ್‌ನಲ್ಲಿ ಕಂಡುಬಂದಿದೆ. ಈ ಹಿಂದೆ ನಟಿಯರಾದ ರಶ್ಮಿಕಾ ಮಂದಣ್ಣ ಹಾಗೂ ಕತ್ರಿನಾ ಕೈಫ್ ಅವರ ಫೇಕ್ ವಿಡಿಯೋಗಳು ಹರಿದಾಡಿದ್ದವು. ಇಂಗ್ಲಿಷ್ ಸಾಮಾಜಿಕ ಜಾಲತಾಣದ ಇನ್‌ಫ್ಲುಯೆನ್ಸರ್ ಒಬ್ಬರ ವಿಡಿಯೋ ತಿರುಚಿ ಕಾಜೋಲ್ ಅವರದ್ದು ಎಂಬಂತೆ ಬಿಂಬಿಸಲಾಗಿದೆ. ರೋಸಿ ಬ್ರೀನ್ ಅವರು ಈ ಹಿಂದೆ ವಿಡಿಯೋ ಒಂದನ್ನು ಟಿಕ್‌ಟಾಕ್‌ನಲ್ಲಿ ಪ್ರಕಟಿಸಿದ್ದರು. ಬ್ರೀನ್ ಅವರ ಮುಖವನ್ನು ಕಾಜೋಲ್ ಜೊತೆ ಬದಲಿಸಲಾಗಿದೆ.

## ಭೂ ದಾಖಲೆಗಳ ಉಪನಿರ್ದೇಶಕರ ನ್ಯಾಯಾಲಯ, ದಾವಣಗೆರೆ

**ಆರ್.ಎ. ಸಂ. 365/2023**

**ಅಪೀಲುದಾರರು :** ಸಿ. ಆನಂದಯ್ಯ ಮತ್ತೊಬ್ಬರು **ವಿರುದ್ಧ**
**ಎದುರುದಾರರು :** 1) ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ದಾವಣಗರೆ.

ಇವರಿಗೆ,
1) **ಬಿ.ಜಿ. ಪ್ರಭುಲಿಂಗಯ್ಯ ತಂದೆ ಲೇಟ್ ಬಿ.ಜಿ. ರೇವಣಸಿದ್ದಯ್ಯ** 60 ವರ್ಷ, ಕೃಷಿಕರು (ಪೋಡು 4/5 ಮತ್ತು 20), ಬಸವನಾಳು, ದಾವಣಗೆರೆ ತಾಲ್ಲೂಕು-577512 - 5ನೇ ಎದುರುದಾರರು.
2) **ಶ್ರೀಮತಿ ಕರಿಬಸಮ್ಮ ಗಂಡ ಎಂ.ಎನ್.ಪ್ರಸನ್ನ**, 32 ವರ್ಷ, ಕೃಷಿಕರು, ಬಸವನಾಳು ಗ್ರಾಮ, ದಾವಣಗೆರೆ ತಾಲ್ಲೂಕು - 577512 - 10ನೇ ಎದುರುದಾರರು.

**ಸಿ.ಪಿ.ಸಿ. ಆದೇಶ 5 ನಿಯಮ 20 ಉಪ ನಿಯಮ (1-ಎ) ಅಡಿಯಲ್ಲಿ ನೋಟೀಸ್**

1. ಅಪೀಲುದಾರರು ದಾವಣಗೆರೆ ತಾಲ್ಲೂಕು ಗಿರಿಯವ್ವನಹಳ್ಳಿ ಗ್ರಾಮದ ಸ.ನಂ. 4/1 ರಿಂದ 4/24ರವರೆಗಿನ ಸ.ನಂ.ಗಳಲ್ಲಿನ ವಿಸ್ತೀರ್ಣ 52 ಎಕರೆ 08 ಗುಂಟೆ ಅನೇಕ ರೀತಿಯಲ್ಲಿ ಹರಿದು ಅನೇಕ ಹಿಸ್ಸಾದಾರರಲ್ಲಿ ಹಂಚಿಕೆಯಾಗಿರುತ್ತದೆ. ಇವುಗಳಲ್ಲಿ ಕೆಲವು ಅಕ್ಕಪಕ್ಕದ ಪೋಡುಗಳಲ್ಲಿ ಒತ್ತುವರಿಯಾಗಿದ್ದು ಹಿಡುವಳಿದಾರರಿಗೆ ಬಹಳಷ್ಟು ತೊಂದರೆಯಾಗಿರುವುದರಿಂದ, ಇಂತಹ ದೋಷಗಳನ್ನು ಸರಿಪಡಿಸಿಕೊಳ್ಳಲು ಎಲ್ಲಾ ಪೋಡುಗಳನ್ನು ರದ್ದುಪಡಿಸಿ ದಾಖಲೆ ಮತ್ತು ಸ್ವಾಧಿನಾನುಭವದಂತೆ ಹದ್ದುಬಸ್ತು ಮಾಡಲು ಕೋರಿ ಈ ಅಪೀಲನ್ನು ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ.
2. ಈ ಅಪೀಲಿನಲ್ಲಿ ನೀವು 5 ಮತ್ತು 10ನೇ ಎದುರುದಾರರಾಗಿದ್ದು ಈ ಸಂಬಂಧ ಘನ ನ್ಯಾಯಾಲಯ ಸಮನ್ಸ್‌ಗಳನ್ನು ಆರ್.ಪಿ.ಎಡಿ. ಮುಖಾಂತರ ಕಳುಹಿಸಿದ್ದು, ನೀವು ಅವುಗಳನ್ನು ಸ್ವೀಕರಿಸಿರುವುದಿಲ್ಲ.
3. ಈಗ ದಾವೆಯ ವಿಚಾರಣೆಯನ್ನು ಘನ ನ್ಯಾಯಾಲಯ ದಿನಾಂಕ 23.11.2023ರಂದು ಮಧ್ಯಾಹ್ನ 3 ಗಂಟೆಗೆ ನಿಗದಿ ಮಾಡಿದ್ದು, ಸದರಿ ದಿನದಂದು ನೀವು ಖುದ್ದು ಅಥವಾ ವಕೀಲರ ಮುಖಾಂತರ ಹಾಜರಾಗಿ ನಿಮ್ಮ ಕಡೆಯಿಂದ ಏನಾದರು ಹೇಳುವುದಿದ್ದರೆ ಹೇಳಲು ಘನ ನ್ಯಾಯಾಲಯ ನಿರ್ದೇಶಿಸಿದೆ. ಮತ್ತು ಹೇಳುವುದೇನೆಂದರೆ ಮೇಲ್ಕಂಡ ದಿನದಂದು ನೀವು ಹಾಜರಾಗದಿದ್ದಲ್ಲಿ ನಿಮ್ಮ ಗೈರು ಹಾಜರಾತಿಯನ್ನು ಎಕ್ಸ್-ಪಾರ್ಟೆ ಎಂದು ದಾಖಲಿಸಿ, ಕಾನೂನು ಪ್ರಕಾರ ವಿವಾದವನ್ನು ನಿರ್ಣಯಿಸಲಾಗುವುದು.

ದಿನಾಂಕ 15.11.2023ರ ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ,

**(ಟಿ.ಆರ್. ಶ್ರೀನಿವಾಸ್)**
ಅಪೀಲುದಾರರ ಪರ ವಕೀಲರು
ಸ್ಥಳ : ದಾವಣಗೆರೆ.

ಘನ ನ್ಯಾಯಾಲಯದ ಆದೇಶದ ಮೇರೆಗೆ
**ಭೂದಾಖಲೆಗಳ ಉಪ ನಿರ್ದೇಶಕರು**
ದಾವಣಗೆರೆ ಜಿಲ್ಲೆ, ದಾವಣಗೆರೆ.

## ಮಾನ್ಯ ಭೂ ದಾಖಲೆಗಳ ಉಪನಿರ್ದೇಶಕರ ನ್ಯಾಯಾಲಯ, ಜಿಲ್ಲಾಧಿಕಾರಿಗಳವರ ಕಛೇರಿ, ದಾವಣಗೆರೆ

**ಭೂಮಿ ಅಪೀಲು ನಂ. 384/2023-24**

**ಅಪೀಲುದಾರರು : ಶ್ರೀ ಶರಣಪ್ಪ** ಬಿನ್ ಲೇಟ್ ಬಸಪ್ಪ **ವಿರುದ್ಧ**
**ಎದುರುದಾರರು :** ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಚನ್ನಗಿರಿ ತಾಲ್ಲೂಕು, ಚನ್ನಗಿರಿ ಮತ್ತು ಇತರರು.
**ಎದುರುದಾರರು :** 2(ಎ) **ಭರತ್** ಬಿನ್ ಲೇಟ್ ಕೆ.ಎಂ. ಮಹಾಬಲೇಶ್ವರಪ್ಪ, ವಯಸ್ಸು ಸುಮಾರು 24 ವರ್ಷ, ವಾಸ: ಕೊಮಾರನಹಳ್ಳಿ ಗ್ರಾಮ, ಸಂತೇಬೆನ್ನೂರು-1 ಹೋಬಳಿ, ಚನ್ನಗಿರಿ ತಾಲ್ಲೂಕು.
3.ಎ. **ರವಿಕುಮಾರ್** ಬಿನ್ ರಂಗಪ್ಪ, ವಯಸ್ಸು ಸುಮಾರು 55 ವರ್ಷ, ವಾಸ: ಎಕ್ಕೆಗೊಂದಿ ಗ್ರಾಮ, ಸಿದ್ಧನಮಠ ಅಂಚೆ, ಸಂತೇಬೆನ್ನೂರು ಹೋಬಳಿ, ಚನ್ನಗಿರಿ ತಾಲ್ಲೂಕು.
3.ಬಿ.2. **ಬಾಬಣ್ಣ** ಬಿನ್ ಲೇಟ್ ತಿಪ್ಪಣ್ಣ ವಯಸ್ಸು ಸುಮಾರು 42 ವರ್ಷ, ವಾಸ: ಎಕ್ಕೆಗೊಂದಿ ಗ್ರಾಮ, ಸಿದ್ಧನಮಠ ಅಂಚೆ, ಸಂತೇಬೆನ್ನೂರು ಹೋಬಳಿ, ಚನ್ನಗಿರಿ ತಾಲ್ಲೂಕು. 4) **ಶ್ರೀಮತಿ ಸಿದ್ದಮ್ಮ** ಬಿನ್ ತಿಮ್ಮಪ್ಪ, ವಯಸ್ಕರು. 5) **ಶ್ರೀ ತಿಮ್ಮಣ್ಣ** ಬಿನ್ ತಿಮ್ಮಪ್ಪ, ವಯಸ್ಕರು. 6) **ಶ್ರೀಮತಿ ಶಿವರುದ್ರಮ್ಮ** ಬಿನ್ ತಿಮ್ಮಪ್ಪ, ವಯಸ್ಕರು. 10) **ಶ್ರೀಮತಿ ಹೆಚ್.ಪದ್ಮಾವತಿ** ಕೋಂ ಪ್ರಕಾಶ್, ವಯಸ್ಕರು. 11) **ಶ್ರೀಮತಿ ಶೇಷಮ್ಮ** ಬಿನ್ ತಿಮ್ಮಪ್ಪ, ವಯಸ್ಕರು. 12) **ಶ್ರೀಮತಿ ಸಾವಿತ್ರಮ್ಮ @ ಸಾಕಮ್ಮ** ಬಿನ್ ತಿಮ್ಮಪ್ಪ, ವಯಸ್ಕರು. 13) **ಶ್ರೀಮತಿ ಶೋಭಾ** ಬಿನ್ ತಿಮ್ಮಪ್ಪ, ವಯಸ್ಕರು. 4 ರಿಂದ 6 ಹಾಗೂ 10 ರಿಂದ 13ನೇ ಯವರ ವಿಳಾಸ: ಕೊಮಾರನಹಳ್ಳಿ ಗ್ರಾಮ, ಸಿದ್ಧನಮಠ ಪೋಸ್ಟ್, ಸಂತೇಬೆನ್ನೂರು ಹೋಬಳಿ, ಚನ್ನಗಿರಿ ತಾಲ್ಲೂಕು. 14) **ಶ್ರೀ ರಂಗಸ್ವಾಮಿ** ಬಿನ್ ರಂಗಪ್ಪ, ವಯಸ್ಸು ಸುಮಾರು 82 ವರ್ಷ, 15) **ಶ್ರೀ ತಿಮ್ಮೇಶ್** ಬಿನ್ ರಾಮಪ್ಪ, ವಯಸ್ಕರು, 16) **ಶ್ರೀ ರಾಜು ಆರ್.** ಬಿನ್ ರಂಗಪ್ಪ, ವಯಸ್ಕರು, 14 ರಿಂದ 16ನೇಯವರ ವಿಳಾಸ: ಕೊಮಾರನಹಳ್ಳಿ ಗ್ರಾಮ, ಸಿದ್ಧನಮಠ ಪೋಸ್ಟ್ ಸಂತೇಬೆನ್ನೂರು ಹೋಬಳಿ, ಚನ್ನಗಿರಿ ತಾಲ್ಲೂಕು.

**ಸಿ.ಪಿ.ಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ಪತ್ರಿಕಾ ಪ್ರಕಟಣೆ**

ಅಪೀಲುದಾರರು ಎದುರುದಾರರ ವಿರುದ್ಧ ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು, ಸಂತೇಬೆನ್ನೂರು 1 ಹೋಬಳಿ, ಕೊಮಾರನಹಳ್ಳಿ ಗ್ರಾಮದ ಸ.ನಂ. 27 ರ ಜಮೀನಿಗೆ ಸಂಬಂಧಪಟ್ಟಂತೆ 1ನೇ ಎದುರುದಾರರು ಈ ಹಿಂದೆ ಮಾಡಿದ ದೋಷಯುಕ್ತ ಎಲ್ಲಾ ಪೋಡು ದುರಸ್ತನ್ನು ರದ್ದುಪಡಿಸಲು ಕೋರಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು, ಮೇಲ್ಕಂಡ ಎದುರುದಾರರಿಗೆ ನ್ಯಾಯಾಲಯದಿಂದ ಹೊರಡಿಸಲಾಗಿರುವ ಸಮನ್ಸ್ / ನೋಟೀಸ್ ಹಾಗೂ ಅಂಚೆ ನೋಟೀಸ್ ಇತ್ಯಾದಿಗಳನ್ನು ಉದ್ದೇಶ ಪೂರ್ವಕವಾಗಿ ಸ್ವೀಕರಿಸದೇ ಹಿಂದಿರುಗಿಸಿರುವ ಪ್ರಯುಕ್ತ ತಮಗೆ ಸಾರ್ವಜನಿಕ ನೋಟೀಸನ್ನು ಈ ಮೂಲಕ ಹೊರಡಿಸುತ್ತಿದ್ದು, ದಿನಾಂಕ : 23.11.2023ರಂದು ಮಧ್ಯಾಹ್ನ 3.00 ಗಂಟೆಯ ಸಮಯದಂದು ತಾವುಗಳು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ಆಕ್ಷೇಪಣೆ ಅಥವಾ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ನಿರ್ಲಕ್ಷಿಸಿದ್ದಲ್ಲಿ ತಮ್ಮ ಗೈರು ಹಾಜರಿಯಲ್ಲಿ ನ್ಯಾಯಾಲಯವು ಮುಂದಿನ ಆದೇಶ ಹೊರಡಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿನಾಂಕ: 15.11.2023ರಂದು ಹೊರಡಿಸಲ್ಪಟ್ಟಿದೆ.

ಅಪೀಲುದಾರರ ಪರ ವಕೀಲರು
**(ಎಂ.ಎಸ್. ರಾಜಕುಮಾರ್)**
ಸ್ಥಳ: ದಾವಣಗೆರೆ
ದಿನಾಂಕ : 15/11/2023

ನ್ಯಾಯಾಲಯದ ಆದೇಶದ ಮೇರೆಗೆ
**ಉಪ ನಿರ್ದೇಶಕರು,**
ಭೂ ದಾಖಲೆಗಳ ಉಪನಿರ್ದೇಶಕರವರ ನ್ಯಾಯಾಲಯ, ದಾವಣಗೆರೆ.

## ಸಂಕ್ಷಿಪ್ತ ಸುದ್ದಿ

**ಎಸ್.ಬಿ.ಐ.ನಿಂದ ಸಿಂಗಪುರ ಹಾಗೂ ಅಮೆರಿಕಗಳಲ್ಲಿ ಯೋನೋ ಗ್ಲೋಬಲ್ ಆಪ್**

ಸಿಂಗಪುರ : ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶೀಘ್ರದಲ್ಲೇ ಸಿಂಗಪುರ ಹಾಗೂ ಅಮೆರಿಕಗಳಲ್ಲಿ ಯೋನೋ ಗ್ಲೋಬಲ್ ಆಪ್ ಸೇವೆಯನ್ನು ಆರಂಭಿಸಲಿದೆ. ವಿದೇಶಗಳಿಂದ ಹಣ ರವಾನೆ ಮತ್ತಿತರೆ ಸೇವೆಗಳಿಗೆ ಈ ಆಪ್ ರೂಪಿಸಲಾಗಿದೆ ಎಂದು ಎಸ್.ಬಿ.ಐ.ನ ಉಪ ವ್ಯವಸ್ಥಾಪಕ ನಿರ್ದೇಶಕಿ (ಐ.ಟಿ.) ವಿದ್ಯಾ ಕೃಷ್ಣನ್ ತಿಳಿಸಿದ್ದಾರೆ. ಪ್ರಸಕ್ತ ಬ್ರಿಟನ್ ಸೇರಿದಂತೆ, 9 ದೇಶಗಳಲ್ಲಿ ಯೋನೋ ಗ್ಲೋಬಲ್ ಸೇವೆ ಲಭ್ಯವಿದೆ.

**ಬಾಹ್ಯಾಕಾಶ ಸಂಶೋಧನಾ ಸಹಕಾರಕ್ಕೆ ನಾಸಾ, ಇಸ್ರೋ ಚರ್ಚೆ**

ಬೆಂಗಳೂರು : ಬಾಹ್ಯಾಕಾಶ ಸಂಶೋಧನೆಯಲ್ಲಿ ಸಹಕಾರದ ಬಗ್ಗೆ ಅಮೆರಿಕದ ಬಾಹ್ಯಾಕಾಸ ಸಂಸ್ಥೆ ನಾಸಾ ಹಾಗೂ ಭಾರತದ ಬಾಹ್ಯಾಕಾಶ ಸಂಸ್ಥೆ ಇಸ್ರೋಗಳು ಚರ್ಚೆ ನಡೆಸಿವೆ. ನಾಸಾದ ಜೆಟ್ ಪ್ರೊಪಲ್ಷನ್ ಲ್ಯಾಬ್ ನಿರ್ದೇಶಕರಾದ ಲೌರಿ ಲೆಶಿನ್ ಅವರು ಇಸ್ರೋ ಕೇಂದ್ರ ಕಚೇರಿಗೆ ಭೇಟಿ ನೀಡಿದ್ದು, ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್ ಜೊತೆ ಚರ್ಚೆ ನಡೆಸಿದ್ದಾರೆ.

**ರಾಂಚಿಯಲ್ಲಿ ಐದು ದೇವಾಲಯ ಮೂರ್ತಿಗಳ ಧ್ವಂಸ**

ರಾಂಚಿ : ಜಾರ್ಖಂಡ್‌ನ ರಾಂಚಿ ಜಿಲ್ಲೆಯ ಮುಡ್ಮ ಹಳ್ಳಿಯ ಐದು ದೇವಾಲಯಗಳ ಮೂರ್ತಿಗಳನ್ನು ಧ್ವಂಸಗೊಳಿಸಲಾಗಿದೆ. ಇದರಿಂದ ಆಕ್ರೋಶಗೊಂಡ ಜನರು, ದುಷ್ಕರ್ಮಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ರಸ್ತೆ ತಡೆ ನಡೆಸಿ ಒತ್ತಾಯಿಸಿದ್ದಾರೆ. ಶಿವ, ಹನುಮಂತ ಸೇರಿದಂತೆ ಹಲವು ದೇವರ ಮೂರ್ತಿಗಳನ್ನು ಧ್ವಂಸಗೊಳಿಸಲಾಗಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

**ಸುಪ್ರೀಂ ಕೋರ್ಟ್ ನಿಯತಕಾಲಿಕಕ್ಕೆ ಚಾಲನೆ**

ನವದೆಹಲಿ : ಸುಪ್ರೀಂ ಕೋರ್ಟ್ ಮಾಸಿಕ ನಿಯತಕಾಲಿಕವನ್ನು ಆರಂಭಿಸಿದೆ. ಇದರ ಮೂಲಕ ಕೋರ್ಟ್ ಕಾರ್ಯಕಲಾಪ ಹಾಗೂ ಸಾಧನೆಗಳ ಬಗ್ಗೆ ವಿವರಗಳನ್ನು ನೀಡಲಾಗುವುದು. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ನಿಯತಕಾಲಿಕಕ್ಕೆ ಚಾಲನೆ ನೀಡಿದ್ದಾರೆ.

**86 ವರ್ಷದ ಸುಬ್ರಮಣ್ಯಂಗೆ ಮಾಸ್ಟರ್ಸ್ ಅಥ್ಲೆಟಿಕ್ಸ್‌ನಲ್ಲಿ ನಾಲ್ಕು ಬಂಗಾರದ ಪದಕ**

ನವದೆಹಲಿ : 86 ವರ್ಷದ ಕೆ. ಸುಬ್ರಮಣ್ಯಂ ಅವರು ಫಿಲಿಪೈನ್ಸ್‌ನಲ್ಲಿ ನಡೆಯುತ್ತಿರುವ ಏಷಿಯನ್ ಮಾಸ್ಟರ್ಸ್ ಅಥ್ಲೆಟಿಕ್ಸ್ ಮೀಟ್ ಪಂದ್ಯಾವಳಿಯಲ್ಲಿ ನಾಲ್ಕು ಬಂಗಾರದ ಪದಕ ಪಡೆದಿದ್ದಾರೆ. ಕಳೆದ ವಾರ ನಡೆದ ಪಂದ್ಯಾವಳಿಯಲ್ಲಿ ಅವರು ಲಾಂಗ್ ಜಂಪ್, ಟ್ರಿಪಲ್ ಜಂಬ್, ಹೈ ಜಂಪ್ ಹಾಗೂ ಜಾವಲಿನ್ ವಿಭಾಗಗಳಲ್ಲಿ 85 ಪ್ಲಸ್ ವರ್ಗದಲ್ಲಿ ಈ ಸಾಧನೆ ಮಾಡಿದ್ದಾರೆ. ಅವರು ತಮಿಳುನಾಡಿನ ಪೊಲ್ಲಾಚಿ ಹಳ್ಳಿಯವರು.

**ಜ್ಞಾನವಾಪಿ ವರದಿ ಸಲ್ಲಿಕೆ ಬಗ್ಗೆ ಇಂದು ಪರಿಶೀಲನೆ**

ವಾರಣಾಸಿ : ಇಲ್ಲಿನ ಜ್ಞಾನವಾಪಿ ಮಸೀದಿಯ ವೈಜ್ಞಾನಿಕ ಸಮೀಕ್ಷೆ ಕುರಿತು ವರದಿ ಸಲ್ಲಿಸಲು ಇನ್ನೂ 15 ದಿನಗಳ ಸಮಯ ಬೇಕು ಎಂದು ಭಾರತೀಯ ಪುರಾತತ್ವ ಇಲಾಖೆ ದಾಖಲಿಸಿರುವ ಅರ್ಜಿಯನ್ನು ವಾರಣಾಸಿ ಜಿಲ್ಲಾ ನ್ಯಾಯಾಲಯ ಶನಿವಾರ ಪರಿಶೀಲಿಸಲಿದೆ. ಕಾಶಿ ವಿಶ್ವನಾಥ ದೇವಾಲಯದ ಎದುರಲ್ಲಿರುವ ಜ್ಞಾನವಾಪಿ ಮಸೀದಿಯ ವೈಜ್ಞಾನಿಕ ಸಮೀಕ್ಷೆಯನ್ನು ಪೂರ್ಣಗೊಳಿಸಲಾಗಿದೆ ಎಂದು ಎ.ಎಸ್.ಐ. ನವೆಂಬರ್ 2ರಂದು ತಿಳಿಸಿತ್ತು.

**ಶಬರಿಮಲೆ ಯಾತ್ರೆ ಆರಂಭ ಶಬರಿಮಲೆ :**

ಶಬರಿಮಲೆಯ ಅಯ್ಯಪ್ಪ ಸ್ವಾಮಿ ದೇವಾಲಯಕ್ಕೆ ತೀರ್ಥಯಾತ್ರೆ ಆರಂಭವಾಗಿದೆ. ಸಾವಿರಾರು ಜನರು ಪೂಜೆ ಸಲ್ಲಿಸಲು ದೇವಾಲಯಕ್ಕೆ ಆಗಮಿಸಿದ್ದಾರೆ. ಎರಡು ತಿಂಗಳ ಕಾಲ ನಡೆಯುವ ಯಾತ್ರೆ ಶುಕ್ರವಾರದಿಂದ ಆರಂಭವಾಗಿದೆ. ಶುಕ್ರವಾರ ಬೆಳಿಗ್ಗೆ 3 ಗಂಟೆಗೆ ದೇವಾಲಯದ ಬಾಗಿಲನ್ನು ತೆರೆಯಲಾಯಿತು.

**ಹಿಮಾಚಲ ಪ್ರದೇಶದಲ್ಲಿ ರಷ್ಯಾ ದಂಪತಿಯ ನಗ್ನ ಮೃತದೇಹಗಳು ಪತ್ತೆ**

ಶಿಮ್ಲಾ : ಹಿಮಾಚಲ ಪ್ರದೇಶದ ಕುಲ್ಲು ಜಿಲ್ಲೆಯ ಮಣಿಕರನ್ ನಗರದ ಸಣ್ಣ ಕೊಳದಲ್ಲಿ ನಗ್ನವಾಗಿರುವ ರಷ್ಯಾ ದಂಪತಿ ಮೃತದೇಹಗಳು ಕಂಡು ಬಂದಿವೆ. ಇದು ಆತ್ಮಹತ್ಯೆ ಪ್ರಕರಣದಂತೆ ಕಂಡು ಬರುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ. ಮೃತರನ್ನು 37 ವರ್ಷದ ಮಕ್ಸಿಮ್ ಬೆಲೆಟ್‌ಸ್ಕಿ ಹಾಗೂ 21 ವರ್ಷದ ಆನ್ನಾ ರಂಟ್ಸೆವಾ ಎಂದು ಗುರುತಿಸಲಾಗಿದೆ.

## ಅಶೋಕ ವಿಪಕ್ಷ ನಾಯಕ

**(1ನೇ ಪುಟದಿಂದ)** ವಿಜಯೇಂದ್ರ ರಾಜ್ಯಾಧ್ಯಕ್ಷರಾದ್ದರಿಂದ ಒಂದೇ ಸಮುದಾಯಕ್ಕೆ 2 ಸ್ಥಾನಗಳನ್ನು ನೀಡಬಾರದೆಂದು ಒಕ್ಕಲಿಗ ಸಮುದಾಯಕ್ಕೆ ಸೇರಿದ ಅಶೋಕ್ ಅವರಿಗೆ ವರಿಷ್ಠರು ಅವಕಾಶ ಮಾಡಿಕೊಟ್ಟಿದ್ದಾರೆ. ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕರಾಗಿರುವ ಕೋಟ ಶ್ರೀನಿವಾಸ ಪೂಜಾರಿ ಹಿಂದುಳಿದ ವರ್ಗದವರಾಗಿದ್ದು, ಪಕ್ಷ ಮೂರೂ ಸಮುದಾಯಕ್ಕೆ ಪ್ರಮುಖ ಸ್ಥಾನಗಳನ್ನು ನೀಡಿದಂತಾಗಿದೆ.

# ದೇಸಿ ಉತ್ಪನ್ನಗಳ ಬಳಸಿ ಸ್ಥಳೀಯರಿಗೆ ಧ್ವನಿಯಾಗೋಣ : ಸಂಸದ ಜಿ.ಎಂ.ಸಿದ್ದೇಶ್ವರ



ದಾವಣಗೆರೆ, ನ.17-ದೀಪಾವಳಿ ಹಬ್ಬದ ನಿಮಿತ್ಯ ಪ್ರಧಾನಮಂತ್ರಿ ನರೇಂದ್ರ ಮೋದೀಜಿಯವರ 'ವೋಕಲ್ ಫಾರ್ ಲೋಕಲ್' ಕರೆಗೆ ಓಗೊಟ್ಟ ಸಂಸದ ಜಿ.ಎಂ.ಸಿದ್ದೇಶ್ವರ ಅವರು ನಗರದ ಡಾ. ಎಂ.ಸಿ. ಮೋದಿ ರಸ್ತೆಯ ಬೀದಿ ಬದಿ ವ್ಯಾಪಾರಿಗಳ ಹಾಗೂ ಅಶೋಕ ರಸ್ತೆಯಲ್ಲಿರುವ ಜನತಾ ಖಾದಿ ಭಂಡಾರಕ್ಕೆ ಭೇಟಿ ನೀಡಿ, ಸ್ಥಳಿಯರು ತಯಾರಿಸಿದ ವಸ್ತುಗಳನ್ನು ಖರೀದಿಸುವ ಮೂಲಕ ಸ್ಥಳೀಯ ಉತ್ಪಾದಕರನ್ನು ಪ್ರೋತ್ಸಾಹಿಸಿದರು.

ನರೇಂದ್ರ ಮೋದೀಜಿಯವರು ಭಾರತೀಯರು ಸ್ಥಳೀಯ ಉತ್ಪನ್ನಗಳನ್ನು ಬಳಸಬೇಕು ಮತ್ತು ಹೆಚ್ಚಾಗಿ ಪ್ರೋತ್ಸಾಹಿಸಬೇಕು, ಇದು ಕೂಡ ಸ್ವಾವಲಂಬಿ ಭಾರತದ ಕನಸು ಮತ್ತು ಗುರಿಯಾಗಿದೆ ಎಂದು ಹೇಳಿದ್ದಾರೆ. ನಾವು ನಮ್ಮ ಸ್ಥಳೀಯ ಉತ್ಪನ್ನಗಳನ್ನು ಪ್ರಶಂಸಿಸುವ ಮೂಲಕ ಮೋದೀಜಿಯವರ ಕನಸನ್ನು ನಾವೆಲ್ಲರೂ ಸೇರಿ ನನಸು ಮಾಡಬೇಕಿದೆ ಎಂದು ಸಂಸದರು ಹೇಳಿದರು.

ಭಾರತ ಆತ್ಮ ನಿರ್ಭರ ದೇಶವಾಗಬೇಕು ಎಂಬುದು ಸಮಸ್ತ ಭಾರತೀಯರ ಕನಸು. ಈ ಕನಸನ್ನು ನನಸು ಮಾಡಲು ಕೇಂದ್ರ ಸರ್ಕಾರ ಪ್ರಾಮಾಣಿಕ ಪ್ರಯತ್ನ ನಡೆಸಿದೆ. ಸ್ವಾವಲಂಬನೆ ದೇಶದ ತುರ್ತು ಅಗತ್ಯವಾಗಿದ್ದು, ಇದಕ್ಕಾಗಿ 'ವೋಕಲ್ ಫಾರ್ ಲೋಕಲ್' ಯೋಜನೆಯ ಮಂತ್ರವನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು ಎಂದರು. ದೀಪಾವಳಿ ಹಬ್ಬಕ್ಕೋಸ್ಕರ ಖರೀದಿಸುವಾಗ ದೇಸಿ ಉತ್ಪನ್ನಗಳ ಬಗ್ಗೆ ನಿಮ್ಮ ಗಮನವಿರಲಿ ಎಂದರು. ನೀವು ಮಾಡುವ ಒಂದೊಂದು ಖರೀದಿ ದೇಸಿ ಉತ್ಪಾದಕರ ಬಾಳಲ್ಲಿ ಬೆಳಕು ತರಲಿದೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್.ಜಗದೀಶ್, ಬಿಜೆಪಿ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ವಾಸನ ಬಸವರಾಜ್ ಸೇರಿದಂತೆ, ಇತರರು ಸಂಸದರ ಜೊತೆಗಿದ್ದರು.

## ಕ್ಷೇತ್ರಗಳಿಗೆ ಹೊಸಬರನ್ನು ಕಣಕ್ಕಿಳಿಸಲು ಬಿಜೆಪಿ ವರಿಷ್ಠರ ಒಲವು

**(1ನೇ ಪುಟದಿಂದ)** ಎನ್‌ಡಿಎ ಮೈತ್ರಿಕೂಟ ಸೇರಿದ ನಂತರ ಕರ್ನಾಟಕದ ಮಟ್ಟಿಗೆ ಎರಡೂ ಪಕ್ಷಗಳಿಗೆ ಬಲ ಬಂದಿದೆ. ಚುನಾವಣಾ ಮೈತ್ರಿಯ ಹಿನ್ನೆಲೆಯಲ್ಲಿ ಜೆಡಿಎಸ್‌ಗೆ ನಾಲ್ಕು ಸ್ಥಾನಗಳನ್ನು ಬಿಟ್ಟುಕೊಡಲಿದೆ, ಈ ಸಂದರ್ಭದಲ್ಲೂ ಹಾಲಿ ಸಂಸದರಿಗೆ ಅವಕಾಶ ತಪ್ಪಲಿದೆ.

ಸಂಸದರಾದ ಶ್ರೀನಿವಾಸ ಪ್ರಸಾದ್ (ಚಾಮರಾಜನಗರ), ಡಿ.ವಿ.ಸದಾನಂದಗೌಡ (ಬೆಂಗಳೂರು ಉತ್ತರ), ಶಿವಕುಮಾರ್ ಉದಾಸಿ (ಹಾವೇರಿ), ಬಿ.ಎನ್.ಬಚ್ಚೇಗೌಡ (ಚಿಕ್ಕಬಳ್ಳಾಪುರ) ಅವರು ಈಗಾಗಲೇ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಘೋಷಿಸಿದ್ದಾರೆ.

ವಿವಿಧ ಕಾರಣಗಳಿಗಾಗಿ ಜಿ.ಎಸ್. ಬಸರಾಜು (ತುಮಕೂರು), ಮಂಗಳ ಸುರೇಶ್ ಅಂಗಡಿ ( ಬೆಳಗಾವಿ), ಪಿ.ಸಿ.ಗದ್ದಿಗೌಡರ್ (ಬಾಗಲಕೋಟೆ), ರಮೇಶ್ ಜಿಗಜಿಣಗಿ (ವಿಜಯಪುರ), ರಾಜಾ ಅಮರೇಶ್ ನಾಯಕ್ (ರಾಯಚೂರು), ದೇವೇಂದ್ರಪ್ಪ (ಬಳ್ಳಾರಿ), ಅನಂತ್‌ಕುಮಾರ್ ಹೆಗಡೆ (ಉತ್ತರ ಕನ್ನಡ) ಅವರ ಕ್ಷೇತ್ರಗಳಿಗೆ ಹೊಸಬರಿಗೆ ಅವಕಾಶ ನೀಡಲು ಹೊಸಮುಖಗಳ ಅನ್ವೇಷಣೆ ನಡೆದಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದಿಂದ ನಿರ್ಗಮಿಸಿರುವ ನಳಿನ್ ಕುಮಾರ್ ಕಟೀಲ್ (ದಕ್ಷಿಣ ಕನ್ನಡ), ಎಸ್.ಮುನಿಸ್ವಾಮಿ (ಕೋಲಾರ) ಇವರು ಕಾರ್ಯಕರ್ತರ ಮತ್ತು ಸಾರ್ವಜನಿಕರ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ ಎಂಬ ವರದಿ ಇದೆ. ಇವರಿಗೆ ಚುನಾವಣೆಯಲ್ಲಿ ಟಿಕೆಟ್ ನೀಡುತ್ತಾರೋ ಅಥವಾ ಇಲ್ಲವೋ ಎಂಬುದು ನಿಗೂಢವಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸು, ಹಿಂದುತ್ವವಾದ ಮತ್ತು ಜೆಡಿಎಸ್ ಮೈತ್ರಿ ಹಾಗೂ ವೀರಶೈವ – ಲಿಂಗಾಯತ ಸಮುದಾಯಕ್ಕೆ ಸೇರಿರುವ ಪ್ರಭಾವಿ ನಾಯಕ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಅವರಿಗೆ ರಾಜ್ಯಾಧ್ಯಕ್ಷ ಸ್ಥಾನ ನೀಡಿರುವುದರಿಂದ ಈ ಪ್ರಯೋಗ ಯಶಸ್ವಿಯಾಗಲಿದೆ ಎಂಬ ಲೆಕ್ಕಾಚಾರವಿದೆ.

ಕಳೆದ 2019ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 28 ಕ್ಷೇತ್ರಗಳ ಪೈಕಿ 25 ಕ್ಷೇತ್ರಗಳಲ್ಲಿ ಬಿಜೆಪಿ ಜಯ ಸಾಧಿಸಿದ್ದು, 2024ರ ಲೋಕಸಭಾ ಚುನಾವಣೆಯಲ್ಲೂ 20ಕ್ಕೂ ಹೆಚ್ಚು ಕ್ಷೇತ್ರಗಳನ್ನು ಗೆಲ್ಲಲೇ ಬೇಕು ಎಂದು ಪಣ ತೊಟ್ಟಿದೆ. ಅದಕ್ಕಾಗಿ ಹೊಸ ಪ್ರಯೋಗವೂ ನಡೆಸಲಿದೆ.

ಕಾಂಗ್ರೆಸ್ ಕೂಡಾ ಇದೇ ರೀತಿ 20 ಕ್ಷೇತ್ರಗಳ ಗೆಲುವಿನ ಗುರಿ ಇಟ್ಟುಕೊಂಡು ಹೋರಾಟ ನಡೆಸಿದೆ. ಹಿಂದೆ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದ ಸಂದರ್ಭದಲ್ಲೂ ಬಿಜೆಪಿ ಎರಡು ಅಂಕಿಗಿಂತ ಕಡಿಮೆ ಸ್ಥಾನ ಗಳಿಸಿರಲಿಲ್ಲ. ಸಿದ್ದರಾಮಯ್ಯ ನೇತೃತ್ವದ ಸರ್ಕಾರವಿದ್ದರೂ ಮೋದಿ ಅವರ ವರ್ಚಸ್ಸು ಹಾಗೂ ವಿವಿಧ ಕಾರಣಗಳಿಗೆ ರಾಜ್ಯದಲ್ಲಿ ಜನರು ಬಿಜೆಪಿ ಬೆಂಬಲಿಸಲಿದ್ದಾರೆ ಎಂಬ ನಂಬಿಕೆ ವರಿಷ್ಠರಿಗೆ ಇದೆ.

## ಉದ್ಯೋಗ ಮೀಸಲು ಪಕ್ಷಪಾತಿ

**ಇಂತಹ ಮೀಸಲಾತಿ ದೇಶಾದ್ಯಂತ ಕೃತಕ ಗೋಡೆಗಳಿಗೆ ಕಾರಣವಾಗುತ್ತದೆ**

**(1ನೇ ಪುಟದಿಂದ)** ಹುದ್ದೆಗಳನ್ನು ರಾಜ್ಯದವರಿಗೆ ಮೀಸಲಿರಿಸಿತ್ತು.

ಒಮ್ಮೆ ರಾಜ್ಯವೊಂದು ಈ ರೀತಿಯ ನಿರ್ಬಂಧ ಹೇರಲು ಆರಂಭಿಸಿದರೆ, ಉಳಿದ ರಾಜ್ಯಗಳಲ್ಲೂ ಇದೇ ಪರಿಸ್ಥಿತಿ ಉಂಟಾಗಲಿದೆ. ದೇಶಾದ್ಯಂತ ಕೃತಕ ಗೋಡೆಗಳು ನಿರ್ಮಾಣವಾಗಲಿವೆ. ಸಂವಿಧಾನದ ರೂವಾರಿಗಳು ಈ ರೀತಿಯ ಗೋಡೆಗಳನ್ನು ಎಂದೂ ಬಯಸಿರಲಿಲ್ಲ ಎಂದು ನ್ಯಾಯಾಲಯದ ತೀರ್ಪಿನಲ್ಲಿ ತಿಳಿಸಲಾಗಿದೆ.

ಹರಿಯಾಣ ಹೊರತಾದ ರಾಜ್ಯದವರನ್ನು ಎರಡನೇ ದರ್ಜೆ ನಾಗರಿಕರಾಗಿ ಮಾಡುವ ಮೂಲಕ ಸಂವಿಧಾನದ ನೈತಿಕತೆಯನ್ನು ಉಲ್ಲಂಘಿಸಲಾಗಿದೆ. ಬೇರೆ ರಾಜ್ಯಗಳ ಜನರ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಲಾಗಿದೆ ಎಂದೂ ನ್ಯಾಯಾಲಯ ಹೇಳಿದೆ. 83 ಪುಟಗಳ ತೀರ್ಪು ನೀಡಿರುವ ನ್ಯಾಯಾಲಯ, ರಾಜ್ಯ ಸರ್ಕಾರದ ಕಾಯ್ದೆ ಸಂವಿಧಾನದ 8ನೇ ಪರಿಚ್ಛೇದದ ಉಲ್ಲಂಘನೆಯಾಗಿದೆ. ಈ ಕಾಯ್ದೆಯ ಮೂಲಕ ಭಾರತದ ನಾಗರಿಕರ ನಡುವೆ ಕೃತಕವಾಗಿ ಅಂತರ ಸೃಷ್ಟಿಸಲಾಗಿದೆ ಹಾಗೂ ಪಕ್ಷಪಾತ ಮಾಡಲಾಗಿದೆ ಎಂದು ತಿಳಿಸಿದೆ.

ಖಾಸಗಿಯವರು ಮುಕ್ತ ಮಾರುಕಟ್ಟೆಯಿಂದ ಉದ್ಯೋಗಿಗಳನ್ನು ನೇಮಿಸಿಕೊಳ್ಳದಂತೆ ತಡೆಯುವುದು ರಾಜ್ಯ ಸರ್ಕಾರದ ಅಧಿಕಾರ ವ್ಯಾಪ್ತಿಗೆ ಮೀರಿದ ವಿಷಯ ಎಂದು ನ್ಯಾಯಾಲಯ ಹೇಳಿದೆ.

ಖಾಸಗಿ ಉದ್ಯಮಗಳು ಯಾರನ್ನು ನೇಮಿಸಿಕೊಳ್ಳ ಬೇಕು ಎಂಬುದನ್ನು ರಾಜ್ಯ ಸರ್ಕಾರ ನಿರ್ದೇಶಿಸಬಾರದು. ಆಡಳಿತದ ಮಧ್ಯ ಪ್ರವೇಶ ಕಡಿಮೆ ಇದ್ದಷ್ಟೂ ಒಳ್ಳೆಯದು ಎಂದು ನ್ಯಾಯಾಲಯ ತೀರ್ಪಿನಲ್ಲಿ ತಿಳಿಸಿದೆ.

ಖಾಸಗಿ ಕಟ್ಟಡ ನಿರ್ಮಾಣಕಾರನೋರ್ವ ಬಹುಮಹಡಿ ಕಟ್ಟಡ ನಿರ್ಮಿಸುತ್ತಿರುತ್ತಾನೆ. ವ್ಯಕ್ತಿಯೋರ್ವ ಮರದ ಕೆಲಸಕ್ಕೆ ನಿರ್ದಿಷ್ಟ ಕೌಶಲ್ಯ ಹೊಂದಿದ್ದರೂ, ಆತ ಕಾಶ್ಮೀರದಿಂದ ಬಂದವನು ಎಂಬ ಕಾರಣಕ್ಕೆ ನೇಮಿಸಿಕೊಳ್ಳಬಾರದು ಎಂದು ನಿರ್ಬಂಧಿಸಲಾಗದು ಎಂದು ತೀರ್ಪಿನಲ್ಲಿ ಉದಾಹರಣೆ ನೀಡಲಾಗಿದೆ.

## ಡೀಪ್‌ಫೇಕ್ ದುರ್ಬಳಕೆ ಕಳವಳ

**(1ನೇ ಪುಟದಿಂದ)** ಬಿಕ್ಕಟ್ಟು ತರಬಹುದು. ಸಮಾಜದಲ್ಲಿ ಅಶಾಂತಿಯ ಬೆಂಕಿ ಹಚ್ಚಿಸಬಹುದು. ಸಾಮಾನ್ಯವಾಗಿ ಜನರು ಮಾಧ್ಯಮಗಳಲ್ಲಿ ಬರುವುದನ್ನು ನಂಬುತ್ತಾರೆ. ಇಂತಹ ಸಂದರ್ಭದಲ್ಲಿ ಡೀಪ್‌ಫೇಕ್‌ಗಳು ದೊಡ್ಡ ಅಪಾಯ ತಂದಿವೆ ಎಂದು ಮೋದಿ ಹೇಳಿದರು.

ಸಿಗರೇಟುಗಳ ಪೊಟ್ಟಣಗಳ ಮೇಲೆ ಆರೋಗ್ಯದ ಎಚ್ಚರಿಕೆ ಇರುತ್ತದೆ. ಅದೇ ರೀತಿ ಡೀಪ್‌ಫೇಕ್ ವಿಡಿಯೋಗಳ ಮೇಲೂ ಎಚ್ಚರಿಕೆಯ ಸಂದೇಶ ಇರಬೇಕು ಎಂದು ಮೋದಿ ಅಭಿಪ್ರಾಯ ಪಟ್ಟರು.

ಒಬ್ಬ ವ್ಯಕ್ತಿಯ ಚಿತ್ರ ಇಲ್ಲವೇ ವಿಡಿಯೋ ಅನ್ನು ಇನ್ನೊಬ್ಬ ವ್ಯಕ್ತಿಯಂತೆ ತಿರುಚುವುದನ್ನು ಡೀಪ್‌ಫೇಕ್ ಎಂದು ಕರೆಯಲಾಗುತ್ತದೆ. ಕೃತಕ ಬುದ್ಧಿವಂತಿಕೆ ಜನಪ್ರಿಯ ವಾದಂತೆ ಡೀಪ್‌ಫೇಕ್ ಮಾಡುವುದು ಸುಲಭವಾಗುತ್ತಿದೆ.

ಈ ಹಿಂದೆ ಚಲನಚಿತ್ರವೊಂದರಲ್ಲಿ ವಿವಾದಿತ ಹೇಳಿಕೆ ಬಂದರೆ, ಅದು ಸ್ವಲ್ಪ ಸಮಯದಲ್ಲೇ ತಣ್ಣಗಾಗುತ್ತಿತ್ತು. ಈಗ ದೊಡ್ಡ ವಿಷಯವಾಗುತ್ತಿದೆ. ಸಮಾಜದ ಒಂದು ವರ್ಗಕ್ಕೆ ಅಗೌರವ ತೋರಲಾಗಿದೆ ಎಂಬ ಕಾರಣಕ್ಕೆ ಎಷ್ಟೇ ಹಣ ಹೂಡಿಕೆ ಮಾಡಿದ್ದರೂ, ಚಿತ್ರಗಳ ಪ್ರದರ್ಶನಕ್ಕೆ ಸಮಸ್ಯೆಯಾಗುತ್ತಿದೆ ಎಂದೂ ಮೋದಿ ತಿಳಿಸಿದರು.

## ಸಹಭಾಗಿತ್ವದಿಂದಲೇ ಕುಶಲ ಇಂಜಿನಿಯರ್

**(1ನೇ ಪುಟದಿಂದ)** ಜೋಡಿಸಿದರೆ, ದಾವಣಗೆರೆಯಲ್ಲೂ ಇಂತಹ ಕೇಂದ್ರದ ಸ್ಥಾಪನೆ ಸಾಧ್ಯ ಎಂದು ವಿದ್ಯಾಶಂಕರ್ ಹೇಳಿದರು.

ಯುಬಿಡಿಟಿ ಪ್ರಾಂಶುಪಾಲ ಡಾ. ಡಿ.ಪಿ. ನಾಗರಾಜಪ್ಪ ಸಭೆಯ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯ ಮೇಲೆ ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ. ರಿಜಿಸ್ಟ್ರಾರ್ ಡಾ. ಬಿ.ಇ. ರಂಗಸ್ವಾಮಿ, ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಅಧಿಕಾರಿ ಡಾ. ಹೆಚ್. ಲಕ್ಷ್ಮಿ ಕಾಂತ್, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ರಾಜೇಂದ್ರ ನಾಮದೇವ್ ಕದಮ್, ವಿಶ್ವವಿದ್ಯಾಲಯದ ಸಂಶೋಧನಾ ವಲಯದ ಮುಖ್ಯಸ್ಥ ಸಂತೋಷ ಇಟ್ಟಣಗಿ ಮತ್ತಿತರರು ಉಪಸ್ಥಿತರಿದ್ದರು. ರೇಖಾ ಪದಕಿ ಪ್ರಾರ್ಥಿಸಿದರು. ಡಾ.ಟಿ.ಡಿ. ವಿಷ್ಣುಮೂರ್ತಿ ಸ್ವಾಗತಿಸಿದರು. ಕಾರ್ಯಕ್ರಮದ ಸಂಚಾಲಕ ಡಾ. ಶೇಖರಪ್ಪ ಬಿ. ಮಲ್ಲೂರ್ ಹಾಗೂ ಡಾ. ರೇಶ್ಮಾ ಶೆಟ್ಟಿ ನಿರೂಪಿಸಿದರು. ಡಾ. ಮಲ್ಲಿಕಾರ್ಜುನ ಎಸ್. ಹೊಳಿ ವಂದಿಸಿದರು.

**ಕೈಗಾರಿಕೆ-ಕಾಲೇಜುಗಳ ನಡುವೆ 'ಸಂಬಂಧಿ ಸಹಕಾರ'**

ಬೆಳಗಾವಿ ವಿಶ್ವವಿದ್ಯಾಲಯದಲ್ಲಿರುವ ಕ್ಯಾಂಪಸ್ ಈಗ ನವೋದ್ಯಮಗಳ ಕೇಂದ್ರವಾಗಿದೆ. ಇಲ್ಲಿ 30 ನವೋದ್ಯಮಗಳು ತಲೆ ಎತ್ತಿವೆ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ. ರಿಜಿಸ್ಟ್ರಾರ್ ಡಾ. ಬಿ.ಇ. ರಂಗಸ್ವಾಮಿ ತಿಳಿಸಿದರು.

ಕಾಲೇಜು ಹಾಗೂ ಕೈಗಾರಿಕೆಗಳೆರಡೂ ಸಂಬಂಧಿಗಳಂತೆ ಜೊತೆಯಾಗಿ 24/7 ಕಾರ್ಯನಿರ್ವಹಿಸಬೇಕು. ಆಗ ಮಾತ್ರ ದೇಶಕ್ಕೆ ಅಗತ್ಯವಾದ ಕೌಶಲ್ಯಯುತ ಹಾಗೂ ಉದ್ಯಮಶೀಲತೆಯ ಇಂಜಿನಿಯರ್‌ಗಳನ್ನು ಒದಗಿಸಲು ಸಾಧ್ಯ ಎಂದವರು ಅಭಿಪ್ರಾಯ ಪಟ್ಟರು.

ಯು.ಬಿ.ಡಿ.ಟಿ.ಯಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ಕೌಶಲ್ಯ ಕೇಂದ್ರ ಸ್ಥಾಪಿಸಲಾಗಿದೆ. ತಳಕಲ್‌ನಲ್ಲಿ ದೇಶದಲ್ಲೇ ಅತಿ ದೊಡ್ಡ ಕೌಶಲ್ಯ ಕೇಂದ್ರ ಸ್ಥಾಪನೆಯಾಗುತ್ತಿದೆ. ಇಂತಹ ಕೇಂದ್ರಗಳ ಬಳಕೆಗಾಗಿ ವಿ.ವಿ. ಜೊತೆ ಒಪ್ಪಂದ ಮಾಡಿಕೊಳ್ಳಬೇಕು ಎಂದವರು ಕರೆ ನೀಡಿದರು.

## ಉಜ್ಜಯಿನಿ ಪೀಠದ ಜಗದ್ಗುರುಗಳಿಗೆ ಸ್ವಾಗತ




**ರಾಣೇಬೆನ್ನೂರು**

ರಾಣೇಬೆನ್ನೂರು, ನ.17- ನಗರದ ಮೆಡ್ಲೇರಿ ರಸ್ತೆಯ ವಿಜಯನಗರ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಶಿವಾನಂದ ತಪೋಮಂದಿರ ಲೋಕಾರ್ಪಣೆ ಸಮಾರಂಭದ ನಿಮಿತ್ಯ ಬುಧವಾರ ನಗರಕ್ಕೆ ಆಗಮಿಸಿದ್ದ ಉಜ್ಜಯಿನಿ ಪೀಠದ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರನ್ನು ಮೆರವಣಿಗೆ ಮೂಲಕ ಸ್ವಾಗತ ಕೋರಲಾಯಿತು.

ದೊಡ್ಡಪೇಟೆ ಬಸವೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಜಗದ್ಗುರು ಶ್ರೀ ಸಿದ್ಧಲಿಂಗ ಶಿವಾಚಾರ್ಯರನ್ನು ಸಾರೋಟಿನಲ್ಲಿ ಕುಳ್ಳರಿಸಿ ಮೆರವಣಿಗೆ ಮೂಲಕ ಸುಭಾಸ್ ಚೌಕ, ಪೋಸ್ಟ್ ಸರ್ಕಲ್, ಮೆಡ್ಲೇರಿ ರಸ್ತೆ ಮಾರ್ಗವಾಗಿ ಶ್ರೀ ಶಿವಾನಂದ ತಪೋಮಂದಿರದವರೆಗೆ ಕರೆತರಲಾಯಿತು. ಜೋಡೆತ್ತಿನ ಮೆರವಣಿಗೆ, ಪೂರ್ಣ ಕುಂಭ ಹೊತ್ತ ಮಹಿಳೆಯರು ಮೆರವಣಿಗೆಯುದ್ದಕ್ಕೂ ಸಾಗಿ ಬಂದರು. ಸಮಾಳ, ಜಾಂಜ್ ಮೇಳ, ಡೊಳ್ಳು ಕುಣಿತ ಮೆರವಣಿಗೆಗೆ ಮೆರಗು ನೀಡಿದವು.

**ಉದ್ಯೋಗಾವಕಾಶ**
ನಮ್ಮ ಸಂಸ್ಥೆಯಿಂದ ಯುವತಿಯರಿಗೆ & ಮಹಿಳೆಯರಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಿ ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್ ಸಂಸ್ಥೆಯಲ್ಲಿ ಉದ್ಯೋಗಾವಕಾಶ ನೀಡಲಾಗುತ್ತದೆ. ಸಂಬಳ, ಉಚಿತ ಊಟ, ವಸತಿಯೊಂದಿಗೆ 15000 ರಿಂದ 30,000, ವಿದ್ಯಾರ್ಹತೆ : 7ನೇ, 10ನೇ, ಪಿಯುಸಿ, ಡಿಗ್ರಿ, ಜಿಎನ್‌ಎಂ., ಎಎನ್‌ಎಂ
91486 83185, 95355 32369

**ಸೈಟ್ ಮಾರಾಟಕ್ಕೆ (KHB)**
ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ವ್ಯಾಪಾರ ಕರ್ನಾಟಕ ಹೌಸಿಂಗ್ ಬೋರ್ಡ್ 120 ಅಡಿ ರಸ್ತೆಗೆ 50X80 ಉತ್ತರ, 40X60 ಉತ್ತರ 60 ಅಡಿ ರಸ್ತೆಗೆ 40X40 W+S ಕಾರ್ನರ್ 40X60 ದಕ್ಷಿಣ 40X60 ಪೂರ್ವ.
ಕಿರಣ್ ಭೂಸನೂರ್ (ಏಜೆಂಟ್)
98440 63409

**ಸೈಟ್ ಮಾರಾಟಕ್ಕೆ(KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ 40x60 ದಕ್ಷಿಣ (60 ಲಕ್ಷ) 30x40 (35ಲಕ್ಷ) ಅರ್ಧ (1/2 %) ಪರ್ಸೆಂಟ್ ನನ್ನದು ಮತ್ತು ನೀವು ಸೈಟ್ ಖರೀದಿಸಿದಲ್ಲಿ ಖಾತೆ + ಈ ಸ್ವತ್ತು ಖರ್ಚು ಫ್ರೀ
ಕಿರಣ್ ಭೂಸನೂರ್ (ಏಜೆಂಟ್)
98440 63409
ಮನೆ ಕಟ್ಟಲು ತುಂಬಾ ಚೆನ್ನಾಗಿದೆ

**2 BHK ಮನೆ ಬಾಡಿಗೆಗಿದೆ**
ಶಾಮನೂರು ಆಂಜನೇಯ ಸ್ವಾಮಿ ದೇವಸ್ಥಾನದ ಹಿಂದಿನ ರಸ್ತೆಯಲ್ಲಿ 2 BHK ಮನೆ ಬಾಡಿಗೆಗೆ ಇದೆ.
ಸಂಪರ್ಕಿಸಿ : 98864-42434, 80885-88246
(ಸಸ್ಯಹಾರಿಗಳಿಗೆ ಮಾತ್ರ)

**ಬೇಕಾಗಿದ್ದಾರೆ**
BA ಅಥವಾ PUC ಉತ್ತೀರ್ಣ ಅಥವಾ ಅನುತ್ತೀರ್ಣರಾಗಿರುವ ಹುಡುಗ/ಹುಡುಗಿಯರು ಕಚೇರಿ ಕೆಲಸಗಳಿಗೆ ಬೇಕಾಗಿದ್ದಾರೆ
96118 66449

**ಜಮೀನು ಮಾರಾಟಕ್ಕಿವೆ**
ಓಬಜ್ಜಿಹಳ್ಳಿ 2 ಎಕರೆ, ಹೊನ್ನೂರು ಗೊಲ್ಲರಹಟ್ಟಿ 2.30 ಹಳ್ಳಿಯ ಬಾತಿ 3 ಎಕರೆ, ಬೆಳ್ಳಿಗೆರೆ 4.30 ಎಕರೆ.
ಎಸ್.ಯಲ್ಲೋಜಿರಾವ್
97418 11694

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**WANTED**
X-Ray Techninician (Part Time)
CONTACT :
SHILPA DIAGNOSTICS PVT LTD., MCC B BLOCK, NEAR SWIMMING POOL, DAVANGERE.
98440 65638

**WANTED**
1) Computer Teacher - 2 Post,
2) Programming faculty - 2 Post.
Prefence to experience candidate.
Harshitha Computers
86/1 B(A) Shivananda Plaza opp. High School field. AVK Road, Davanagere.
G. Mahantesha : 98456 85224

**ಷೇರ್ ಬಾಂಡ್ ಕಳೆದಿದೆ**
ರತ್ನಮ್ಮ ಕೋಂ. ಲೇ|| ಕೆ.ಜಿ. ನಾಗರಾಜ ಇವರ ಹೆಸರಿನಲ್ಲಿ ದಾವಣಗೆರೆ ಷುಗರ್ ಕಂಪನಿ ಲಿಮಿಟೆಡ್, ಕುಕ್ಕುವಾಡ, ದಾವಣಗೆರೆ ಇಲ್ಲಿ ಷೇರು dDS ಸದರಿ ಷೇರ್ ಬಾಂಡ್ ನಂ. DSR1282, ಹೊಂದಿದ್ದು, ಇವರು ದಿ.: 16.8.2023 ರಂದು ನಿಧನರಾಗಿರುತ್ತಾರೆ. ಆದರೆ ಇವರ ಹೆಸರಿನಲ್ಲಿರುವ ಈ ಷೇರ್ ಬಾಂಡ್ ದಿ. : 25.8.2023ರಂದು ಮನೆಯನ್ನು ಸ್ವಚ್ಛ ಮಾಡುವಾಗ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನ್‌ಗೆ ತಿಳಿಸಲು ಕೋರಿದೆ.
99456 12744

**ತಕ್ಷಣ ಬೇಕಾಗಿದ್ದಾರೆ**
ಅನುಭವವುಳ್ಳ ಬೆಣ್ಣೆ ದೋಸೆ ಭಟ್ಟರು ಬೆಂಗಳೂರಿನಲ್ಲಿ ಕೆಲಸ ಮಾಡಲು ತಕ್ಷಣ ಬೇಕಾಗಿದ್ದಾರೆ. ಅನುಭವಕ್ಕೆ ತಕ್ಕ ವೇತನ ಹಾಗೂ ಉಚಿತ ವಸತಿ ಸೌಲಭ್ಯ ನೀಡಲಾಗುವುದು. ಸಂಪರ್ಕಿಸಿ.
86609 35720

**ಬೇಕಾಗಿದ್ದಾರೆ**
ಬೆಳ್ಳಿ ಬಂಗಾರದ ಅಂಗಡಿಗೆ ಸೇಲ್ಸ್‌ಮ್ಯಾನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ
98444 44772

**ಬೆಂಗಳೂರಿನಲ್ಲಿ ಹೌಸ್‌ಕೀಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ನೆಲ, ಪಾತ್ರೆ, ಬಟ್ಟೆ ಕ್ಲೀನಿಂಗ್ ಹುಡುಗರು, 10 ಗಂಟೆ ಕೆಲಸ ಸಂಬಳ 10,500/- ಓವರ್ ಟೈಂ ಕೆಲಸಕ್ಕೆ ಹೆಚ್ಚಿಗೆ ಹಣ, ಊಟ, ವಸತಿ ಉಚಿತ, ವಯಸ್ಸು 18 ರಿಂದ 30,
ರಮೇಶ್, 97400 98047

**ಸೈಟುಗಳು ಮತ್ತು ಮನೆಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ ಬಂಗಲೆ ಇದೆ, 50x70 ಪಶ್ಚಿಮ ಮತ್ತು ದಕ್ಷಿಣ ಕಾರ್ನರ್ ರಶ್ಮಿ ಸ್ಕೂಲ್ ಹಿಂಭಾಗ 30x60 ಪೂರ್ವ, ಎಂ.ಸಿ.ಸಿ. 'ಎ' ಬ್ಲಾಕ್ 44x60. ಪಿ.ಜೆ. ಬಡಾವಣೆಯಲ್ಲಿ 27x69 ಮನೆ ಪೂರ್ವ ಮಾರಾಟಕ್ಕಿದೆ.
ಯಲ್ಲೋಜಿರಾವ್ S ಏಜೆಂಟರು
97418 11694

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**TELE CALLER**
(Attractive Salary + Incentives)
9036112654

**ತೊಗಟವೀರ ಹಾಸ್ಟೆಲ್ ಬಾಡಿಗೆಗೆ ಇದೆ**
Ground Floor : 3204 Sqft.
First Floor : 5260 Sqft.
Second Floor : 5260 Sqft.
Contact : 83108 95113
94483 38550

**ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
ಊಟ, ವಸತಿಯ ಸೌಲಭ್ಯವಿದೆ
ಸಂಬಳ-8000-13000
PH : +9188845 95873
97311 55583

**WANTED**
We need female to teach computer software courses like C,C++, and Other Courses At Davanagere.
Call : 97392 30843

**ಮನೆ ಬಾಡಿಗೆಗೆ ಇದೆ**
1ನೇ ಮಹಡಿ, ಡುಪ್ಲೆಕ್ಸ್ ಹೌಸ್ 2BHK (ಸಸ್ಯಹಾರಿಗಳಿಗೆ ಮಾತ್ರ) ಪಿ.ಜೆ. ಬಡಾವಣೆ, ದಾವಣಗೆರೆ.
63609 20353

**HOUSE FOR RENT**
1st floor-3 BHK & Having solar water & borewel water facility available for rent.
# 1982/2, 6th cross, siddaveerappa layout, DVG.
94806 93506
82777 97633

**ಬೇಕಾಗಿದ್ದಾರೆ**
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆಯಲ್ಲಿರುವ ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ ಜವಾನರು (ಮಹಿಳೆ) ಬೇಕಾಗಿದ್ದಾರೆ. ಪಿ.ಎಫ್. ಮತ್ತು ESI ಸೌಲಭ್ಯವಿದೆ. ಆಯ್ಕೆಯಾದ ಅಭ್ಯರ್ಥಿಯ ಒಂದು ಮಗುವಿಗೆ ವಿದ್ಯಾಭ್ಯಾಸ ಸೌಲಭ್ಯವಿರುತ್ತದೆ.
99640 17729

**ಬಿಲ್ಡಿಂಗ್ ಬಾಡಿಗೆಗಿದೆ**
ದಾವಣಗೆರೆ ಸ್ಟೇಡಿಯಂ ರೋಡ್ ಹತ್ತಿರ, 500 ಚ.ಅ. ಅಳತೆಯ ನೆಲಮಹಡಿ, 1ನೇ ಮಹಡಿ, 2ನೇ ಮಹಡಿ ಬಿಲ್ಡಿಂಗ್ ಬಾಡಿಗೆಗಿದೆ
94482 72734

**ಬೇಕಾಗಿದ್ದಾರೆ**
ನಮ್ಮ ಸಂಸ್ಥೆಯ ತಯಾರಿಕಾ ವಿಭಾಗದಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ. ವಿದ್ಯಾಭ್ಯಾಸ : ಎಸ್.ಎಸ್.ಎಲ್.ಸಿ. ವಯಸ್ಸು : 25 ರಿಂದ 40ರ ಒಳಗೆ. ಕೆಲಸದ ಸಮಯ : ಬೆ. 10 ರಿಂದ ಸಂ. 8.30
ಪರಿಮಳ ಕಾಫಿ ಕಂಪನಿ, ಮಂಡಿಪೇಟೆ, ದಾವಣಗೆರೆ
94482 72734

**BUSINESS**
PART TIME BUSINESS OPPORTUNITY & DISTRIBUTORS REQUIRED
CONTACT :
78294 11805

**ಮನೆ ಮಾರಾಟಕ್ಕಿದೆ**
ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಶ್ರೀ ಸಿದ್ದವೀರಪ್ಪ ಬಡಾವಣೆ, 8ನೇ ಕ್ರಾಸ್‌ನಲ್ಲಿರುವ # 2001ರಲ್ಲಿ 30x46 ಅಳತೆಯಲ್ಲಿರುವ ಮನೆಗಳು ಮಾರಾಟಕ್ಕಿರುತ್ತವೆ. ಸಂಪರ್ಕಿಸಿ :
ಶ್ರೀ ಜಿ.ಹೆಚ್. ಮಂಜುನಾಥ್
88849 62111

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ.
10,000 ರಿಂದ 15,000 ಸಾವಿರ ಸಂಬಳ.
91106 21233

**ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗು ಕಾಫಿ ಮಾಡುವವರು ಬೇಕಾಗಿದ್ದಾರೆ.
ಸ್ಥಳ: 1946 ಪ್ರಕಾಶ್ ಕಾಫಿ ವರ್ಕ್ಸ್ ಮಾಮಾಸ್ ಜಾಯಿಂಟ್ ರೋಡ್ ಮತ್ತು ಪ್ರಕಾಶ್ ಕಾಫಿ ವರ್ಕ್ಸ್ ವಿಜಯಲಕ್ಷ್ಮಿ ರಸ್ತೆ
99004 38052, 97401 53513


**2 BHK ಮನೆ ಲೀಸ್‌ಗೆ ಇದೆ**
ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಡಾಬಾ ಸ್ವಾಪ್, ದಾವಣಗೆರೆ. ಬೋರ್‌ವೆಲ್ ನೀರಿನ ವ್ಯವಸ್ಥೆ ಇದೆ.
72042 66144

**ಸೈಟುಗಳು ಮಾರಾಟಕ್ಕಿವೆ**
1) ವಾಜಪೇಯಿ ಲೇಔಟ್ 30x50 (ಪಶ್ಚಿಮ)
2) ಗ್ಲಾಸ್‌ಹೌಸ್ ಹತ್ತಿರ 30x50 (ಉತ್ತರ)
3) ಸಿದ್ದವೀರಪ್ಪ ಬಡಾವಣೆ 49x50 (ಪೂರ್ವ)
4) ಆಂಜನೇಯ ಬಡಾವಣೆ 30x50 (ಉತ್ತರ)
5) ಡಾಲರ್ಸ್ ಕಾಲೋನಿ 30x50 (ದಕ್ಷಿಣ)
Agent : 95385 65909

**ಸೈಟುಗಳು ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ (40x51) ಪಶ್ಚಿಮ
2) ಕುಂದವಾಡ ಸೈ. ನಂ. 44 (30x50) ಪಶ್ಚಿಮ, ನೈರುತ್ಯ ಮೂಲೆ
3) ಕುಂದವಾಡ ಸೈಟ್ ನಂ. 43 (30x50) ಪಶ್ಚಿಮ (ಅಕ್ಕ-ಪಕ್ಕ)
97404 47907

**ಸೈಟುಗಳು ತಕ್ಷಣ ಮಾರಾಟಕ್ಕಿವೆ**
ಹದಡಿ ಶೆಟ್ಟರ್ ಹೊಲ ಪೂರ್ವ ಮುಖವುಳ್ಳ 40x50 ಅಳತೆಯ ಸೈಟ್ ಸರ್ಕಾರಿ ನೌಕರರ ಬಡಾವಣೆ (ಭರತ್ ಡಾಬಾ ಅಜಯಕುಮಾರ್)ಯಲ್ಲಿ 30x40) ಸೈಟ್‌ಗಳು ತಕ್ಷಣ ಮಾರಾಟಕ್ಕಿವೆ.
98440 26622

**ನೇತ್ರ ದಾನ ಶ್ರೇಷ್ಠ ದಾನ**

**ಲೈಂಗಿಕ ನಿಶ್ಶಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಸೈಟ್ ಮಾರಾಟಕ್ಕಿದೆ**
ಪೂರ್ವ/ಪಶ್ಚಿಮ, 40x32
ಶಿವ ಪಾರ್ವತಿ ಬಡಾವಣೆ, ಶಾಮನೂರು.
Price - 4100 / sq.ft
81236 83761

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ.**
ಸರ್ಕಾರಿ ನೌಕರರ ಬಡಾವಣೆಯಲ್ಲಿ ಬಿ ಬ್ಲಾಕ್ 30x50 ಪೂರ್ವ, 30x40 ಪೂರ್ವ, 30x40 ಪಶ್ಚಿಮ, ಗ್ಲಾಸ್ ಹೌಸ್ ಹತ್ತಿರ ದಕ್ಷಿಣ 30x40, ಉತ್ತರ 30x50. ಎಸ್. ಎಸ್. ಬಡಾವಣೆಯ ಬಿ ಬ್ಲಾಕ್‌ನಲ್ಲಿ 40x60 ದಕ್ಷಿಣ, ಶ್ರೀ ಸಾಮಾನ್ಯದಲ್ಲಿ 30x43, ಉತ್ತರ ಬೈಪಾಸ್ ಸರ್ವೀಸ್ ರಸ್ತೆಗೆ ಕುಬೇರ ಹೋಟೆಲ್ ಹತ್ತಿರ 30x55 ದಕ್ಷಿಣ (ಕಮರ್ಷಿಯಲ್) ಸೈಟ್ ಮಾರಾಟಕ್ಕೆ ಇದೆ.
- ಸಂಪರ್ಕಿಸಿ. ಸುರೇಶ್ ಪಿ.ಎಸ್. ಶಾಮನೂರು
84314 00907

**ಬೇಕಾಗಿದ್ದಾರೆ**
ಪೇಂಟ್ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗ ಬೇಕಾಗಿದ್ದಾನೆ. ಅನುಭವ ಉಳ್ಳವರಿಗೆ ಆದ್ಯತೆ. ಸಂಪರ್ಕಿಸಿರಿ :
80731 81729

**ಬೇಕಾಗಿದ್ದಾರೆ**
ಪೈಪ್ ಡಿಸ್ಟ್ರಿಬ್ಯೂಷನ್ ಅಂಗಡಿಗೆ Sales Executive ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಕಡ್ಡಾಯವಾಗಿ ಹೊಂದಿರುವವರು ಸಂಪರ್ಕಿಸಿ : KOF ಆಯಿಲ್ ಮಿಲ್ ಕಾಂಪ್ಲೆಕ್ಸ್, ಈರುಳ್ಳಿ ಮಾರ್ಕೆಟ್ ರಸ್ತೆ ಹತ್ತಿರ, ದಾವಣಗೆರೆ.
74063 96332

**ಪಿಗ್ಮಿ ಕಲೆಕ್ಷನ್ ಹುಡುಗರು ಬೇಕಾಗಿದ್ದಾರೆ**
ಸಂಪರ್ಕಿಸಿರಿ :
63644 64849

**ಬೇಕಾಗಿದ್ದಾರೆ**
ಬಿ.ಎ. ಬಿ.ಇಡಿ., -1 (ENG)
ಬಿ.ಎಸ್ಸಿ., -2
ಹಾಸ್ಟೆಲ್ ವಾರ್ಡನ್ -1 (ಮಹಿಳೆ)
ಎಸ್.ಆರ್.ಪಿ. ಕಾನ್ವೆಂಟ್
17ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆ.
77950 66883, 78927 27892

**ಬೇಕಾಗಿದ್ದಾರೆ**
ಬಿಜೆಪಿ ಆಫೀಸ್‌ಗೆ ಉತ್ತಮವಾದ ಕಂಪ್ಯೂಟರ್ ಎಡಿಟಿಂಗ್ ಡಿಸೈನರ್ ಪುರುಷರು ಹಾಗೂ ಅನುಭವಿ ಕಾರ್ ಡ್ರೈವರ್ ತಕ್ಷಣ ಬೇಕಾಗಿದ್ದಾರೆ.
63606 51617, 73535 07622

**ಮನೆ ಮಾರಾಟಕ್ಕಿದೆ**
ಎಸ್.ಎಸ್. ಬಡಾವಣೆ ಬಿ ಬ್ಲಾಕ್ ಡೋರ್ ನಂ. 2048/18, 4ನೇ ಮೇನ್, 14ನೇ ಕ್ರಾಸ್ 30x40 ಅಳತೆಯ ಗ್ರೌಂಡ್ ಫ್ಲೋರ್ ಹಾಗೂ ಮೊದಲನೇ ಮಹಡಿ ಇರುವ ಮುನ್ಸಿಪಲ್ ಹಾಗೂ ಬೋರ್ ನೀರಿನ ಸೌಕರ್ಯವಿರುವ ಸುಸಜ್ಜಿತವಾದ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
96114 81408

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**WANTED TEACHERS**
BA., B.Sc., B.Com., Post : Graduate with good English
Contact Immediately
99801 48289
98807 43838

**HOUSE FOR RENT / LEASE**
3BHK Furnsihed, BigHall, Veranda, Store, Kitchen, Pooja, Bath, Separatly, 1st Floor, 24 Hrs Water,
13th Main, BIET Road, Opp. Dvg Harihara Urban Bank, MCC B Block, Davanagere.
98444 99799

**Admission Open For**
ಬಿಎಸ್ಸಿ ನರ್ಸಿಂಗ್
TMAE SOCIETY'S
SCS INSTITUTE OF NURSING SCIENCES
ಹರಪನಹಳ್ಳಿ-583131
ಕೆಲವೇ ಸೀಟುಗಳು ಮಾತ್ರ
9448080626, 9902378278
College : 9448026786, 9380131323

**WANTED**
Male office staff
Qualification:
Any degree
Contact:
88843 22266

**PART TIME EARNING**
Tution Teacher For 10th, PUC, Navodhaya With Experience In Tution Classes.
Jayanagara, Davanagere.
82170 78924

# ಶಾಮನೂರು ಶಿವಶಂಕರಪ್ಪ ಖಾಸಗಿ ಬಸ್ ನಿಲ್ದಾಣ ಉದ್ಘಾಟನೆಗೆ ಒತ್ತಾಯ



ದಾವಣಗೆರೆ, ನ. 17- ನೂತನವಾಗಿ ನಿರ್ಮಾಣಗೊಂಡಿರುವ ನಗರದ ಡಾ. ಶಾಮನೂರು ಶಿವಶಂಕರಪ್ಪ ಖಾಸಗಿ ಬಸ್ ನಿಲ್ದಾಣದ ಉದ್ಘಾಟನೆಯನ್ನು ಕೂಡಲೇ ನೆರವೇರಿಸುವಂತೆ ಜಿಲ್ಲಾ ಜೆಡಿಎಸ್ ಮುಖಂಡ ಎಂ.ಎನ್. ನಾಗರಾಜ್ ಜಿಲ್ಲಾ ಉಸ್ತುವಾರಿ ಸಚಿವರನ್ನು ಒತ್ತಾಯಿಸಿದ್ದಾರೆ.

ಈ ನಿಲ್ದಾಣದ ಕಾಮಗಾರಿ ಪೂರ್ಣಗೊಂಡು ಉದ್ಘಾಟನೆಗೆ ಸಿದ್ಧಗೊಂಡಿದ್ದರೂ ಯಾವ ಕಾರಣಕ್ಕೆ ವಿಳಂಬ ನೀತಿ ಅನುಸರಿಸುತ್ತಿದೆ? ಎಂದು ಅವರು ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರನ್ನು ಪ್ರಶ್ನಿಸಿದ್ದಾರೆ.

ತಾತ್ಕಾಲಿಕವಾಗಿರುವ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿನ ಖಾಸಗಿ ಬಸ್ ನಿಲ್ದಾಣದಲ್ಲಿ ಸಮರ್ಪಕ ಮೂಲಭೂತ ಸೌಕರ್ಯಗಳಿಲ್ಲದ ಕಾರಣ ಗ್ರಾಮಾಂತರ ಪ್ರದೇಶದ ಪ್ರಯಾಣಿಕರು ಪರದಾಡುತ್ತಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಅಲ್ಲದೇ ಯುವಜನರು ಆಟದ ಮೈದಾನವಿಲ್ಲದೆ ಪರದಾಡುತ್ತಿದ್ದು, ತಾತ್ಕಾಲಿಕ ಖಾಸಗಿ ಬಸ್ ನಿಲ್ದಾಣವನ್ನು ಸ್ಥಳಾಂತರಗೊಳಿಸುವುದರೊಂದಿಗೆ ಕ್ರೀಡಾಪಟುಗಳಿಗೆ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನವನ್ನು ಬಿಟ್ಟುಕೊಡುವಂತೆ ಅವರು ಆಗ್ರಹಿಸಿದ್ದಾರೆ.

ವಾಯುವಿಹಾರಕ್ಕೂ ಕೂಡ ಜನರು ಪರದಾಡುತ್ತಿದ್ದು, ಅವರಿಗೂ ಸಹ ಈ ಮೈದಾನವನ್ನು ಬಿಟ್ಟು ಕೊಡುವಂತೆ ನಾಗರಾಜ್ ಒತ್ತಾಯಿಸಿದ್ದಾರೆ.

**ಬಸ್ ನಿಲ್ದಾಣದ ಕಾಮಗಾರಿ ಪೂರ್ಣಗೊಳ್ಳಲಿ :** ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಉಳಿದಿರುವ ಅಲ್ಪ ಸ್ವಲ್ಪ ಕಾಮಗಾರಿಯನ್ನೂ ಚುರುಕುಗೊಳಿಸಿ, ತತ್‌ಕ್ಷಣವೇ ಪೂರ್ಣಗೊಳಿಸುವ ಮೂಲಕ ಉದ್ಘಾಟನೆಯನ್ನು ನೆರವೇರಿಸಬೇಕು. ಈ ಮೂಲಕ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿರುವ ತಾತ್ಕಾಲಿಕ ಬಸ್ ನಿಲ್ದಾಣವನ್ನು ಸ್ಥಳಾಂತರಗೊಳಿಸುವುದರ ಮೂಲಕ ಕ್ರೀಡಾಪಟುಗಳಿಗೆ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನವನ್ನು ಬಿಟ್ಟುಕೊಡುವಂತೆ ನಾಗರಾಜ್ ಒತ್ತಾಯಿಸಿದ್ದಾರೆ.

# ಉತ್ತರ ಕರ್ನಾಟಕಕ್ಕೆ ಪ್ರಾತಿನಿಧ್ಯ ಕೊಡಲು ಒತ್ತಾಯ

## ಚೇಲಾಗಳ ಮಾತು ಕೇಳಿ ನಿರ್ಧಾರ ತೆಗೆದುಕೊಳ್ಳಬಾರದು ಎಂದು ಯತ್ನಾಳ್ ಗುಡುಗು

ಬೆಂಗಳೂರು, ನ. 17 - ರಾಜ್ಯ ಬಿಜೆಪಿಯಲ್ಲಿ ನಾಯಕತ್ವ ಆಯ್ಕೆ ವಿಚಾರಕ್ಕೆ ಸಂಬಂಧಿಸಿದಂತೆ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಬಹಿರಂಗ ಬಂಡಾಯ ಎದ್ದಿದ್ದು, ಉತ್ತರ ಕರ್ನಾಟಕ ಭಾಗಕ್ಕೆ ಪ್ರಾತಿನಿಧ್ಯ ಕೊಡುವಂತೆ ಒತ್ತಾಯಿಸಿದ್ದಾರೆ.

ರಾಜ್ಯಾಧ್ಯಕ್ಷ ಮತ್ತು ವಿಪಕ್ಷ ನಾಯಕನ ಆಯ್ಕೆ ವಿಚಾರವಾಗಿ ಪಕ್ಷದೊಳಗೆ ಅಸಮಾಧಾನ ಉಂಟಾಗಿರುವ ಹಿನ್ನೆಲೆಯಲ್ಲಿ ಕೇಂದ್ರ ನಾಯಕರಾದ ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ದುಶ್ಯಂತ್ ಕುಮಾರ್ ಗೌತಮ್ ಅವರು ಶಾಸಕ ಯತ್ನಾಳ್ ಅವರನ್ನು ಭೇಟಿ ಮಾಡಿದರು. ಉಭಯರು ಬಿಜೆಪಿ ಶಾಸಕಾಂಗ ಸಭೆಗೆ ವೀಕ್ಷಕರಾಗಿ ಬಂದಿದ್ದರು.

ನಂತರ ಸುದ್ದಿಗಾರರ ಜೊತೆ ಮಾತನಾಡಿದ ಯತ್ನಾಳ್, ಕರ್ನಾಟಕದಲ್ಲಿ ಆಗಿರುವ ಬೆಳವಣಿಗೆ, ಚುನಾವಣೆಯಲ್ಲಿ ಯಾರು ಪಕ್ಷಕ್ಕೆ ದ್ರೋಹ ಮಾಡಿದ್ದಾರೆ, ಒಂದು ವರ್ಗದ ಕೇಂದ್ರೀಕೃತವಾಗಿ ಮಾಡಿದ್ದರು ಎಂದು ವರಿಷ್ಠರಿಗೆ ವಿವರಿಸಿದ್ದೇನೆ ಎಂದರು.



ಅವರಿಗೆ ಎಷ್ಟೋ ವಿಷಯ ಗೊತ್ತಿರಲಿಲ್ಲ, ನಾನು ಧೈರ್ಯದಿಂದ ಎಲ್ಲವನ್ನೂ ಹೇಳಿದ್ದೇನೆ. ನಾವು ಈ ದೇಶದಲ್ಲಿ ಉಳಿಯಬೇಕಾದರೆ ನರೇಂದ್ರ ಮೋದಿ ಮತ್ತೆ ಪ್ರಧಾನಿ ಆಗಬೇಕು. ವರಿಷ್ಠರು ಕೆಲವೇ ಚೇಲಾಗಳ ಮಾತು ಕೇಳಿ ನಿರ್ಧಾರ ತೆಗೆದುಕೊಳ್ಳಬಾರದು, ಕೆಲವರು ಬ್ಲ್ಯಾಕ್ ಮೇಲ್ ಮಾಡಲು ಪ್ರಯತ್ನ ಮಾಡುತ್ತಾರೆ, ನಾನು ಅಂಜಲ್ಲ ಎಂದು ಹೇಳಿದ್ದೇನೆ. ಇಬ್ಬರೂ ಬಹಳ ಖುಷಿಯಾದರು ಎಂದು ಹೇಳಿದರು.

ನೀವು ಎಲ್ಲವನ್ನೂ ಧೈರ್ಯವಾಗಿ ಹೇಳಿದ್ದೀರಿ, ಅಧ್ಯಕ್ಷರು ಮತ್ತು ಪ್ರಧಾನಿಗೆ ಹೇಳುತ್ತೇವೆ ಎಂದು ಅವರು ಹೇಳಿದ್ದಾರೆ. ನಿಮ್ಮನ್ನು ಮನೆಗೆ ಕರೆಸುವಷ್ಟು ದೊಡ್ಡ ಮನೆ ನಂದಲ್ಲ ಎಂದು ಹೇಳಿದೆ. ಅದಕ್ಕೆ ನನ್ನ ಮನೆಯೂ ಸಣ್ಣದಿದೆ, ಮುಂದಿನ ಸಲ ನನ್ನ ಮನೆ ತೋರಿಸುತ್ತೇನೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದರು ಎಂದೂ ತಿಳಿಸಿದರು.

ಯತ್ನಾಳ್‌ನನ್ನು ಖರೀದಿ ಮಾಡಲು ಆಗಲ್ಲ. ನಿನ್ನೆ ಒಬ್ಬ ಏಜೆಂಟ್ ನನ್ನನ್ನು ಖರೀದಿ ಮಾಡಲು ಬಂದಿದ್ದ. ಅಡ್ಜೆಸ್ಟ್‌ಮೆಂಟ್ ರಾಜಕಾರಣದ ಬಗ್ಗೆ ಹೇಳಿದ್ದೇನೆ ಎಂದು ತಿಳಿಸಿದರು.

ವಿಪಕ್ಷ ನಾಯಕನ ಸ್ಥಾನ ಉತ್ತರ ಕರ್ನಾಟಕಕ್ಕೆ ಕೊಡಬೇಕು, ಅದರಲ್ಲಿ ರಾಜಿಯೇ ಇಲ್ಲ ಎಂದು ಖಡಕ್ ಆಗಿ ಹೇಳಿದ ಯತ್ನಾಳ್, ದಕ್ಷಿಣ ಕರ್ನಾಟಕದವರೇ ಆಗಬೇಕಾ? ಮಂಗಳೂರು ಬಿಟ್ಟರೆ ದಕ್ಷಿಣ ಕರ್ನಾಟಕದ ಎಷ್ಟು ಶಾಸಕರು ಇದ್ದಾರೆ? ಬಹಳಷ್ಟು ಶಾಸಕರು ನಮ್ಮ ಜೊತೆ ಇದ್ದಾರೆ ಆದರೆ ಅವರಿಗೆ ಮಾತಾಡಲು ಧಮ್ ಇಲ್ಲ ಎಂದರು.

ಅವರಲ್ಲಿ ಬಹಳಷ್ಟು ಜನ ತಮ್ಮ ಮಕ್ಕಳನ್ನು ಲೋಕಸಭೆಗೆ ನಿಲ್ಲಿಸಬೇಕು ಅಂತಾ ಇದ್ದಾರೆ. ಉತ್ತರ ಕರ್ನಾಟಕಕ್ಕೆ ಅವಕಾಶ ಕೊಡದೇ ಇದ್ದರೆ ಜನ ತೀರ್ಮಾನ ಮಾಡುತ್ತಾರೆ, ಆಗ ನಾವೂ ತೀರ್ಮಾನ ಮಾಡುತ್ತೇವೆ ಎಂದು ಹೇಳಿದರು.


# ನಗರದಲ್ಲಿ ಇಂದು ಕಾನೂನು ಅರಿವು ಕಾರ್ಯಕ್ರಮ

ಸ್ಲಂ ಜನಾಂದೋಲನ-ಕರ್ನಾಟಕ ಹಾಗೂ ಸಾವಿತ್ರಿಬಾಯಿ ಫುಲೆ ಮಹಿಳಾ ಸಂಘಟನೆ ಇವರ ಸಹಯೋಗದಲ್ಲಿ ಮಹಿಳೆಯರಿಗಾಗಿ ಇರುವ ಕಾನೂನುಗಳ ಬಗ್ಗೆ ಕಾನೂನು ಅರಿವು ಕಾರ್ಯಕ್ರಮವು ಇಂದು ಬೆಳಿಗ್ಗೆ 11 ಗಂಟೆಗೆ ರೋಟರಿ ಬಾಲಭವನದಲ್ಲಿ ನಡೆಯಲಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಮಾನವ ಹಕ್ಕುಗಳ ವೇದಿಕೆಯ ಕಾರ್ಯದರ್ಶಿ ಎಲ್.ಹೆಚ್. ಅರುಣ್‌ಕುಮಾರ್ ನೆರವೇರಿಸಲಿದ್ದು, ಅಧ್ಯಕ್ಷತೆಯನ್ನು ಸ್ಲಂ ಜನಾಂದೋಲನ ಕರ್ನಾಟಕದ ಅಧ್ಯಕ್ಷ ಎಂ. ಶಬ್ಬೀರ್ ಸಾಬ್ ವಹಿಸುವರು.

ಮುಖ್ಯ ಅತಿಥಿಗಳಾಗಿ ಸ್ಲಂ ಜನಾಂದೋಲನ ಸಮಿತಿ ಗೌರವಾಧ್ಯಕ್ಷ ಆನಂದಪ್ಪ ಎಸ್.ಎಲ್., ಹಿರಿಯ ವಕೀಲರಾದ ಬಿ.ಎಂ. ಹನುಮಂತಪ್ಪ, ಶ್ರೀಮತಿ ಅನ್ನಪೂರ್ಣ ಟಿ.ಎಂ., ನಿವೇಶನ ರಹಿತರ ಹೋರಾಟ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಮಂಜುಳ, ಮಂಡಕ್ಕಿ ಭಟ್ಟಿಯ ಮಾಜಿ ಅಧ್ಯಕ್ಷ ಮಹ್ಮದ್ ಹರ್ಷದ್ (ಮುನ್ನ) ಇವರುಗಳು ಆಗಮಿಸುವರು. ಸ್ಲಂ ಜನಾಂದೋಲನ ಕರ್ನಾಟಕದ ರಾಜ್ಯ ಸಂಚಾಲಕ ಇಮ್ತಿಯಾಜ್ ಆರ್. ಮಾನ್ವಿ ಪ್ರಾಸ್ತಾವಿಕ ನುಡಿಗಳನ್ನಾಡುವರು.

# ಆವರಗೆರೆಯಲ್ಲಿ ಇಂದು ಶಿವಸಂಚಾರ



ಆವರಗೆರೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಇಂದು ಮತ್ತು ನಾಳೆ ಸಂಜೆ 6.30 ಕ್ಕೆ ಶಿವಸಂಚಾರ ನಾಟಕೋತ್ಸವ-2023 ನಡೆಯಲಿದೆ.

ದಿವ್ಯ ಸಾನ್ನಿಧ್ಯವನ್ನು ಶ್ರೀ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಸಾಣೇಹಳ್ಳಿ ವಹಿಸುವರು. ಕಾರ್ಯಕ್ರಮವನ್ನು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಕಕ್ಕರಗೊಳ್ಳದ ಪರಮೇಶ್ವರಪ್ಪ, ದಾದಾಪೀರ್ ನವಿಲೇಹಾಳ್, ಕೆ.ಬಿ. ಕೊಟ್ರೇಶ್, ವೀಣಾ ಮಂಜುನಾಥ್, ಆರ್.ಜಿ. ಹಳ್ಳಿ ಸುರೇಂದ್ರ ಆಗಮಿಸುವರು. ಅಧ್ಯಕ್ಷತೆಯನ್ನು ಜಯ್ಯಮ್ಮ ಗೋಪಿನಾಯ್ಕ ವಹಿಸುವರು. ಕಾರ್ಯಕ್ರಮದಲ್ಲಿ ಇಂದು 'ಜೊತೆಗಿರುವನು ಚಂದಿರ', ನಾಳೆ 'ತಾಳಿಯ ತಕರಾರು' ಮತ್ತು 20 ರಂದು 'ಕಲ್ಯಾಣದ ಬಾಗಿಲು'ಂ ನಾಟಕಗಳು ಪ್ರದರ್ಶನಗೊಳ್ಳುವವು.

# ಯುನೈಟೆಡ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಸಡಗರದ ಮಕ್ಕಳ ದಿನಾಚರಣೆ



ದಾವಣಗೆರೆ, ನ. 17 - ನಗರದ ಯುನೈಟೆಡ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಸಡಗರ - ಸಂಭ್ರಮದಿಂದ ಮಕ್ಕಳ ದಿನಾಚರಣೆಯನ್ನು ಇಂದು ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಿ. ದಾದಾಪೀರ್ ಅವರು, ಮಕ್ಕಳ ಭವಿಷ್ಯಕ್ಕಾಗಿ ಉತ್ತಮ ಶಿಕ್ಷಣದ ಜೊತೆಗೆ ಉತ್ತಮ ಶಿಸ್ತನ್ನು ಅಳವಡಿಸಿಕೊಂಡು ಒಳ್ಳೆಯ ಭವಿಷ್ಯ ರೂಪಿಸಬೇಕು ಎಂದು ಹಿತನುಡಿ ನುಡಿದರು.

ಶಾಲೆಯ ಪ್ರಾಂಶುಪಾಲ ಎಂ. ವಾಸಿಂ ಪಾಷಾ ಮಕ್ಕಳ ದಿನಾಚರಣೆಯ ಕುರಿತು ಮಕ್ಕಳು ಯಶಸ್ವಿಯಾಗಲು ಒಂದು ಗುರಿಯನ್ನು ಇಟ್ಟುಕೊಳ್ಳಬೇಕು. ಆ ಗುರಿಯನ್ನು ಮುಟ್ಟುವವರೆಗೂ ಸತತ ಪ್ರಯತ್ನ ಮಾಡಬೇಕು. ಏಕೆಂದರೆ ಇಂದಿನ ಮಕ್ಕಳೇ ನಾಳಿನ ಉತ್ತಮ ರಾಷ್ಟ್ರವನ್ನು ಕಟ್ಟುವ ಪ್ರಜೆಗಳು ಎಂದು ಮಕ್ಕಳ ಮಹತ್ವವನ್ನು ತಿಳಿಸಿದರು.

ಶಾಲಾ ಸಂಯೋಜಕರಾದ ಶರ್ಫುನ್ನೀಸಾ ಮಾತನಾಡಿ, ಮಕ್ಕಳು ಈ ನಾಡಿನ ಅರಳುವ ಹೂವುಗಳು ಅದೇ ರೀತಿ ತಂದೆ-ತಾಯಿಯರ ಆಶಾಭಾವಗಳು ಎಂದು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಶಾಲಾ ಆಡಳಿತಾಧಿಕಾರಿ ಅಷ್ಫಾಕ್ ಅಹಮದ್ ಉಪಸ್ಥಿತರಿದ್ದರು.

# ಯೋಗ : ಸಂತೋಷ ರಾಷ್ಟ್ರಮಟ್ಟದಲ್ಲಿ ಪ್ರಥಮ ಸ್ಥಾನ



ದಾವಣಗೆರೆ, ನ. 17 - ಯೂತ್ಸ್ ಸ್ಪೋರ್ಟ್ಸ್ ಅಂಡ್ ಆಕ್ಟಿವಿಟೀಸ್ ಅಸೋಸಿಯೇಷನ್ ಆಫ್ ಇಂಡಿಯಾ ಆಯೋಜಿಸಲ್ಪಟ್ಟ ವೈಎಸ್‌ಎಎ ಓಪನ್ ನ್ಯಾಷನಲ್ ಲೆವೆಲ್ ಚಾಂಪಿಯನ್‌ಶಿಪ್ 2023 ಅನ್ನು ಗೋವಾದ ಸೇಂಟ್ ಜೋಸೆಫ್ ಹೈಸ್ಕೂಲ್, ಟಿವಲ್ ವದ್ದೇ, ಕ್ಯಾಲಂಗೂಟ್ ಬರ್ಡೆಜ್‌ನಲ್ಲಿ ಕಳೆದ ವಾರ ನಡೆಸಲಾಯಿತು.

ಸ್ಪರ್ಧೆಯಲ್ಲಿ ನಗರದ ಎಸ್.ಎಸ್. ಫಿಟ್‌ನೆಸ್ ಅಂಡ್ ಯೋಗ ಸ್ಪೋರ್ಟ್ಸ್ ಅಂತರರಾಷ್ಟ್ರೀಯ ಕ್ರೀಡಾಪಟು ಹಾಗೂ ಅಂತರರಾಷ್ಟ್ರೀಯ ತರಬೇತುದಾರ ಡಿ. ಸಂತೋಷ್ 19 ವರ್ಷದ ವಿಭಾಗದಲ್ಲಿ ಭಾಗವಹಿಸಿ ಪ್ರಥಮ ಸ್ಥಾನವನ್ನು ಪಡೆದು ಬಂಗಾರದ ಪದಕ ಗಳಿಸಿದ್ದಾರೆ.

ತಂಡದಲ್ಲಿ ಎಸ್. ಸಂಜಯ್ (ಸೋಮೇಶ್ವರ ಶಾಲೆ) (10 ರಿಂದ 12 ವರ್ಷದ ವಿಭಾಗ) ಎಸ್. ಸೂರ್ಯ (ಸೋಮೇಶ್ವರ ಶಾಲೆ), (8 ರಿಂದ 10 ವರ್ಷದ ವಿಭಾಗ) ವಿಷ್ಣುವರ್ಧನ (ಸೋಮೇಶ್ವರ ಶಾಲೆ) (10 ರಿಂದ 12 ವರ್ಷದ ವಿಭಾಗ), ಪಿ. ವಿಶೇಷ್ (ಪೋದಾರ್ ಇಂಟರ್‌ನ್ಯಾಷನಲ್ ಶಾಲೆ, 8 ವರ್ಷದ ವಿಭಾಗ), ಹೆಚ್. ಗಗನ (ಸರ್ಕಾರಿ ಪ್ರಥಮ ದರ್ಜೆ ಕಾಲೇಜ್, ದಾವಣಗೆರೆ) (16 ರಿಂದ 18 ವರ್ಷದ ವಿಭಾಗ) ದಲ್ಲಿ ಅವರುಗಳೂ ಕೂಡ ಪ್ರಥಮ ಸ್ಥಾನ ಪಡೆದು ವಿಜೇತರಾಗಿದ್ದಾರೆ.

ವಿಜೇತರನ್ನು ಸಹಾಯಕ ನಿರ್ದೇಶಕರಾದ ವಿಜಯಲಕ್ಷ್ಮಿ, ಆರ್.ಎಲ್.ಲಾ. ಕಾಲೇಜಿನ ಪ್ರಾಂಶುಪಾಲ ಡಾ. ಜಿ.ಎಸ್. ಯತೀಶ್, ಸೂಪರಿಂಟೆಂಡೆಂಟ್ ಆರ್.ಬಿ. ಲಿಂಗರಾಜ್ ಅಭಿನಂದಿಸಿದ್ದಾರೆ.

# ನಗರದಲ್ಲಿ ಇಂದು ಮಕ್ಕಳ ಮೇಳ

ಜಿಲ್ಲಾ ಶಿಶು ಕಲ್ಯಾಣ ಮಂಡಳಿ ಆಶ್ರಯದಲ್ಲಿ ಮಕ್ಕಳ ದಿನಾಚರಣೆ ಅಂಗವಾಗಿ ಇಂದು ಮಕ್ಕಳ ಮೇಳವನ್ನು ಇಂದು ಸಂಜೆ 5.30 ಕ್ಕೆ ವನಿತಾ ಸಮಾಜದ ಶ್ರೀ ಸತ್ಯಸಾಯಿ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಡಾ. ಶುಕ್ಲಾ ಶೆಟ್ಟಿ ಆಗಮಿಸುವರು. ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ ಉಪಸ್ಥಿತರಿರುವರು. ಅಧ್ಯಕ್ಷತೆಯನ್ನು ವರ್ಷದ ಉತ್ತಮ ಪ್ರೌಢಶಾಲೆ ವಿದ್ಯಾರ್ಥಿ ಪುರಸ್ಕೃತರಾದ ಕು. ವಸುಂಧರಾ ಹೆಗಡೆ ವಹಿಸುವರು. ಚಂದ್ರಯಾನ ಮಿಷನ್ ವಿಷಯ ಕುರಿತು ಪ್ರಬಂಧ ಸ್ಪರ್ಧೆ, ಜಾನಪದ ಗೀತಗಾಯನ, 10ನೇ ತರಗತಿ ವಿದ್ಯಾರ್ಥಿಗಳಿಗೆ ಉತ್ತಮ ಪ್ರೌಢಶಾಲಾ ವಿದ್ಯಾರ್ಥಿ ಆಯ್ಕೆ ಹಾಗೂ ಸ್ಥಳದಲ್ಲೇ ಚಿತ್ರ ಬಿಡಿಸುವುದು ಹಾಗೂ 'ಕಸದಿಂದ ರಸ' ಕಾರ್ಯಕ್ರಮ ನಡೆಯುವುದು.

# ಹರಿಹರ : ಅಂಗನವಾಡಿ ವೇತನ ಹೆಚ್ಚಳಕ್ಕೆ ಮನವಿ



ಹರಿಹರ, ನ. 17 - ತಾಲ್ಲೂಕು ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕಿಯರ ಸಂಘದ ವತಿಯಿಂದ ತಾಲ್ಲೂಕು ಶಿಶು ಅಭಿವೃದ್ಧಿ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಪೂರ್ಣಿಮಾ ಅವರಿಗೆ ಮನವಿ ಸಲ್ಲಿಸಿ ತಮ್ಮ ವೇತನ ಹೆಚ್ಚಿಸುವಂತೆ ಒತ್ತಾಯಿಸಲಾಯಿತು.

ಅಲ್ಲದೇ ಮಕ್ಕಳಿಗೆ ಹಾಗೂ ಗರ್ಭಿಣಿಯರಿಗೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ವಿತರಿಸುವಂತೆಯೂ ಮನವಿ ಮಾಡಲಾಯಿತು. ಈ ಸಂದರ್ಭದಲ್ಲಿ ತಾಲ್ಲೂಕು ಸಂಘದ ಅಧ್ಯಕ್ಷೆ ಬಿ.ಎಸ್. ನಿರ್ಮಲ, ಪ್ರಧಾನ ಕಾರ್ಯದರ್ಶಿ ಎಸ್.ಬಿ. ಲಲಿತಮ್ಮ, ಉಪಾಧ್ಯಕ್ಷರಾದ ಸುಧಾ ನಂದಿಗುಡಿ, ಗೀತಾ ಬೆಳ್ಳೂಡಿ, ಸುಜಾತ ಇತರರು ಹಾಜರಿದ್ದರು.

# ನಗರದ ಸೋಮೇಶ್ವರ ಶಾಲೆಯಲ್ಲಿ ಇಂದು ಚದುರಂಗ ಸ್ಪರ್ಧೆ

ಶ್ರೀ ಸೋಮೇಶ್ವರ ವಿದ್ಯಾಲಯದಲ್ಲಿ ಇಂದು ಬೆಳಿಗ್ಗೆ 9.30 ಕ್ಕೆ ಜಿಲ್ಲಾ ಮಟ್ಟದ ಅಂತರ ಶಾಲಾ ಮಟ್ಟದ ಚದುರಂಗ ಸ್ಪರ್ಧೆಯನ್ನು ಏರ್ಪಡಿಸಲಾಗಿದ್ದು, ಆಸಕ್ತ ಶಾಲಾ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ ಬಹುಮಾನವಾಗಿ 'ಸೋಮೇಶ್ವರ ಚದುರಂಗ ಸಿರಿ' ಪ್ರಶಸ್ತಿ ಹಾಗೂ 5 ಸಾವಿರ ರೂಪಾಯಿ ನೀಡಲಾಗುವುದು. ದ್ವಿತೀಯ ಬಹುಮಾನ ಪ್ರಶಸ್ತಿ ಪತ್ರದೊಂದಿಗೆ 3 ಸಾವಿರ ರೂ. ನೀಡಿ ಗೌರವಿಸಲಾಗುವುದೆಂದು ಶಾಲೆಯ ಗೌರವ ಕಾರ್ಯದರ್ಶಿ ಕೆ.ಎಂ ಸುರೇಶ್ ತಿಳಿಸಿದ್ದಾರೆ.

## ವಾಸ್ಕ್ಯುಲರ್ ಚಿಕಿತ್ಸೆ ಸಮಾಲೋಚನೆ

ದಾವಣಗೆರೆ, ನ. 17 - ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ವಾಸ್ಕ್ಯುಲರ್ ತಜ್ಞ ಡಾ. ಬಿ. ರಾಜೇಂದ್ರ ಪ್ರಸಾದ್ ಅವರು ಆರೈಕೆ ಆಸ್ಪತ್ರೆಯಲ್ಲಿ ನಾಳೆ ಬೆಳಿಗ್ಗೆ 10 ರಿಂದ ಮಧಾಹ್ನ 1 ರವರೆಗೆ ಸಮಾಲೋಚನೆಗೆ ಲಭ್ಯವಿರುತ್ತಾರೆ. ಉಬ್ಬಿರುವ ರಕ್ತನಾಳಗಳು, ಕೈ ಮತ್ತು ಕಾಲುಗಳ ಊತ ಮತ್ತು ನೋವು, ಮಧುಮೇಹದ ಕಾಲು, ಡಯಾಲಿಸಿಸ್, ವಾಸಿಯಾಗದ ಗಾಯ ಗಳು, ಕಾಲು ಬೆರಳುಗಳ ಬಣ್ಣ ಬದಲಾವಣೆ, ಗ್ಯಾಂಗ್ರೀನ್ ಮುಂತಾದ ಸಮಸ್ಯೆಗಳ ಬಗ್ಗೆ 8050560580 ಮೊಬೈಲ್ ನಂಬರ್‌ಗೆ ಸಂಪರ್ಕಿಸಿ ಹೆಸರನ್ನು ನೋಂದಾಯಿಸಿ, ತಜ್ಞರಲ್ಲಿ ಸಮಾಲೋಚಿಸಬಹುದು.

## ರಾಣೆಬೆನ್ನೂರಿನಲ್ಲಿ ಸಂವಾದ ಸಭೆ

ಉಪ-ವಿಭಾಗ-1 ಕಛೇರಿಯಲ್ಲಿ ವಿದ್ಯುತ್ ಗ್ರಾಹಕರ ಸಂವಾದ ಸಭೆಯನ್ನು ಆಯೋಜಿಸಿದ್ದು, ರಾಣೇಬೆನ್ನೂರು ನಗರ, ಉಪ-ವಿಭಾಗ-1 ಕ್ಕೆ ಸಂಬಂಧಪಟ್ಟ ಗ್ರಾಮೀಣ ಭಾಗದ ಗ್ರಾಹಕರು ಮಧ್ಯಾಹ್ನ 3 ರಿಂದ 5.30 ರವರೆಗೆ ಸಭೆಯಲ್ಲಿ ಭಾಗವಹಿಸಿ, ಅಹವಾಲು ಸಲ್ಲಿಸಬಹುದು.

## ಹೊನ್ನಾಳಿಯಲ್ಲಿ ಇಂದು ಬೆಸ್ಕಾಂ ಸಭೆ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ) ಹೊನ್ನಾಳಿ ಉಪವಿಭಾಗದ ಆವರಣದಲ್ಲಿ ಇಂದು ಮಧ್ಯಾಹ್ನ 3 ರಿಂದ ಸಂಜೆ 5.30 ರವರೆಗೆ ಗ್ರಾಹಕರ ಸಂವಾದ ಸಭೆ ನಡೆಯಲಿದೆ.

# ನಗರದಲ್ಲಿ ಇಂದು ಹಕ್ಕುಪತ್ರ ವಿತರಣೆ

ರಿಂಗ್ ರಸ್ತೆಯಿಂದ ಮಾಗಾನಹಳ್ಳಿ ರಸ್ತೆಗೆ ಸೇರುವ ಹೆಗಡೆ ನಗರದಲ್ಲಿ ವಾಸಿಸುತ್ತಿರುವ ನಿವೇಶನ ರಹಿತ ಬಡ ಕುಟುಂಬಗಳಿಗೆ ನಗರ ಆಶ್ರಯ ಸಮಿತಿ ಅಧ್ಯಕ್ಷರು ಹಾಗು ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 12 ಗಂಟೆಗೆ ಹಕ್ಕುಪತ್ರ ವಿತರಣೆ ಕಾರ್ಯಕ್ರಮವನ್ನು ಹೆಗಡೆ ನಗರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಹಾನಗರ ಪಾಲಿಕೆ ಆಯುಕ್ತೆ ಶ್ರೀಮತಿ ರೇಣುಕಾ ತಿಳಿಸಿದ್ದಾರೆ.

## ಹೊನ್ನಾಳಿ ತಾಲ್ಲೂಕಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಬೆಳಗುತ್ತಿ, ಮಲ್ಲಿಗೇನಹಳ್ಳಿ, ಜೀನಹಳ್ಳಿ, ಗುಡ್ಡೆಹಳ್ಳಿ, ಕತ್ತಿಗೆ, ಮಾದೇನಹಳ್ಳಿ, ಹೊಸಕೊಪ್ಪ, ನರಗನಕೆರೆ, ಆರುಂಡಿ ಮತ್ತು ಕೆಂಚಿಕೊಪ್ಪ ಗ್ರಾಮಗಳಿಗೆ ಇಂದು ಮಧ್ಯಾಹ್ನ 2 ರಿಂದ ಸಂಜೆ 5 ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ, ಹೊನ್ನಾಳಿಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಶ್ರೀನಿವಾಸ್ ತಿಳಿಸಿದ್ದಾರೆ.

# ಇಂದಿನಿಂದ ಸ್ಪರ್ಧಾತ್ಮಕ ಪರೀಕ್ಷೆ

## ಕೆಇಎ ಮಾರ್ಗಸೂಚಿ ಪಾಲಿಸಲು ಸೂಚನೆ

ದಾವಣಗೆರೆ,ನ.17 - ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ನಗರದ 18 ಪರೀಕ್ಷಾ ಕೇಂದ್ರಗಳಲ್ಲಿ ವಿವಿಧ ನಿಗಮ, ಮಂಡಳಿಯಲ್ಲಿನ ಹುದ್ದೆಗಳ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆಗಳು ನಾಳೆ ದಿನಾಂಕ 18 ಮತ್ತು 19ರಂದು ನಡೆಯಲಿವೆ ಎಂದು ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್ ಸೂಚಿಸಿದರು.

ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಸ್ಪರ್ಧಾತ್ಮಕ ಪರೀಕ್ಷಾ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಾಳೆ ದಿನಾಂಕ 18ರಂದು ನಗರದ 3 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಮೊದಲ ಅಧಿವೇಶನದಲ್ಲಿ 458 ಅಭ್ಯರ್ಥಿಗಳು ಹಾಗೂ ಎರಡನೇ ಅಧಿವೇಶನದಲ್ಲಿ 1329 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ನಾಡಿದ್ದು ದಿನಾಂಕ 19 ರಂದು ನಗರದ 18 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿದ್ದು, ಮೊದಲ ಅಧಿವೇಶನದಲ್ಲಿ 8000 ಅಭ್ಯರ್ಥಿಗಳು ಹಾಗೂ ಎರಡನೇ ಅಧಿವೇಶನದಲ್ಲಿ 6867 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಆರ್.ಎಂ.ಸಿ. ಲಿಂಕ್ ರಸ್ತೆ, ಬಿ.ಟಿ. ಲೇಔಟ್, ಗುಜರಿ ಲೈನ್, ಬಂಬೂ ಬಜಾರ್, ಮಟ್ಟಿಕಲ್, ಬಿಡಿಓ ಕಛೇರಿ, ಇಮಾಮ್ ನಗರ, ಅಮರಪ್ಪನ ತೋಟ, ಆನೆಕೊಂಡ, ಎಲ್.ಬಿ.ಎಸ್. ನಗರ. ಟಿ.ಸಿ. ಲೇಔಟ್, ಬಿಟಿ ಲೇಔಟ್, ಕೆ.ಆರ್. ರಸ್ತೆ, ಇಮಾಮ್ ನಗರ, ಆನೆಕೊಂಡ, ಐನಳ್ಳಿ ಕಾಂಪೌಂಡ್, ಎಪಿಎಂಸಿ, ಭಾರತ್ ಕಾಲೋನಿ, ಶೇಖರಪ್ಪ ನಗರ ಹೆಚ್.ಕೆ.ಆರ್. ನಗರ, ಕಬ್ಬೂರು ಬಸಪ್ಪ ನಗರ, ಅಣ್ಣಾ ನಗರ, ಬಸಾಪುರ ರಸ್ತೆ, ಗೋಶಾಲೆ, ಪಿ.ಬಿ. ರಸ್ತೆ, ರವಿ ಮಿಲ್ ಹಾಗೂ ಆವರಗೆರೆ, ಹೊನ್ನೂರು, ಐಗೂರು, ಮಲ್ಲಶೆಟ್ಟಿಹಳ್ಳಿ, ತೋಳಹುಣಸೆ, ದಾವಣಗೆರೆ ವಿಶ್ವವಿದ್ಯಾಲಯ ಸುತ್ತಮುತ್ತಲಿನ ಗ್ರಾಮಗಳು ಹಾಗೂ ವಿನೋಬನಗರ 2ನೇ ಮೇನ್, ಜೊಳ್ಳಿ ಕಾಂಪೌಂಡ್, ಪಿಸಾಳೆ ಕಾಂಪೌಂಡ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# 30 ರವರೆಗೆ ಭದ್ರಾ ನೀರು ಹರಿಸುವಂತೆ ಡಿಸಿಎಂಗೆ ನಂದಿಗಾವಿ ಶ್ರೀನಿವಾಸ್ ಮನವಿ



ಹರಿಹರ, ನ.17 - ತಾಲ್ಲೂಕಿನ ಭದ್ರಾ ಅಚ್ಚುಕಟ್ಟು ಪ್ರದೇಶದ ನೀರಾವರಿ ಮೂಲದ ಬೆಳೆಗಳಿಗೆ ನವೆಂಬರ್ 30 ರವರೆಗೆ ನಿರಂತರವಾಗಿ ನೀರು ಹರಿಸುವಂತೆ ಕೋರಿ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರನ್ನು ತಾಲ್ಲೂಕಿನ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಭೇಟಿ ಮಾಡಿ ಮನವಿ ಸಲ್ಲಿಸಿದರು.

ಮನವಿಗೆ ಡಿ.ಸಿ.ಎಂ. ಡಿ.ಕೆ. ಶಿವಕುಮಾರ್ ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದಿರುವ ಶ್ರೀನಿವಾಸ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮತ್ತು ಮಧು ಬಂಗಾರಪ್ಪ ಅವರನ್ನೂ ಸಹ ಭೇಟಿ ಮಾಡಿ ಮನವಿ ಮಾಡಿರುವುದಾಗಿ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಎನ್‌ಎಫ್‌ಐಡಬ್ಲ್ಯು ಮಹಿಳೆಯರ ಜಿಲ್ಲಾ ಸಮ್ಮೇಳನ

ರಾಷ್ಟ್ರೀಯ ಮಹಿಳಾ ಒಕ್ಕೂಟದ ಎನ್‌ಎಫ್‌ಐಡಬ್ಲ್ಯು ದಾವಣಗೆರೆ ಜಿಲ್ಲಾ ಸಮ್ಮೇಳನವು ಇಂದು ನಡೆಯಲಿದೆ ಎಂದು ಎನ್‌ಎಫ್‌ಐಡಬ್ಲ್ಯು ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಎಸ್ ಎಸ್ ಮಲ್ಲಮ್ಮ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 11.30ಕ್ಕೆ ಕಾಂ. ಪಂಪಾಪತಿ ಭವನದಲ್ಲಿ ನಡೆಯುವ ಎನ್‌ಎಫ್‌ಐಡಬ್ಲ್ಯು ಮಹಿಳಾ ಜಿಲ್ಲಾ ಸಮ್ಮೇಳನವನ್ನು ರಾಜ್ಯಾಧ್ಯಕ್ಷರಾದ ಕಾಂ ಎ. ಜ್ಯೋತಿ ಉದ್ಘಾಟಿಸುವರು. ಎನ್‌ಎಫ್‌ಐಡಬ್ಲ್ಯು ಜಿಲ್ಲಾ ಮುಖಂಡರುಗಳಾದ ಎಂ.ಬಿ. ಶಾರದಮ್ಮ, ವಿಶಾಲಾಕ್ಷಿ, ಗಾಯತ್ರಿ, ಉಮಾ, ಸರೋಜಾ, ರುದ್ರಮ್ಮ, ಜ್ಯೋತಿಲಕ್ಷ್ಮಿ, ವಿಮಲಾಕ್ಷಿ, ಚೆನ್ನಮ್ಮ, ಯಶೋಧ, ಅಕ್ಕಮ್ಮ ಸೇರಿದಂತೆ ಇತರೆ ಮುಖಂಡರು ಭಾಗವಹಿಸುವರು.

ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು, ಎಐಟಿಯುಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಜಿ. ಉಮೇಶ್, ಹಿರಿಯ ಕಾರ್ಮಿಕ ಮುಖಂಡರಾದ ಕಾಂ. ಆನಂದರಾಜ್ ಅತಿಥಿಗಳಾಗಿ ಆಗಮಿಸುವರು. ಇಪ್ಟಾ ಸಂಗಾತಿಗಳು ಜಾಗೃತಿ ಗೀತೆಗಳನ್ನು ಹಾಡುವುದರ ಮೂಲಕ ಸಮ್ಮೇಳನಕ್ಕೆ ಶುಭ ಕೋರುವರು.

# ಪಟಾಕಿ ವಿಷವುಣಿಸದ ಪುಣ್ಯಾತ್ಮರಿಗೆ ಸಾವಿರ ಸಾವಿರ ನಮನಗಳು..!

ದೆಹಲಿಯ ವಾಯು ಮಾಲಿನ್ಯ, ಬೆಂಗಳೂರಿನ ಪಟಾಕಿ ತಯಾರಿಕಾ ಘಟಕದಿಂದಾದ ಸಾವು- ನೋವುಗಳು ಮತ್ತು ಅಲ್ಲಲ್ಲಿ ನಡೆಯುವ ಪಟಾಕಿ ದುರಂತಗಳನ್ನು ಎಚ್ಚರಿಕೆಯಿಂದ ಗಮನಿಸಿದ ದಾವಣಗೆರೆಯ 75% ರಿಂದ 80% ನಾಗರಿಕರು (ನಗರದ ಸರ್ವಜನರ ಆರೋಗ್ಯ ಕಾಳಜಿ ಉಳ್ಳವರು) ಪಟಾಕಿಯ ವಿಷವುಣಿಸಿಲ್ಲ. ಇವರ ಪರಿಸರ ಪ್ರಜ್ಞೆ, ಪಕ್ಷಿಗಳ ಮೇಲಿನ ಪ್ರೀತಿ, ವಾಯು ಮಾಲಿನ್ಯ ಮತ್ತು ಶಬ್ದ ಮಾಲಿನ್ಯದ ಬಗ್ಗೆ ಅರಿವು ಇವೆಲ್ಲವುಗಳಿಗಾಗಿ ಕರುಣಾ ಟ್ರಸ್ಟ್ ದಾವಣಗೆರೆಯ 6 ಲಕ್ಷ ಜನರ ಪರವಾಗಿ ಕೃತಜ್ಞತೆ, ಧನ್ಯವಾದಗಳನ್ನು ಹೃತ್ಪೂರ್ವಕವಾಗಿ ಅರ್ಪಿಸುತ್ತದೆ.

ನಮ್ಮ ಅಕ್ಕ-ಪಕ್ಕ, ಸುತ್ತ-ಮುತ್ತ ಇನ್ನೂ 25% ಜನ ಪಟಾಕಿ ಸಿಡಿಸಿದ್ದಾರೆ. ಅವರಿಗೆ ಅತ್ಯಂತ ಪ್ರೀತಿ ಪೂರ್ವಕವಾಗಿ, ವಿನಮ್ರತೆಯಿಂದ ಕೈ ಮುಗಿದು, ಮುಂದಿನ ವರ್ಷವಾದರೂ ಪಟಾಕಿ ವಿಷವುಣಿಸದಿರಲು ಕೇಳಿಕೊಳ್ಳೋಣ. ಪಟಾಕಿ ಸುಡುವುದರಿಂದಾಗುವ ದುಷ್ಪರಿಣಾಮಗಳನ್ನು ಅರಿತಿರುವ ವಿದ್ಯಾವಂತರೂ, ನಾಗರಿಕರು ಹಾಗೂ ಸಜ್ಜನರು ಆದ ಈ 25% ಜನರಿಗೆ ಪಟಾಕಿ ದುಷ್ಪರಿಣಾಮಗಳು ಗೊತ್ತೇ ಇದೆ. ಗೊತ್ತಿದ್ದೂ ತಪ್ಪು ಮಾಡುವುದು ಸಾಮಾಜಿಕ ಅನ್ಯಾಯ. ಪಟಾಕಿ ಹೊಡೆಯುವವರಿಗೆ ಮೊದಲು ಅವರ ಕುಟುಂಬದ ಆರೋಗ್ಯದ ಮೇಲೆಯೇ ಕರುಣೆಯಿರಲಿ ಹಾಗೂ ಅಕ್ಕ-ಪಕ್ಕದವರ ಮೇಲೆ ಕರುಣೆ, ಮೈತ್ರಿ ಇರಲಿ. ರಾತ್ರಿ 10 ಗಂಟೆಯ ಮೇಲೆ ಪಟಾಕಿ ಹೊಡೆಯುವಂತಿಲ್ಲವಾದರು ಕೆಲವು ಜನ ಅದನ್ನು ಲೆಕ್ಕಿಸದೆ ಪಟಾಕಿ ಹೊಡೆದರು.

ಪೊಲೀಸ್ ಇಲಾಖೆ 9.30ರಿಂದಲೇ ಎಚ್ಚರಿಸಬಹುದಿತ್ತು. ಕೆಲವರ ಮೇಲೆಯಾದರೂ ಕಾನೂನು ಕ್ರಮ ಕೈಗೊಂಡಿದ್ದರೆ, ಕರ್ನಾಟಕ ಸರ್ಕಾರ ಮಾಡಿರುವ ಈ ಕಾನೂನಿಗೆ ಬೆಲೆ ಬರುತ್ತಿತ್ತು. ಅನುಷ್ಠಾನವಾಗದ ಕಾನೂನು ನಿಷ್ಪ್ರಯೋಜಕ. ಮುಂದಿನ ವರ್ಷವಾದರೂ ಜಿಲ್ಲಾಡಳಿತ, ಮುನ್ಸಿಪಲ್ ಕಮೀಷನರ್ ಮತ್ತು ಅಧ್ಯಕ್ಷರು ಪಟಾಕಿ ಹಚ್ಚದಂತೆ ಇನ್ನೂ ಹೆಚ್ಚಿನ ಜಾಗೃತಿ ಮೂಡಿಸಲಿ. ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಕೈಗೊಳ್ಳಲಿ. ಈಗಾಗಲೇ ಕರ್ನಾಟಕದ ಅತೀ ಹೆಚ್ಚು ವಾಯುಮಾಲಿನ್ಯ ಮಾಡುವ 6 ನಗರಗಳಲ್ಲಿ ದಾವಣಗೆರೆಯೂ ಒಂದು. ಇಲ್ಲಿ ವಾಹನ ಗಳಿಂದಾಗುವ ಮಾಲಿನ್ಯವೇ ಅಪಾಯಕಾರಿ ಮಟ್ಟಕ್ಕಿಂತ ಹೆಚ್ಚಾಗಿದೆ.

ಕತ್ತಲೆಯಿಂದ ಬೆಳಕಿನಡೆಗೆ ಹೋಗಲು ನಾವು ಅಮಾವಾಸ್ಯೆ ಮುಗಿದ ಮಾರನೇ ದಿವಸ ದೀಪಾವಳಿಯನ್ನು ಆಚರಿಸುತ್ತೇವೆ. ಆದರೆ ಇಂದು ಕೇವಲ ಪಟಾಕಿಗಳನ್ನು ಸುಟ್ಟು, ಅದರ ವಿಷಕಾರಕ ಅನಿಲವನ್ನು ಸೇವಿಸಿ, ಅತೀ ಶಬ್ದ ಮಾಲಿನ್ಯವನ್ನುಂಟು ಮಾಡುವ ದುಂದುವೆಚ್ಚದ ದೀಪಾವಳಿಯನ್ನು ಆಚರಿಸುತ್ತಿದ್ದೇವೆ. ಮಕ್ಕಳಲ್ಲಿ ಹಿರಿಯರು ಅರಿವು ಮೂಡಿಸುವುದರ ಮೂಲಕ ಕಷ್ಟಪಟ್ಟು ದುಡಿದ ಹಣವನ್ನು ಬೂದಿಯಾಗಿಸಿ, ಮಾಲಿನ್ಯಗಳಿಂದ ಆರೋಗ್ಯ ಕೆಡಿಸಿಕೊಳ್ಳುವುದನ್ನು ತಪ್ಪಿಸಬಹುದೆಂಬ ನಂಬಿಕೆಯನ್ನು ನಗರದ 6 ಲಕ್ಷ ನಾಗರಿಕರು ಹೊಂದೋಣವೇ?

- ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ.

MEGHA BUSSINESS OPPORTUNITY MEET
Teachers, Doctors, Business Men & NRI
START THE SECOND INNINGS OF YOUR LIFE WITH A UNIQUE BUSINESS OPPORTUNITY
for Retired / VRS, Senior, Citizens & House Wives
On 21.11.2023 Tuesday
Time : 10 AM to 1 PM
FOLLOWED BY LUNCH
ADVANTAGES
Fixed Salary
Unlimited Income
Part-time/ Full-time Opportunity
PF & ESI Benefits
International Conventions
* Flexible Work Timings
* Rewards & Recognitions
MOVE TO THE NEXT LEVEL
* Zero Investment
* Be a Part of Noble Profession
START YOUR JOURNEY FROM HOMEMAKER TO BUSINESS WOMEN
NO REGISTRATION FEE
ZERO INVESTMENT
IDEAL AGE 35 TO 75 YEARS
" Please note its's not a MLM Nor a Product Marketing or Sales "
venue : Chetana Hotel, Prince Hall, 3rd Floor, AVK College Road, Davanagere.
FOR REGISTRATION CALL
98447 45856
98867 93942

# ದೇಶದಲ್ಲಿ ಹೆಚ್ಚುತ್ತಿರುವ ಸೌರಶಕ್ತಿ ಬಳಕೆ : ಪಾರ್ಥಸಾರಥಿ

ದಾವಣಗೆರೆ, ನ. 17- ಭಾರತದಲ್ಲಿ ಸೌರಶಕ್ತಿ ಬಳಕೆ ಹೆಚ್ಚುತ್ತಿದ್ದು, ಸೌರಶಕ್ತಿ ಬಳಸುವ ವಿಶ್ವದ ಅಗ್ರಮಾನ್ಯ 10 ದೇಶಗಳ ಪೈಕಿ ಭಾರತವೂ ಒಂದು ಎಂದು ಸೆಲ್ಕೋ ಸೋಲಾರ್ ಲೈಟ್ ಪ್ರೈ.ಲಿ. ಚೀಫ್ ಮ್ಯಾನೇಜರ್ ಪಾರ್ಥಸಾರಥಿ ಹೇಳಿದರು.

ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಹಾಗೂ ಸೆಲ್ಕೋ ಸೋಲಾರ್ ಲೈಟ್ ಪ್ರೈ.ಲಿ. ಇವರ ವತಿಯಿಂದ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಚೇರಿ ಸಭಾಂಗಣದಲ್ಲಿ ಇಂದು ಹಮ್ಮಿಕೊಂಡಿದ್ದ ಸೌರಶಕ್ತಿ ಬಳಕೆಯ ಮಾಹಿತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.




ಸೂರ್ಯನ ಬಿಸಿಲು ಮತ್ತು ಉಷ್ಣತೆಯನ್ನೇ ಬಳಸಿಕೊಂಡು ಸೌರ ವಿದ್ಯುತ್ ಉತ್ಪಾದನೆ ಮಾಡಲಾಗುತ್ತದೆ. ಸೌರ ವಿದ್ಯುತ್ ಪರಿಸರವನ್ನು ಸ್ವಚ್ಛವಾಗಿಡುವ ಜೊತೆಗೆ ವಿದ್ಯುತ್ ಬಿಲ್ ಉಳಿಕೆಗೂ ನೆರವಾಗಲಿದೆ ಎಂದರು.

ಮನೆಯ ಮೇಲೆ ಇರುವ ಜಾಗದಲ್ಲಿಯೇ ನಿಮಗೆ ಬೇಕಾದಷ್ಟು ವಿದ್ಯುತ್ ಉತ್ಪಾದನೆ ಮಾಡಲು ಸಾಧ್ಯವಿದೆ. ಸರ್ಕಾರ ಕೂಡ ಸಹಾಯಧನ ನೀಡುವ ಮೂಲಕ ಉತ್ತೇಜನ ನೀಡುತ್ತಿದೆ ಎಂದು ಮಾಹಿತಿ ನೀಡಿದರು.

ಸೋಲಾರ್ ವಿದ್ಯುತ್ ಉತ್ಪಾದನೆಯಿಂದ ದೇಶದ ವಿದ್ಯುತ್ ಕೊರತೆಯನ್ನು ನೀಗಿಸಲು ಸಾಧ್ಯವಿದೆ. ಪ್ರತಿ ಮನೆಗಳಲ್ಲೂ ಸೋಲಾರ್ ಅಳವಡಿಕೆಗೆ ಅವಕಾಶವಿರುತ್ತೆ. ಇದರ ಸದುಪಯೋಗ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಸೌರಶಕ್ತಿಯನ್ನು ಪ್ರತಿ ಮನೆಯಲ್ಲಿ ಬಳಸುವ ಮೂಲಕ ಸ್ವಾವಲಂಬನೆ ಸಾಧಿಸಬಹುದು ಎಂದು ಹೇಳುವ ಮೂಲಕ ಸೋಲಾರ ಬಳಕೆಯ ಸಂಪೂರ್ಣ ಮಾಹಿತಿ ನೀಡಿದರು.

ಸೋಲಾರ ಬಳಕೆಯ ಬಗ್ಗೆ ಕೆಲವು ನಿರ್ವಹಣೆಯ ನಿಯಮಗಳಿವೆ. ಸೌರಶಕ್ತಿಯ ಅಳವಡಿಕೆ ಕುರಿತು ಹಾಜರಿದ್ದ ಅನೇಕ ಗಣ್ಯರು ತಮ್ಮಲ್ಲಿ ಮೂಡಿದ ಸಂಶಯಗಳನ್ನು ಬಗೆಹರಿಸಿಕೊಂಡರು.

ಚಿತ್ರದುರ್ಗ ಸೆಲ್ಕೋ ಸೋಲಾರ್ ಪ್ರೈ.ಲಿ. ಹಿರಿಯ ವ್ಯವಸ್ಥಾಪಕ ಮಂಜುನಾಥ್ ಭಾಗವತ್ ಸೋಲಾರ್ ಬಳಕೆ ಕುರಿತು ಮಾಹಿತಿ ನೀಡಿದರು.

ಮಾಜಿ ಶಾಸಕ ಮಹಿಮಾ ಜೆ. ಪಟೇಲ್, ಕರುಣಾ ಜೀವ ಕಲ್ಯಾಣ ಟ್ರಸ್ಟ್ ಸಂಸ್ಥಾಪಕ ಶಿವನಕೆರೆ ಬಸವಲಿಂಗಪ್ಪ, ಉದಯಕುಮಾರ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಗೃಹಲಕ್ಷ್ಮಿ ಯೋಜನೆಗೆ ಚಾಮುಂಡೇಶ್ವರಿ ಸಹ ಸೇರ್ಪಡೆ: ದಿನೇಶ್ ಗೂಳಿಗೌಡ



ಬೆಂಗಳೂರು, ನ. 17 – ನಾಡದೇವತೆ ಚಾಮುಂಡೇಶ್ವರಿ ದೇವಿ ಸಹ ಕರ್ನಾಟಕ ಸರ್ಕಾರದ ಗೃಹ ಲಕ್ಷ್ಮಿ ಯೋಜನೆಗೆ ಸೇರ್ಪಡೆಯಾಗಲಿದ್ದಾರೆ ಎಂದು ಕಾಂಗ್ರೆಸ್ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

ಗೃಹಲಕ್ಷ್ಮಿ ಯೋಜನೆಯಡಿ ಪ್ರತಿ ತಿಂಗಳು ದೇವಿಗೆ 2 ಸಾವಿರ ರೂ.ಗಳನ್ನು ಪಾವತಿಸುವಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಿಕೊಂಡಿದ್ದೆ ಎಂದು ಗೂಳಿಗೌಡ ಹೇಳಿದ್ದಾರೆ.

ಈ ಪ್ರಸ್ತಾಪಕ್ಕೆ ಶಿವಕುಮಾರ್ ಸಮ್ಮತಿಸಿದ್ದಾರೆ. ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರಿಗೆ ಸೂಚನೆ ನೀಡಿದ್ದಾರೆ ಎಂದು ಗೂಳಿಗೌಡ ಹೇಳಿದ್ದಾರೆ.

ಕಳೆದ ಆಗಸ್ಟ್ 30ರಂದು ರಾಜ್ಯ ಸರ್ಕಾರ ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡಿತ್ತು.

ಈ ಯೋಜನೆಯ ಅನ್ವಯ ಮನೆಯೊಡತಿಗೆ ಪ್ರತಿ ತಿಂಗಳು 2 ಸಾವಿರ ರೂ.ಗಳನ್ನು ನೀಡಲಾಗುತ್ತದೆ.

ಯೋಜನೆಗೆ ಮೈಸೂರಿನಲ್ಲಿ ಚಾಲನೆ ನೀಡಲಾಗಿತ್ತು ಹಾಗೂ ಮೊದಲ ಕಂತನ್ನು ತಾಯಿ ಚಾಮುಂಡೇಶ್ವರಿ ದೇವಾಲಯಕ್ಕೆ ಅರ್ಪಿಸಲಾಗಿತ್ತು.





ಅಭಿವೃದ್ಧಿ ಕಾಮಗಾರಿಗಳ ಗುದ್ದಲಿ ಪೂಜೆ ಸಮಾರಂಭ

ದಾವಣಗೆರೆ ಮಹಾನಗರ ಪಾಲಿಕೆ
15ನೇ ಹಣಕಾಸಿನ ಅನುದಾನದಡಿಯಲ್ಲಿ
15ನೇ ವಾರ್ಡ್ ವಿನೋಬನಗರ
4ನೇ ಮೇನ್, 2ನೇ ಕ್ರಾಸ್‌ನಲ್ಲಿ
ರೂ. 85 ಲಕ್ಷ ರೂ. ವೆಚ್ಚದಲ್ಲಿ
ಸಿ.ಸಿ. ರಸ್ತೆ, ಸಿ.ಸಿ. ಡ್ರೈನ್ ಕಾಮಗಾರಿಗಳ
ಗುದ್ದಲಿ ಪೂಜೆ ಸಮಾರಂಭ

ದಿನಾಂಕ : 18-11-2023ರ ಶನಿವಾರ, ಸಮಯ : ಮಧ್ಯಾಹ್ನ 1.30 ಕ್ಕೆ

ಉದ್ಘಾಟನೆ : ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು
ಗಣಿ, ಭೂ ವಿಜ್ಞಾನ, ತೋಟಗಾರಿಕೆ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ.

ಈ ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ ಎಲ್ಲಾ ಮುಖಂಡರಿಗೂ, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಿಗೂ, ಅಧಿಕಾರಿಗಳಿಗೂ, ಅಭಿಮಾನಿಗಳಿಗೂ ಹೃದಯಪೂರ್ವಕ ಸ್ವಾಗತ... ಸುಸ್ವಾಗತ...



ಶ್ರೀಮತಿ ಆಶಾ ಉಮೇಶ್
ಮಹಾನಗರ ಪಾಲಿಕೆ ಸದಸ್ಯರು
15ನೇ ವಾರ್ಡ್

ಉಮೇಶ್
ಕಾಂಗ್ರೆಸ್ ಮುಖಂಡರು
15ನೇ ವಾರ್ಡ್

ವಿನಾಯಕ
15ನೇ ವಾರ್ಡ್
ಕಾಂಗ್ರೆಸ್ ಅಧ್ಯಕ್ಷರು

ಗುತ್ತಿಗೆದಾರರು : ✦ ರಾಕೇಶ್ ✦ ವೆಂಕಟೇಶ್ ✦ ಸಿದ್ದೇಶ್


# ಕಲ್ಬುರ್ಗಿ, ಮಂಗಳೂರಿಗೆ ಸ್ಲೀಪರ್ ಪಲ್ಲಕ್ಕಿ ಸಾರಿಗೆ



ದಾವಣಗೆರೆ, ನ. 17- ದಾವಣಗೆರೆ ಭಾಗದ ಪ್ರಯಾಣಿಕರ ಅನುಕೂಲಕ್ಕಾಗಿ ಕಲ್ಬುರ್ಗಿ ಮತ್ತು ಮಂಗಳೂರು ಜಿಲ್ಲೆಗಳಿಗೆ ಹವಾ ನಿಯಂತ್ರಿತ ರಹಿತ ಸ್ಲೀಪರ್ ಪಲ್ಲಕ್ಕಿ ಸಾರಿಗೆ ಸೌಕರ್ಯವನ್ನು ಕಲ್ಪಿಸಲಾಗಿದೆ.

**ದಾವಣಗೆರೆ-ಕಲ್ಬುರ್ಗಿ:** ದಾವಣಗೆರೆಯಿಂದ ರಾತ್ರಿ 7.15 ರಿಂದ ಹೊರಟು ಹರಿಹರ, ಹರಪನಹಳ್ಳಿ, ಹೊಸಪೇಟೆ, ಗಂಗಾವತಿ, ಲಿಂಗಸೂರು ಮಾರ್ಗವಾಗಿ ಬೆಳಿಗ್ಗೆ 5.10 ಗಂಟೆ ಕಲ್ಬುರ್ಗಿ ತಲುಪುವುದು. ಕಲ್ಬುರ್ಗಿಯಿಂದ ರಾತ್ರಿ 8 ಗಂಟೆಗೆ ಹೊರಟು ಅದೇ ಮಾರ್ಗವಾಗಿ ಬೆಳಿಗ್ಗೆ 5.25 ಕ್ಕೆ ದಾವಣಗೆರೆ ತಲುಪಲಿದೆ.

**ದಾವಣಗೆರೆ-ಮಂಗಳೂರು:** ದಾವಣಗೆರೆಯಿಂದ ರಾತ್ರಿ 9.30 ರಿಂದ ಹೊರಟು ಹರಿಹರ, ಶಿವಮೊಗ್ಗ, ಉಡುಪಿ ಮಾರ್ಗವಾಗಿ ಬೆಳಿಗ್ಗೆ 6.30 ಗಂಟೆಗೆ ಮಂಗಳೂರು ತಲುಪುವುದು. ಮಂಗಳೂರಿನಿಂದ ರಾತ್ರಿ 9.30 ಕ್ಕೆ ಅದೇ ಮಾರ್ಗವಾಗಿ ಹೊರಟು ಬೆಳಿಗ್ಗೆ 6.30 ಗಂಟೆಗೆ ದಾವಣಗೆರೆ ತಲುಪಲಿದೆ. ಮುಂಗಡ ಬುಕ್ಕಿಂಗ್ ಮಾಡಲು ಕೌಂಟರ್ ಮತ್ತು ಆನ್‌ಲೈನ್ ksrtc.karnataka.gov.in ಮೂಲಕ ಬುಕ್ಕಿಂಗ್ ಮಾಡಬಹುದೆಂದು ಕರಾರಸಾ ನಿಗಮ ದಾವಣಗೆರೆ ವಿಭಾಗೀಯ ನಿಯಂತ್ರಣಾಧಿಕಾರಿ ಸಿದ್ದೇಶ್ ಹೆಬ್ಬಾರ್ ತಿಳಿಸಿದ್ದಾರೆ.

# ಮನೆಯಿಂದಲೇ ಪಿಂಚಣಿದಾರರು ಜೀವನ ಪ್ರಮಾಣ ಪತ್ರ ಪಡೆಯಲು ಕರೆ

ದಾವಣಗೆರೆ, ನ.17 - ಭಾರತೀಯ ಅಂಚೆ ಇಲಾಖೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್‌ಗಳ ಮೂಲಕ ಮನೆ ಬಾಗಿಲಿನಲ್ಲೇ ಪಿಂಚಣಿದಾರರು ಸುಲಭವಾಗಿ ಡಿಜಿಟಲ್ ಜೀವನ ಪ್ರಮಾಣ ಪತ್ರವನ್ನು ಸಲ್ಲಿಸಲು ವ್ಯವಸ್ಥೆ ಕಲ್ಪಿಸಲಾಗಿದೆ.

ಪಿಂಚಣಿದಾರರು ಅಥವಾ ಕುಟುಂಬದ ಪಿಂಚಣಿದಾರರು ತಮ್ಮ ಹತ್ತಿರದ ಅಂಚೆ ಕಚೇರಿಯಲ್ಲಿ ಅಥವಾ ಪೋಸ್ಟ್ ಮ್ಯಾನ್ ಮೂಲಕ ರೂ.70 ಶುಲ್ಕ ನೀಡುವುದರೊಂದಿಗೆ ಕೆಲವೇ ನಿಮಿಷಗಳಲ್ಲಿ ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆ, ಪಿಪಿಓ ಸಂಖ್ಯೆ ಮತ್ತು ಪಿಂಚಣಿದಾರರ ಬ್ಯಾಂಕ್ ಖಾತೆಯ ವಿವರಗಳೊಂದಿಗೆ ತಮ್ಮ ಬೆರಳಚ್ಚು ವೆರಿಫೈ ಮಾಡಿ ಡಿಜಿಟಲ್ ಜೀವನ ಪ್ರಮಾಣ ಪತ್ರವನ್ನು ಇದೇ ದಿನಾಂಕ 30 ರೊಳಗಾಗಿ ಸಲ್ಲಿಸಲು ಅಂಚೆ ಅಧೀಕ್ಷಕರು ತಿಳಿಸಿದ್ದಾರೆ.

# ರಾಷ್ಟ್ರಮಟ್ಟದ ಪವರ್‌ಲಿಫ್ಟಿಂಗ್ ಸ್ಪರ್ಧೆಗೆ ರಕ್ಷಿತ್ ಆಯ್ಕೆ



ದಾವಣಗೆರೆ, ನ. 17 - ಇದೇ ದಿನಾಂಕ 22 ರಿಂದ 26ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಗೆ ಸ್ಪರ್ಧಿಸಲು ನಗರದ ಶ್ರೀ ಬೀರೇಶ್ವರ ವ್ಯಾಯಾಮ ಶಾಲೆಯ ಕ್ರೀಡಾಪಟು ಮತ್ತು ಶ್ರೀ ಕನ್ನಿಕಾಪರಮೇಶ್ವರಿ ಕೋ.ಆಪರೇಟಿವ್ ಬ್ಯಾಂಕಿನ ಉದ್ಯೋಗಿ ವಿ. ರಕ್ಷಿತ್ ಆಯ್ಕೆಯಾಗಿದ್ದಾರೆ.

# ಕಣ್ಮನ ಸೆಳೆದ ಶಿಲಾಬಾಲಿಕೆ ಛದ್ಮವೇಷ



ದಾಣಗೆರೆ, ನ.17- ತಾಲ್ಲೂಕಿನ ಶ್ಯಾಗಲೆಯ ಕುವೆಂಪು ಪ್ರೌಢ ಶಾಲೆಯಲ್ಲಿ ನಡೆದ ಕಂದಗಲ್ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಬೇಲೂರು ಶಿಲಾಬಾಲಿಕೆ ಛದ್ಮವೇಷ ಧರಿಸಿದ್ದ ಬಾಲಕಿ ಕವಿತಾ ಆಕರ್ಷಣೆಯ ಕೇಂದ್ರ ಬಿಂದುವಾಗಿದ್ದಳು.

ಕೈಯಲ್ಲಿ ವೀಣೆ ಹಿಡಿದು, ಕೊರಳಲ್ಲಿ ಉದ್ದದ ಸರಮಾಲೆ ತೊಟ್ಟು, ತಲೆ ಮೇಲೆ ಕಿರೀಟ ಧರಿಸಿ, ಬೇಲೂರ ವೀಣಾ ಪಾಣಿ ಛದ್ಮ ವೇಷದಲ್ಲಿ ವೇದಿಕೆ ಮೇಲೆ ನಿಂತಿದ್ದ, ಮಳಲಕೆರೆ ಸರ್ಕಾರಿ ಪ್ರೌಢಶಾಲೆ 10ನೇ ತರಗತಿ ವಿದ್ಯಾ ರ್ಥಿನಿ ಬಿ.ಎಸ್. ಕವಿತಾ ಕಲಾವಂತಿಕೆಗೆ ಪ್ರೇಕ್ಷಕರು ಅಚ್ಚರಿಗೊಂಡರು. ಸದ್ಯ, ಈ ಬಾಲಕಿ ತಾಲ್ಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ.

# ಕಾಂಗ್ರೆಸ್ ಆಹ್ವಾನ ತಳ್ಳಿ ಹಾಕಿದ ಜಿ. ಟಿ. ದೇವೇಗೌಡ



ಬೆಂಗಳೂರು, ನ. 17 - ಕಾಂಗ್ರೆಸ್ ಪಕ್ಷಕ್ಕೆ ಬರುವಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೀಡಿದ್ದ ಆಹ್ವಾನವನ್ನು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಹಾಗೂ ಶಾಸಕ ಜಿ.ಟಿ. ದೇವೇಗೌಡ ನಯವಾಗಿ ತಳ್ಳಿಹಾಕಿದ್ದಾರೆ. ಬಿಜೆಪಿ ಶಾಸಕ ಸೋಮಶೇಖರ್ ಜೊತೆಗೂಡಿ ಗೌಡರನ್ನು ಕಳೆದ 2 ದಿನಗಳ ಹಿಂದೆ ಶಿವಕುಮಾರ್ ಭೇಟಿ ಮಾಡಿ ಪಕ್ಷಕ್ಕೆ ಆಹ್ವಾನ ನೀಡಿದ್ದರು. ಭೇಟಿಯ ಬಗ್ಗೆ ಜಿ.ಟಿ. ಇಂದು ಮಾಧ್ಯಮದ ಮುಂದೆ ಸ್ಪಷ್ಟನೆ ನೀಡಿ, ಸದಾಶಿವನಗರದ ತಮ್ಮ ನಿವಾಸಕ್ಕೆ ಶಿವಕುಮಾರ್ ಬಂದಿದ್ದು ನಿಜ, ಪಕ್ಷಕ್ಕೆ ಸೇರಲು ಈಗಲೂ ಅವಕಾಶವಿದೆ, ಮನಸ್ಸು ಮಾಡಿ ಎಂದರು. ನಮ್ಮದೇ ಸರ್ಕಾರ ಇದೆ, ಅಧಿಕಾರದ ಅವಕಾಶ ಸಿಗಲಿದೆ ಎಂದೂ ಹೇಳಿದರು. ಇದನ್ನು ನಿನಗೇ ಬಿಟ್ಟಿದ್ದೇನೆ, ನಾನು ಒತ್ತಾಯ ಮಾಡುವುದಿಲ್ಲ ಎಂದೂ ತಿಳಿಸಿದರು. ನಾನು ಜೆಡಿಎಸ್‌ನ ಕೋರ್ ಕಮಿಟಿ ಅಧ್ಯಕ್ಷನಾಗಿ ಪಕ್ಷ ಕಟ್ಟುತ್ತಿದ್ದೇನೆ, ನಿಮ್ಮಲ್ಲೇ 135 ಜನ ಇದ್ದಾರೆ, ನೀವು ಶಾಸಕರನ್ನು ಸೇರಿಸಿಕೊಳ್ಳುವ ಅಗತ್ಯ ಬರಲ್ಲ ಎಂದು ಹೇಳಿ ಕಳಿಸಿದ್ದೇನೆ ಎಂದರು.

# ಬಿಜೆಪಿ ಶಾಸಕಾಂಗ ಸಭೆಗೆ ಶಾಸಕರ ಗೈರು

ಬೆಂಗಳೂರು, ನ. 17 - ನಗರದ ಐಟಿಸಿ ಗಾರ್ಡೇನಿಯಾ ಹೋಟೆಲ್‌ನಲ್ಲಿ ಶುಕ್ರವಾರ ಸಂಜೆ ಬಿಜೆಪಿ ಶಾಸಕಾಂಗ ಸಭೆಯಲ್ಲಿ ವಿಧಾನಸಭೆಯ ವಿಪಕ್ಷ ನಾಯಕನ ಆಯ್ಕೆ ಮಾಡುವ ಮುನ್ನ ಪಕ್ಷದಲ್ಲಿ ಅಸಮಾಧಾನ ಸ್ಫೋಟಗೊಂಡಿದೆ.

ಮಹತ್ವದ ಶಾಸಕಾಂಗ ಸಭೆಗೆ ಐವರು ಬಿಜೆಪಿ ಶಾಸಕರು ಗೈರಾಗಿದ್ದರು. ಬಿಜೆಪಿ ಹಿರಿಯ ನಾಯಕ ಬಸನ ಗೌಡ ಪಾಟೀಲ್ ಯತ್ನಾಳ್ ಸಭೆ ಆರಂಭಕ್ಕೂ ಮುನ್ನ ಹೊರ ನಡೆದಿದ್ದು, ಅವರೊಂದಿಗೆ ಶಾಸಕ ರಮೇಶ್ ಜಾರಕಿಹೊಳಿ ಅವರೂ ಕಾರಿನಲ್ಲಿ ತೆರಳಿದರು. ಶಾಸಕ ಎಸ್.ಟಿ. ಸೋಮಶೇಖರ್, ಬಾಲಚಂದ್ರ ಜಾರಕಿಹೊಳಿ ಮತ್ತು ಶಿವರಾಂ ಹೆಬ್ಬಾರ್ ಕೂಡ ಗೈರಾಗಿದ್ದಾರೆ.

ನಂತರ ಟ್ವೀಟ್ ಮಾಡಿರುವ ಯತ್ನಾಳ್, 'ನ ದೈನ್ಯಂ, ನ ಪಲಾಯನಂ...' ಓರ್ವ ಯೋಧ ಯಾವುದಕ್ಕೂ ದೂರಲು ಇಲ್ಲವೇ ವಿಷಾದಿಸಲು ಸಾಧ್ಯವಿಲ್ಲ. ಆತನ ಜೀವನವಿಡೀ ಅನಂತ ಸವಾಲುಗಳಿರುತ್ತವೆ. ಸವಾಲುಗಳಲ್ಲಿ ಒಳ್ಳೆಯವು ಇಲ್ಲವೇ ಕೆಟ್ಟವು ಇರುವುದಿಲ್ಲ. ಸವಾಲುಗಳು ಸವಾಲುಗಳಷ್ಟೇ ಎಂದು ಒಗಟಿನ ಧಾಟಿ ಹೇಳಿಕೆ ನೀಡಿದ್ದಾರೆ.


75ನೇ ವರ್ಷದ ಪುಣ್ಯಸ್ಮರಣೆ



ಜನನ: 30-05-1887
ನಿಧನ : 18-11-1948

ದಿ|| ಯಜಮಾನ್ ಕಂದನಕೋವಿ ಬೆಳ್ಳೂಡಿ ಗುರುಸಿದ್ದಪ್ಪನವರು

ಸದಾ ನಿಮ್ಮ ಸ್ಮರಣೆಯಲ್ಲಿ, ಭಕ್ತಿಪೂರ್ವಕ ನಮನಗಳು.

ದಿ|| ಶ್ರೀಮತಿ ಗೌರಮ್ಮ (ತಾಯಿ) ಮತ್ತು
ದಿ|| ಯಜಮಾನ್ ಕಂದನಕೋವಿ ಬೆಳ್ಳೂಡಿ ಬಕ್ಕಪ್ಪನವರ
ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು.


# ರಾಗಿ, ನವಣೆ ಬೆಳೆಯ ಮೌಲ್ಯವರ್ಧನೆ ಬಗ್ಗೆ ತರಬೇತಿ

ದಾವಣಗೆರೆ, ನ.17 - ನಗರದ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಹಾಗು ರಾಷ್ಟ್ರೀಯ ಕೃಷಿ ಮಾರುಕಟ್ಟೆ ಸಂಸ್ಥೆ (ಜೈಪುರ - ರಾಜಸ್ಥಾನ) ಇವರುಗಳ ಸಂಯುಕ್ತಾಶ್ರಯದಲ್ಲಿ 'ರಾಗಿ ಮತ್ತು ನವಣೆ ಬೆಳೆಯ ಮೌಲ್ಯವರ್ಧನೆ, ಪ್ಯಾಕಿಂಗ್, ಬ್ರಾಂಡಿಂಗ್ ಮತ್ತು ಮಾರುಕಟ್ಟೆಯ ಬಗ್ಗೆ ತರಬೇತಿ'ಯನ್ನು ಸ್ಥಳೀಯ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ಇದೇ ದಿನಾಂಕ 20 ರಿಂದ 22ರವರೆಗೆ ಹಾಗು ಇದೇ ದಿನಾಂಕ 23 ರಿಂದ 25ರವರೆಗೆ ನಡೆಯಲಿವೆ.

ನೋಂದಣಿ ಮಾಡಿಕೊಳ್ಳಲು ಕೆವಿಕೆಯ ಕೃಷಿ ವಿಸ್ತರಣಾ ತಜ್ಞ ಜೆ. ರಘುರಾಜ (9449833583) ಅವರನ್ನು ಸಂಪರ್ಕಿಸಬಹುದು.


ನಿಮ್ಮ ಆರೋಗ್ಯಕ್ಕಾಗಿ
ನಮ್ಮ ಕಾಳಜಿಯ ಕೊಡುಗೆ

ನಂಜಪ್ಪ ಹಾಸ್ಪಿಟಲ್ಸ್
ದಾವಣಗೆರೆ

50% ರಿಯಾಯಿತಿ ಹೊರ ರೋಗಿಗಳ ಸಮಾಲೋಚನೆ

10% ರಿಯಾಯಿತಿ
- ಔಷಧಿಗಳ ಮೇಲೆ
- ಒಳರೋಗಿ ದಾಖಲಾತಿಗಳ ಮೇಲೆ

25% ರಿಯಾಯಿತಿ
- ರಕ್ತ ಹಾಗೂ ಇತರೆ ಪರೀಕ್ಷೆಗಳು

20% ರಿಯಾಯಿತಿ
- ಅಲ್ಟ್ರಾಸೌಂಡ್ ಸ್ಕ್ಯಾನ್ (USG)
- ಸಿಟಿ ಸ್ಕ್ಯಾನ್
- ಎಂಡೋಸ್ಕೋಪಿ (ರೋಗನಿರ್ಣಯ ಮತ್ತು ಚಿಕಿತ್ಸೆ)
- ಬಯಾಪ್ಸಿ

- ಕ್ಯಾನ್ಸರ್ ಚಿಕಿತ್ಸೆ (ಕೀಮೋಥೆರಪಿ ಇತ್ಯಾದಿ)
- ಕ್ಯಾನ್ಸರ್ ಶಸ್ತ್ರಚಿಕಿತ್ಸೆ
- ಮೆಡಿಕಲ್ ಗ್ಯಾಸ್ಟ್ರೋಎಂಟರಾಲಜಿ
- ನರಶಾಸ್ತ್ರ
- ಸಂಧಿವಾತ
- ಲ್ಯಾಪರೊಸ್ಕೋಪಿಕ್ ಸರ್ಜರಿ
- ಮೂಳೆ ಶಸ್ತ್ರಚಿಕಿತ್ಸೆ
- ಚರ್ಮ ಹಾಗೂ ಸೌಂದರ್ಯ ಶಸ್ತ್ರ
- ಜನರಲ್ ಮೆಡಿಸಿನ್
- ವಿಕಿರಣಶಾಸ್ತ್ರ

ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ.
ಕೊಡುಗೆ ಸೀಮಿತ ಅವಧಿಗೆ ಮಾನ್ಯವಾಗಿರುತ್ತದೆ

ಮಾಗನೂರು ಬಸಪ್ಪ ರಸ್ತೆ (ಹದಡಿ ರಸ್ತೆ), ದಾವಣಗೆರೆ | 08192-260111/7022260111



ಹನ್ನೊಂದನೇ ವರ್ಷದ ಪುಣ್ಯಸ್ಮರಣೆ



ದಿ. ಶ್ರೀ ಆರ್.ಎಲ್. ಹನುಮಂತಪ್ಪನವರು

ಹಿರಿಯ ಕಾರ್ಮಿಕ ಧುರೀಣರು, ನಗರಸಭೆ ಪ್ರಭಾರ ಮಾಜಿ ಅಧ್ಯಕ್ಷರು, ಕುರುಹಿನಶೆಟ್ಟಿ ಸಮಾಜದ ಹಿರಿಯ ಮುಖಂಡರು

ನೀವು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಧರ್ಮಪತ್ನಿ : ಶ್ರೀಮತಿ ರತ್ನಮ್ಮ ಹನುಮಂತಪ್ಪ ಮತ್ತು ಪುತ್ರರು, ಸೊಸೆಯಂದಿರು, ಪುತ್ರಿ, ಅಳಿಯ, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಸಹೋದರರು ಹಾಗೂ ಬಂಧು-ಮಿತ್ರರು.

- ರಕ್ಷಿತಾ ಸ್ಟೀಲ್ಸ್ ಅಂಡ್ ಪೇಂಟ್ಸ್, ನಿಟುವಳ್ಳಿ ಮುಖ್ಯ ರಸ್ತೆ, ದಾವಣಗೆರೆ.
- ಚಾಮುಂಡಿ ಬಾರ್ ಅಂಡ್ ರೆಸ್ಟೋರೆಂಟ್, ಹದಡಿ ರಸ್ತೆ, ದಾವಣಗೆರೆ.
- ದರ್ಶನ್ ಸ್ಟೀಲ್ಸ್ ಅಂಡ್ ಸಿಮೆಂಟ್, ಎಸ್.ಎಸ್. ಆಸ್ಪತ್ರೆ ರಸ್ತೆ, ದಾವಣಗೆರೆ.
- ಆರ್.ಎಲ್. ಹೆಚ್. ರೈಸ್ ಇಂಡಸ್ಟ್ರೀಸ್, ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ.
- ಕಾಕ್ಟೈಲ್ ವೈನ್ಸ್ MRP, ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ.
- ಸ್ಪಿರಿಟ್ಸ್ ವೈನ್ ಶಾಪ್ MRP, ಶಾಮನೂರು ರಸ್ತೆ, ದಾವಣಗೆರೆ.
- ಚಾಮುಂಡಿ ಬಾರ್ ಅಂಡ್ ರೆಸ್ಟೋರೆಂಟ್, ಮಂಡಿಪೇಟೆ, ದಾವಣಗೆರೆ.
- ಸಂತೋಷ್ ಬಾರ್ ಅಂಡ್ ರೆಸ್ಟೋರೆಂಟ್, ಬಸ್ ಸ್ಟ್ಯಾಂಡ್ ಹಿಂಭಾಗ, ದಾವಣಗೆರೆ.
- ಬಣ್ಣದ ಮನೆ ಅಂಡ್ ಪೇಂಟ್ಸ್, ಹದಡಿ ರಸ್ತೆ, ದಾವಣಗೆರೆ.
- ಭಾಗ್ಯಲಕ್ಷ್ಮಿ MRP, ಶಾಮನೂರು ರಸ್ತೆ, ದಾವಣಗೆರೆ.
- ಪೂರ್ಣಿಮಾ ಬಾರ್ ಅಂಡ್ ರೆಸ್ಟೋರೆಂಟ್, ಕೆಟಿಜೆ ನಗರ, ನಿಟುವಳ್ಳಿ ರಸ್ತೆ, ದಾವಣಗೆರೆ.